Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 30-12-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಜಯಕಿರಣ
11. ಸಂಜೆ ವಾಣಿ
12. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

ರೂಪಾಂತರ ಕೊರೊನಾ ವೈರಸ್ ತಗುಲಿರುವುದು ದೃಢ

# 6 ಜನರಲ್ಲಿ 'ಬ್ರಿಟನ್ ವೈರಸ್'

ನವದೆಹಲಿ (ಪಿಟಿಐ): ಬ್ರಿಟನ್‌ನಿಂದ ದೇಶಕ್ಕೆ ವಾಪಸ್ ಬಂದಿರುವ ಆರು ಜನರಲ್ಲಿ ರೂಪಾಂತರ ಕೊರೊನಾ ವೈರಸ್ ಇರುವುದು ದೃಢಪಟ್ಟಿದೆ. ರೂಪಾಂತರ ಕೊರೊನಾವೈರಸ್‌ನ ಸಂರಚನೆಯನ್ನು ಪತ್ತೆ ಮಾಡಲು ಸ್ಥಾಪಿಸಿರುವ ದೇಶದ 10 ಪ್ರಯೋಗಾಲಯಗಳಲ್ಲಿ ನಡೆಸಿದ ಪರೀಕ್ಷೆಯಲ್ಲಿ ಇದು ದೃಢಪಟ್ಟಿದೆ.

ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿನ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಿದ ಮಾದರಿಗಳಲ್ಲಿ, ಮೂರರಲ್ಲಿ ರೂಪಾಂತರ ಕೊರೊನಾವೈರಸ್ ಪತ್ತೆಯಾಗಿದೆ.

ಹೈದರಾಬಾದ್‌ನ ಪ್ರಯೋಗಾಲಯದಲ್ಲಿ ಎರಡು ಮತ್ತು ಪುಣೆಯ ಪ್ರಯೋಗಾಲಯದಲ್ಲಿ 1 ಮಾದರಿಯಲ್ಲಿ ರೂಪಾಂತರ ಕೊರೊನಾವೈರಸ್ ಇರುವುದು ಪತ್ತೆಯಾಗಿದೆ. ಈ ವೈರಸ್ ತಗುಲಿರುವ ಆರು ಮಂದಿಯನ್ನೂ ನಿಗದಿತ ಆಸ್ಪತ್ರೆಗಳ ಐಸೊಲೇಷನ್ ಘಟಕದಲ್ಲಿ ಇರಿಸಲಾಗಿದೆ. ಅವರಿಗೆ ಅಗತ್ಯ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆರೋಗ್ಯ ಸಚಿವಾಲಯವು ಮಾಹಿತಿ ನೀಡಿದೆ.

ಈ ಕಾರಣದಿಂದ ಡಿಸೆಂಬರ್ 9ರಿಂದ 22ರವರೆಗಿನ ಅವಧಿಯಲ್ಲಿ ಬ್ರಿಟನ್‌ನಿಂದ ಮರಳಿದವರನ್ನು ಕಡ್ಡಾಯವಾಗಿ ರೂಪಾಂತರ ಕೊರೊನಾವೈರಸ್ ಸಂರಚನೆ ಪತ್ತೆ ಪರೀಕ್ಷೆಗೆ ಒಳಪಡಿಸಲು ಕೇಂದ್ರ ಆರೋಗ್ಯ ಸಚಿವಾಲಯ ನಿರ್ಧರಿಸಿದೆ.

6ನೇ ಪುಟ ನೋಡಿ

## ಲಕ್ಷಣ ಒಂದೇ, ವೇಗ ಹೆಚ್ಚು

ಕೊರೊನಾ ಸೋಂಕು ಮತ್ತು ಬ್ರಿಟನ್ ರೂಪಾಂತರ ಸೋಂಕಿನ ಲಕ್ಷಣಗಳು ಒಂದೇ. ಆದರೆ, ಕೊರೊನಾ ಸೋಂಕಿಗಿಂತ ವೇಗವಾಗಿ ಇದು ಹರಡುತ್ತದೆ. ಆದರೆ, ರೋಗದ ತೀವ್ರತೆ ಕಡಿಮೆ ಇರುತ್ತದೆ ಎಂದು ವೈದ್ಯರು ಹೇಳುತ್ತಾರೆ.

**ಸೋಂಕಿತರಲ್ಲಿ ಕಂಡುಬರುವ ಲಕ್ಷಣಗಳು:**

- ಪ್ರಾರಂಭದಲ್ಲಿ ಕೆಮ್ಮು, ನೆಗಡಿ, ಜ್ವರ ಕಂಡು ಬರುತ್ತದೆ
- ಅತಿಸಾರ ಅಥವಾ ಭೇದಿ ಶುರುವಾಗುತ್ತದೆ
- ರುಚಿ ಮತ್ತು ವಾಸನೆಯ ಅನುಭವ ಗೊತ್ತಾಗುವುದಿಲ್ಲ
- ಸೋಂಕಿತರ ಚರ್ಮದ ಮೇಲೆ ದದ್ದು ಅಥವಾ ಸಣ್ಣ ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ
- ಸೋಂಕಿನ ತೀವ್ರತೆ ಹೆಚ್ಚಾದಾಗ ಉಸಿರಾಟದ ಸಮಸ್ಯೆ

**ಮುಂಜಾಗ್ರತಾ ಕ್ರಮಗಳೇನು ?**

- ಅಂತರ ಪಾಲನೆ ಮುಖ್ಯ
- ನಿಯಮಿತವಾಗಿ ಕೈ ತೊಳೆಯಬೇಕು
- ಮುಖಗವಸು ಧರಿಸುವುದು ಕಡ್ಡಾಯ
- ಐದಾರು ತಿಂಗಳು ಇದೇ ವ್ಯವಸ್ಥೆ ಮುಂದುವರಿಯಬೇಕು

- ರೂಪಾಂತರ ಕೋವಿಡ್ ಪತ್ತೆಯಾಗಿರುವವರ ಸಂಪರ್ಕಕ್ಕೆ ಬಂದಿರುವವರನ್ನು ಪತ್ತೆ ಮಾಡುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಅವರ ಸಂಪರ್ಕಕ್ಕೆ ಬಂದಿರುವವರನ್ನೂ ರೂಪಾಂತರ ಕೊರೊನಾ ವೈರಸ್ ಸಂರಚನೆ ಪತ್ತೆ ಪರೀಕ್ಷೆಗೆ ಒಳಪಡಿಸಲಾಗುತ್ತದೆ
- ಈ ಪರೀಕ್ಷೆಗಳ ಮೇಲ್ವಿಚಾರಣೆಯನ್ನು ಕೇಂದ್ರ ಆರೋಗ್ಯ ಸಚಿವಾಲಯವು ನಡೆಸುತ್ತಿದೆ. ರಾಜ್ಯ ಸರ್ಕಾರಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಅಗತ್ಯ ನೆರವು ಒದಗಿಸಲಿದೆ
- ಬ್ರಿಟನ್‌ನಿಂದ ಬಂದವರನ್ನು ಪತ್ತೆ ಮಾಡುವ ಮತ್ತು ಅವರ ಸಂಪರ್ಕಕ್ಕೆ ಬಂದವರನ್ನು ಪತ್ತೆ ಮಾಡುವ ಕಾರ್ಯವನ್ನು ಚುರುಕುಗೊಳಿಸಿ ಎಂದು ಕೋವಿಡ್ ನಿರ್ವಹಣೆಗೆ ರಚಿಸಿರುವ ರಾಷ್ಟ್ರೀಯ ಕಾರ್ಯಪಡೆ ಶಿಫಾರಸು ಮಾಡಿದೆ
- ಬ್ರಿಟನ್‌ಗೆ ವಿಮಾನ ಸಂಚಾರ ಸ್ಥಗಿತ ವಿಸ್ತರಣೆಗೆ ಚಿಂತನೆ

ಇನ್ನಷ್ಟು ಸುದ್ದಿಗಳು 3A

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

ಕುಮಾರಸ್ವಾಮಿ ಬಡಾವಣೆ: ಸಾಂಸ್ಥಿಕ ಕ್ವಾರಂಟೈನ್‌ಗೆ ಒಪ್ಪದ ನಿವಾಸಿಗಳು • ಗಂಟಲು ದ್ರವ ಮಾದರಿ ಸಂಗ್ರಹ

# ಸೋಂಕಿತರಿದ್ದ ಅಪಾರ್ಟ್‌ಮೆಂಟ್ ಸೀಲ್‌ಡೌನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 34 ವರ್ಷದ ಮಹಿಳೆ ಮತ್ತು ಅವರ ಆರು ವರ್ಷದ ಮಗಳಿಗೆ ಬ್ರಿಟನ್ ರೂಪಾಂತರ ಸೋಂಕು ತಗುಲಿರುವುದು ದೃಢಪಟ್ಟ ಬೆನ್ನಲ್ಲೇ ಇವರು ನೆಲೆಸಿದ್ದ ವಸಂತನಗರ ವಾರ್ಡ್‌ನ ವಿಠ್ಠಲ ನಗರದ ಅಪಾರ್ಟ್‌ಮೆಂಟ್ ಅನ್ನು ಬಿಬಿಎಂಪಿ ಸೀಲ್‌ಡೌನ್ ಮಾಡಿದೆ.

ಈ ಅಪಾರ್ಟ್‌ಮೆಂಟ್‌ನಲ್ಲಿದ್ದ 37 ನಿವಾಸಿಗಳ ಕ್ವಾರಂಟೈನ್ ಕೇಂದ್ರಗಳಿಗೆ ಹೋಗಲು ನಿರಾಕರಿಸುತ್ತಿದ್ದಂತೆ ಬಿಬಿಎಂಪಿ ಈ ಕ್ರಮ ಕೈಗೊಂಡಿದೆ.

ಎಲ್ಲ ನಿವಾಸಿಗಳ ಗಂಟಲು ದ್ರವದ ಮಾದರಿ ಸಂಗ್ರಹಿಸಲಾಗಿದ್ದು, ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಮಾದರಿ ಕಳುಹಿಸಲಾಗಿದ್ದು, ಎಲ್ಲರ ವರದಿ ನೆಗೆಟಿವ್ ಬಂದಿದೆ.

'ಸೋಂಕಿತರ ಪ್ರಾಥಮಿಕ, ದ್ವಿತೀಯ ಸಂಪರ್ಕಕ್ಕೆ ಬಂದವರನ್ನು ಸಾಂಸ್ಥಿಕ ಕ್ವಾರಂಟೈನ್ ಕೇಂದ್ರಗಳಿಗೆ ಅಂದರೆ ಹೋಟೆಲ್‌ಗಳಿಗೆ ಸ್ಥಳಾಂತರಿಸುವಂತೆ ಸರ್ಕಾರ ಸೂಚನೆ ನೀಡಿದೆ. ಬ್ರಿಟನ್‌ನಿಂದ ಬಂದವರ ಪ್ರಾಥಮಿಕ ಸಂಪರ್ಕಕ್ಕೆ ಒಳಪಟ್ಟ 45 ಮಂದಿಯನ್ನು ಗುರುತಿಸಲಾಗಿದೆ. ಇವರೆಲ್ಲರೂ ಮೊದಲು ಹೋಂ ಕ್ವಾರಂಟೈನ್‌ನಲ್ಲಿದ್ದರು' ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ. ಬಿ.ಕೆ. ವಿಜಯೇಂದ್ರ ಹೇಳಿದರು.

ಈ ವಾರ್ಡ್‌ನ ಮಾಜಿ ಸದಸ್ಯೆ ಶೋಭಾ ಗೌಡ 'ಅಪಾರ್ಟ್‌ಮೆಂಟ್‌ನ ಎಲ್ಲ 37 ನಿವಾಸಿಗಳನ್ನು ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಡಿಸುವಂತೆ ದೆಹಲಿಯಿಂದ ಆದೇಶ ಬಂದಿದೆ ಎಂದು ಬಿಬಿಎಂಪಿ ಆರೋಗ್ಯಾಧಿಕಾರಿ ಹೇಳುತ್ತಾರೆ. ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಟ್ಟರೆ ಸಮಸ್ಯೆಯಾಗುತ್ತದೆ ಎಂದು ನಿವಾಸಿಗಳು ಹೇಳುತ್ತಾರೆ. ಎಲ್ಲರೂ ಆರೋಗ್ಯದಿಂದಿದ್ದು, ಮನೆಗಳಲ್ಲಿಯೇ ಪ್ರತ್ಯೇಕವಾಗಿ ಇರುವುದಾಗಿ ಹೇಳಿದ್ದಾರೆ' ಎಂದು ತಿಳಿಸಿದರು.




ಬೆಂಗಳೂರಿನ ಕುಮಾರಸ್ವಾಮಿ ಬಡಾವಣೆಯ ವಿಠ್ಠಲ ನಗರದಲ್ಲಿ ಸೋಂಕಿತ ತಾಯಿ ಮತ್ತು ಮಗಳು ವಾಸವಿದ್ದ ಐದು ಮಹಡಿಗಳ ಅಪಾರ್ಟ್‌ಮೆಂಟ್ ಅನ್ನು ಸೀಲ್ ಡೌನ್ ಮಾಡಲಾಗಿದೆ. ಅಪಾರ್ಟ್‌ಮೆಂಟ್‌ನ 15 ಮನೆಗಳಲ್ಲಿ 37 ಜನ ವಾಸವಿದ್ದು, ಅವರನ್ನೆಲ್ಲ ಹೋಂ ಕ್ವಾರಂಟೈನ್ ಮಾಡಲಾಗಿದೆ

## ನಂದಿಬೆಟ್ಟ ಪ್ರವೇಶಕ್ಕೆ ನಿರ್ಬಂಧ

ಚಿಕ್ಕಬಳ್ಳಾಪುರ: ಕೊರೊನಾ ಸೋಂಕು ಮತ್ತು ಹೊಸ ವರ್ಷಾಚರಣೆಯ ಸಂದರ್ಭದಲ್ಲಿ ನಡೆಯುವ ಅವಘಡಗಳನ್ನು ತಡೆಯುವ ದೃಷ್ಟಿಯಿಂದ ಜಿಲ್ಲೆಯ ಪ್ರವಾಸಿ ತಾಣವಾದ ನಂದಿಬೆಟ್ಟಕ್ಕೆ ಬುಧವಾರ (ಡಿ.30) ಬೆಳಿಗ್ಗೆ 6ರಿಂದ ಜನವರಿ 2ರ ಬೆಳಿಗ್ಗೆ 6ರ ವರೆಗೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ.

ನಂದಿಬೆಟ್ಟಕ್ಕೆ ಹೊಸ ವರ್ಷಾಚರಣೆಗೆ ಸಾವಿರಾರೂ ಸಂಖ್ಯೆಯಲ್ಲಿ ಪ್ರವಾಸಿಗರು ಬರುವ ಸಾಧ್ಯತೆಗಳಿದ್ದು, ಇದರಿಂದಾಗಿ ರೂಪಾಂತರ ಕೊರೊನಾ ವೈರಸ್ ಸೋಂಕು ಹರಡುವ ಸಾಧ್ಯತೆ ಇದೆ. ಜತೆಗೆ ಜನರು ಮದ್ಯಪಾನ ಮಾಡಿ, ವಾಹನ ಚಾಲನೆ ಮಾಡುವುದರಿಂದ ಅಪಘಾತಗಳಾಗುವ ಸಾಧ್ಯತೆಗಳಿವೆ. ಇದರಿಂದಾಗಿ ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ನಂದಿಬೆಟ್ಟ ಪ್ರವೇಶಕ್ಕೆ ನಿರ್ಬಂಧ ವಿಧಿಸಿ ಜಿಲ್ಲಾಧಿಕಾರಿ ಆರ್.ಲತಾ ಆದೇಶ ಹೊರಡಿಸಿದ್ದಾರೆ.

'ತಾಯಿ ಮತ್ತು ಮಗು ವಾಸವಿದ್ದ ಮನೆ ಅಪಾರ್ಟ್‌ಮೆಂಟ್‌ನ ನಾಲ್ಕನೇ ಮಹಡಿಯಲ್ಲಿದೆ. ನಾವು ಯಾವತ್ತೂ ಅವರೊಂದಿಗೆ ಮಾತನಾಡಿಲ್ಲ. ಮಾಧ್ಯಮಗಳಲ್ಲಿ ಸುದ್ದಿ ಬಂದ ನಂತರವೇ ನಮಗೆ ಅವರ ಬಗ್ಗೆ ತಿಳಿದಿದೆ. ಎಲ್ಲರ ವರದಿ ನೆಗೆಟಿವ್ ಬಂದಿದೆ. ಆದರೂ, ಬಿಬಿಎಂಪಿಯವರು ಬಂದು ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಡಿಸಲು ಮುಂದಾಗಿದ್ದು ಅಚ್ಚರಿ ತಂದಿದೆ' ಎಂದು ನಿವಾಸಿ ಜಯಂತ್ ಕುಮಾರ್ ಹೇಳಿದರು.

ಈಗ ಅಪಾರ್ಟ್‌ಮೆಂಟ್ ನಿವಾಸಿಗಳೆಲ್ಲರೂ ಹೋಂ ಕ್ವಾರಂಟೈನ್‌ಗೆ ಒಳಗಾಗಿದ್ದು, ಇಬ್ಬರು ಪೊಲೀಸರನ್ನು ನಿಯೋಜಿಸಲಾಗಿದೆ. ಪ್ರತಿದಿನ ಅಪಾರ್ಟ್‌ಮೆಂಟ್ ಆವರಣವನ್ನು ಸ್ಯಾನಿಟೈಸ್ ಮಾಡಿಸಲು ಕ್ರಮ ಕೈಗೊಳ್ಳಲಾಗಿದೆ.

'ಯಾವುದೇ ನಿವಾಸಿಗಳನ್ನು ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಪಡಿಸುವುದಿಲ್ಲ. ಸೋಂಕಿತರ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನು ಪತ್ತೆ ಹಚ್ಚಿ ಹೋಮ್ ಕ್ವಾರಂಟೈನ್‌ಗೆ ಒಳಪಡಿಸಲಾಗುವುದು' ಎಂದು ಬೊಮ್ಮನಹಳ್ಳಿ ವಲಯದ ಜಂಟಿ ಆಯುಕ್ತ ಎಂ. ರಾಮಕೃಷ್ಣ ಅವರು ತಿಳಿಸಿದರು.

## ಮಗಳಿಗೆ ಮಾಹಿತಿಯೇ ಇಲ್ಲ: ತಂದೆ ಅಸಮಾಧಾನ

'ಪ್ರಚಲಿತ ಬೆಳವಣಿಗೆಯ ಕುರಿತು ನನ್ನ ಮಗಳನ್ನು ಕತ್ತಲಲ್ಲಿ ಇಡಲಾಗಿದೆ. ರೂಪಾಂತರ ಸೋಂಕು ತಗುಲಿರುವ ಬಗ್ಗೆ ಸರ್ಕಾರ ಅವಳಿಗೆ ಮಾಹಿತಿಯನ್ನೇ ನೀಡಿಲ್ಲ' ಎಂದು ರೂಪಾಂತರ ಸೋಂಕಿಗೆ ಒಳಗಾಗಿರುವ ಮಹಿಳೆಯ ತಂದೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಬ್ರಿಟನ್‌ನಿಂದ ಬಂದ ತಾಯಿ ಮತ್ತು ಅವರ 6 ವರ್ಷದ ಮಗಳಿಗೆ ಸೋಂಕು ತಗುಲಿರುವುದು ದೃಢಪಟ್ಟಿದೆ ಎಂದು ಮಾಧ್ಯಮಗಳಲ್ಲಿ ಸುದ್ದಿ ಪ್ರಸಾರವಾಗುತ್ತಿದ್ದಂತೆ ಮಗಳು ಮತ್ತು ಮೊಮ್ಮಗಳಿಗೆ ಕರೆ ಮಾಡಿದೆ. ನಮಗೆ ಈವರೆಗೂ ಈ ಸುದ್ದಿಯನ್ನು ಯಾರೂ ತಿಳಿಸಿಲ್ಲ ಎಂದು ಮಗಳು ಹೇಳಿದಳು. ಚಿಕಿತ್ಸೆ ನೀಡುತ್ತಿರುವ ವೈದ್ಯರು ಅಥವಾ ಸರ್ಕಾರವು ಈ ಬಗ್ಗೆ ಮೊದಲು ಸೋಂಕಿತರ ಕುಟುಂಬಕ್ಕೆ ಮಾಹಿತಿ ನೀಡಬೇಕಲ್ಲವೆ' ಎಂದು ಅವರು ಪ್ರಶ್ನಿಸಿದರು.

'ಮಾಧ್ಯಮಗಳಿಗೆ ಮೊದಲು ಮಾಹಿತಿ ನೀಡುವ ಈ ನಡೆ ಯಾವ ಸೀಮೆಯ ಶಿಷ್ಟಾಚಾರ' ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

'ಸರ್ಕಾರದ ಮಾರ್ಗಸೂಚಿಯಂತೆ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನು ಸಾಂಸ್ಥಿಕ ಕ್ವಾರಂಟೈನ್‌ನಲ್ಲಿಡಬೇಕು ಎಂದು ಸೂಚನೆ ಬಂದಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳುತ್ತಾರೆ. ನಾನು ಮತ್ತು ನನ್ನ ಪತ್ನಿ ಪ್ರಾಥಮಿಕ ಸಂಪರ್ಕಿತರು. ಆದರೆ, ನಾವಿಬ್ಬರೂ ಎರಡು ಬಾರಿ ಆರ್‌ಟಿ ಪಿಸಿಆರ್ ಪರೀಕ್ಷೆ ಮಾಡಿಸಿಕೊಂಡಿದ್ದು, ಎರಡು ಬಾರಿಯೂ ವರದಿ ನೆಗೆಟಿವ್ ಬಂದಿದೆ. ನಾವು ಆರೋಗ್ಯವಾಗಿಯೂ ಇದ್ದೇವೆ. ಕೋವಿಡ್‌ನ ಯಾವುದೇ ಲಕ್ಷಣಗಳು ನಮಗೆ ಇಲ್ಲ. ನಾವೇಕೆ ಸಾಂಸ್ಥಿಕ ಕ್ವಾರಂಟೈನ್‌ಗೆ ಒಳಗಾಗಬೇಕು' ಎಂದು ಅವರು ಪ್ರಶ್ನಿಸಿದರು.

'ನಮ್ಮನ್ನು ಎಲ್ಲಿಗೆ ಕರೆದೊಯ್ಯುತ್ತಾರೆ, ಅಲ್ಲಿ ಯಾವ ವ್ಯವಸ್ಥೆ ಇರುತ್ತದೆ ಎಂಬುದು ನಮಗೆ ಗೊತ್ತಿಲ್ಲ. ಇದಕ್ಕಾಗಿ ನಾವು ಪ್ರತಿಭಟಿಸಿದೆವು. ಕಟ್ಟಡವನ್ನು ಸೀಲ್‌ಡೌನ್ ಮಾಡಿ. ನಾವು ಕೋವಿಡ್ ಮಾರ್ಗಸೂಚಿಯಂತೆ ನಿಯಮಗಳನ್ನು ಪಾಲಿಸುತ್ತೇವೆ ಎಂದು ತಿಳಿಸಿದ್ದೇವೆ' ಎಂದು ಅವರು ಹೇಳಿದರು.

65 ವರ್ಷದ ಅವರು ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರೆ, 59 ವರ್ಷದ ಅವರ ಪತ್ನಿಗೆ ಮಧುಮೇಹವಿದೆ. 'ನಮ್ಮ ಸಹಾಯಕ್ಕಾಗಿ ಸ್ವಯಂಸೇವಕರೊಬ್ಬರನ್ನು ನಿಯೋಜನೆ ಮಾಡುವುದಾಗಿ ಬಿಬಿಎಂಪಿ ಹೇಳಿದೆ. ಅಗತ್ಯವಿದ್ದರೆ ಅವರನ್ನು ಸಂಪರ್ಕಿಸುತ್ತೇವೆ' ಎಂದು ಅವರು ತಿಳಿಸಿದರು.

## 'ಬೆಂಗಳೂರಿನಲ್ಲಿ ಎರಡನೇ ಅಲೆ ಪ್ರಾರಂಭ?'

'ಜ್ವರ ಮತ್ತು ಉಸಿರಾಟದ ಸಮಸ್ಯೆಯಿಂದ ಬಳಲುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಬಹುತೇಕರಿಗೆ ಚರ್ಮದ ಮೇಲೆ ದದ್ದುಗಳು ಅಥವಾ ಗುಳ್ಳೆಗಳಂತಹ ಲಕ್ಷಣಗಳು ಕಂಡು ಬರುತ್ತಿವೆ. ಕೆಲಸದ ವೇಳೆಯಲ್ಲಿ ಎಲ್ಲ ವೈದ್ಯರು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ಬನ್ನೇರುಘಟ್ಟ ರಸ್ತೆಯಲ್ಲಿರುವ ಖಾಸಗಿ ಆಸ್ಪತ್ರೆಯ ಹಿರಿಯ ವೈದ್ಯರೊಬ್ಬರು ಸಹೋದ್ಯೋಗಿಗಳಿಗೆ ಸಲಹೆ ನೀಡಿದ್ದಾರೆ.

'ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ ಎಂಟು ಜನರನ್ನು ಪರೀಕ್ಷಿಸಿದ್ದೇನೆ. ಅವರೆಲ್ಲರ ಚರ್ಮದ ಮೇಲೆ ದದ್ದುಗಳು ಕಂಡು ಬಂದಿವೆ. ಸಿಟಿ ಸ್ಕ್ಯಾನ್‌ಗೆ ಒಳಪಡಿಸಿದಾಗ ಇದು ಗೊತ್ತಾಗಿದೆ ಎಂದು ಕಿರಿಯ ವೈದ್ಯರೊಬ್ಬರು ನನಗೆ ಸಂದೇಶ ಕಳಿಸಿದ್ದರು' ಎಂದು ಅವರು ಫೇಸ್‌ಬುಕ್ ಪೋಸ್ಟ್‌ನಲ್ಲಿ ಬರೆದಿದ್ದಾರೆ.

'ಇದು ಬೆಂಗಳೂರಿನಲ್ಲಿ ಎರಡನೇ ಅಲೆಯ ಪ್ರಾರಂಭದ ಮುನ್ಸೂಚನೆಯಾಗಿದೆ. ವೈದ್ಯರೆಲ್ಲರೂ ಜಾಗರೂಕರಾಗಿರಬೇಕು. ಸರಿಯಾಗಿ ಮಾಸ್ಕ್ ಧರಿಸಿ, ಅಂತರ ಕಾಪಾಡಿಕೊಳ್ಳಬೇಕು. ನಿಯಮಿತವಾಗಿ ಕೈ ತೊಳೆಯುತ್ತಿರಬೇಕು. ಅತಿಯಾದ ವಿಶ್ವಾಸದಿಂದ ಯಾವುದನ್ನೂ ನಿರ್ಲಕ್ಷಿಸಬೇಡಿ' ಎಂದು ಅವರು ವೈದ್ಯರಲ್ಲಿ ಮನವಿ ಮಾಡಿದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

6 ವರ್ಷದ ಹೆಣ್ಣುಮಗು ಸೇರಿ ಮೂವರಿಗೆ ಯುಕೆ ರೂಪಾಂತರ ಸೋಂಕು • ನಾಪತ್ತೆಯಾದವರ ಶೋಧ ಕಾರ್ಯ

# ರಾಜ್ಯಕ್ಕೂ ಕಾಲಿಟ್ಟ 'ಬ್ರಿಟನ್ ವೈರಸ್'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ 34 ವರ್ಷದ ಮಹಿಳೆ ಮತ್ತು ಅವರ ಆರು ವರ್ಷದ ಮಗಳು ಸೇರಿ ಮೂವರಿಗೆ ಬ್ರಿಟನ್ ರೂಪಾಂತರ ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿದೆ. ಆ ಮೂಲಕ ಹೊಸ ವೈರಸ್ ಕೂಡಾ ರಾಜ್ಯಕ್ಕೆ ಕಾಲಿಟ್ಟಂತಾಗಿದೆ.

ಲಂಡನ್‌ನ ಹೀಥ್ರೂ ನಿಲ್ದಾಣದಿಂದ ಬ್ರಿಟಿಷ್ ಏರ್‌ವೇಸ್ ವಿಮಾನದಲ್ಲಿ (ಬಿಎ0119) ಡಿ.18ರಂದು ಹೊರಟಿದ್ದ ತಾಯಿ ಮತ್ತು ಮಗಳು ಡಿ.19ರ ಬೆಳಿಗ್ಗೆ 5ಕ್ಕೆ ನಗರಕ್ಕೆ ಬಂದಿದ್ದರು. ಮಹಿಳೆಗೆ ಶೀತ ಮಾತ್ರ ಇತ್ತು. ಅವರ ಪತಿ ಮತ್ತು ಮಗಳಿಗೆ ಕೋವಿಡ್‌ನ ಲಕ್ಷಣಗಳಿರಲಿಲ್ಲ. ಮಗುವಿಗೆ ಡಿ.19ರಂದು ಆ್ಯಂಟಿಜೆನ್ ಪರೀಕ್ಷೆ ಆಗಿದ್ದರೆ, ಮಹಿಳೆ 20ರಂದು ಅಪೊಲೊ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಸಿಕೊಂಡಿದ್ದರು. ನಂತರ, ತಾಯಿ ಮತ್ತು ಮಗುವನ್ನು ಡಿ.22ರಂದು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು.

**29 ಜನಕ್ಕೆ ಕೋವಿಡ್:** ಡಿ.29ರವರೆಗೆ, ಇಂಗ್ಲೆಂಡ್‌ನಿಂದ ಬಂದ 2,127 ಪ್ರಯಾಣಿಕರಲ್ಲಿ 1,903 ಮಂದಿ ಗುರುತಿಸಿ ಪರೀಕ್ಷೆಗೊಳಪಡಿಸಲಾಗಿತ್ತು. ಮಂಗಳವಾರ ಹೊಸದಾಗಿ ಎರಡು ಪ್ರಕರಣ ಸೇರಿದಂತೆ 29 ಮಂದಿಗೆ ಕೊರೊನಾ ಪಾಸಿಟಿವ್ ವರದಿಯಾಗಿದೆ. 1,599 ಜನರ ವರದಿ ನೆಗೆಟಿವ್ ಬಂದಿದೆ. 275 ಜನರ ವರದಿ ಬರಬೇಕಿದೆ. ಇವರಿಗೆ ಸೋಂಕು ತಗುಲಿರುವುದು ಬ್ರಿಟನ್ ರೂಪಾಂತರವೇ ಎಂಬುದನ್ನು ತಿಳಿಯಲು ನಿಮ್ಹಾನ್ಸ್ ನಲ್ಲಿ ವಂಶವಾಹಿ ಪರೀಕ್ಷೆ ನಡೆಯುತ್ತಿದೆ.

'ಮೂವರಿಗೆ ರೂಪಾಂತರ ಕೊರೊನಾ ಸೋಂಕು ತಗುಲಿರುವುದು ದೃಢಪಟ್ಟಿದೆ. ಮೂರನೇ ವ್ಯಕ್ತಿಯ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಸೋಂಕಿತರ ಜತೆಗಿನ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನು ಪತ್ತೆ ಹಚ್ಚಿ ಕ್ವಾರಂಟೈನ್‌ಗೆ ಒಳಪಡಿಸಲಾಗುತ್ತಿದೆ' ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ಮಂಗಳವಾರ ತಿಳಿಸಿದರು.

ತಾಯಿ ಮತ್ತು ಮಗು ವಾಸವಿದ್ದ ವಿಠ್ಠಲ ನಗರದ ಅಪಾರ್ಟ್‌ಮೆಂಟ್ ಸೀಲ್‌ಡೌನ್ ಮಾಡಲಾಗಿದೆ. ಎಲ್ಲ 37 ನಿವಾಸಿಗಳನ್ನು ಹೋಂ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ.

**48 ಗಂಟೆಗಳಲ್ಲಿ ಪತ್ತೆ:** 'ಇಂಗ್ಲೆಂಡ್‌ನಿಂದ ಬಂದಿದ್ದ ಉಳಿದ 247 ಪ್ರಯಾಣಿಕರು ನಾಪತ್ತೆಯಾಗಿದ್ದಾರೆ. ಅವರ ಪತ್ತೆಗೆ ಕ್ರಮ ಕೈಗೊಳ್ಳುವುದರ ಬಗ್ಗೆ ಗೃಹಸಚಿವರೊಂದಿಗೆ ಚರ್ಚಿಸಿದ್ದೇನೆ. ರಾಜ್ಯಕ್ಕೆ ಬಂದ ಬಳಿಕ ಅವರ ಫೋನ್‌ಗಳು ಸ್ವಿಚ್ಡ್ ಆಫ್ ಆಗಿವೆ. ಆದರೂ, ಮುಂದಿನ 48 ಗಂಟೆಯೊಳಗೆ ಎಲ್ಲರನ್ನೂ ಪತ್ತೆ ಹಚ್ಚಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ' ಎಂದು ಡಾ.ಸುಧಾಕರ್ ತಿಳಿಸಿದರು.

ನಾಪತ್ತೆಯಾದವರು ಮತ್ತು ಅವರ ಸಂಪರ್ಕಕ್ಕೆ ಬಂದವರು ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಕೋರುತ್ತೇನೆ. ತಪ್ಪಿದರೆ ಕಾನೂನು ಕ್ರಮ ಅನಿವಾರ್ಯವಾಗುತ್ತದೆ' ಎಂದು ಎಚ್ಚರಿಸಿದರು.

**ಲಾಕ್‌ಡೌನ್ ಅಗತ್ಯವಿಲ್ಲ:** 'ಈಗ ಜನರಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗಿದೆ. ಕೇವಲ ಮೂವರಿಗೆ ರೂಪಾಂತರ ಸೋಂಕು ತಗುಲಿದೆ. ಎಲ್ಲರನ್ನೂ ಐಸೋಲೇಷನ್ ಮಾಡಿದ್ದೇವೆ. ಮುಂಜಾಗ್ರತೆ ವಹಿಸಿದ್ದು, ಮತ್ತೆ ಲಾಕ್ ಡೌನ್, ಸೀಲ್ ಡೌನ್ ಅವಶ್ಯಕತೆ ಇಲ್ಲ' ಎಂದರು.



ಬ್ರಿಟನ್ ರೂಪಾಂತರ ಸೋಂಕು ತಗುಲಿರುವ ತಾಯಿ ಮತ್ತು ಮಗು ವಾಸವಿದ್ದ ಬೆಂಗಳೂರಿನ ವಿಠ್ಠಲನಗರದ ಅಪಾರ್ಟ್‌ಮೆಂಟ್ ಅನ್ನು ಬಿಬಿಎಂಪಿ ಸಿಬ್ಬಂದಿ ಸೋಮವಾರ ಸೀಲ್‌ಡೌನ್ ಮಾಡಿದರು —ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

## ಕಾದು ನೋಡಲು ಪೋಷಕರ ನಿರ್ಧಾರ

ರೂಪಾಂತರ ಸೋಂಕು ರಾಜ್ಯದಲ್ಲಿ ಪತ್ತೆಯಾದ ಹಿನ್ನೆಲೆಯಲ್ಲಿ ಜ.1ರಿಂದ ಮಕ್ಕಳನ್ನು ಶಾಲೆ, ಕಾಲೇಜಿಗೆ ಕಳುಹಿಸುವ ವಿಚಾರದಲ್ಲಿ ಕಾದು ನೋಡಲು ಪೋಷಕರು ನಿರ್ಧರಿಸಿದ್ದಾರೆ. 'ಡಿ.31ರವರೆಗೆ ಏನು ಬೇಕಾದರೂ ಆಗಬಹುದು. ರಾಜ್ಯಸರ್ಕಾರ ಕೈಗೊಳ್ಳುವ ತೀರ್ಮಾನ ಗಮನಿಸುತ್ತೇವೆ. ನಂತರವೇ ಮಕ್ಕಳನ್ನು ಕಳುಹಿಸುವ ಬಗ್ಗೆ ನಿರ್ಧರಿಸುತ್ತೇವೆ' ಎಂದು ಕರ್ನಾಟಕ ಖಾಸಗಿ ಶಾಲಾ ಪೋಷಕ ಸಂಘಟನೆಗಳ ಸಮನ್ವಯ ಸಮಿತಿಯ ಸದಸ್ಯ ಬಿ.ಎನ್.ಯೋಗಾನಂದ ಹೇಳಿದರು.

'ಸರ್ಕಾರ ಕೈಗೊಳ್ಳುವ ಕ್ರಮಗಳು ತೃಪ್ತಿಕರ ಎನಿಸಬೇಕು. ಇವುಗಳನ್ನು ಪರಿಶೀಲಿಸಿದ ನಂತರ ನಿರ್ಧಾರ ಕೈಗೊಳ್ಳಲಾಗುವುದು' ಎಂದರು. ಶಾಲಾ ವಿದ್ಯಾರ್ಥಿಗಳ ಪೋಷಕರ ಸುಮಾರು 40 ಸಂಘಟನೆಗಳು ಸೇರಿಕೊಂಡು ಈ ಸಮನ್ವಯ ಸಮಿತಿ ರಚಿಸಿಕೊಂಡಿವೆ.

## 'ಮಾಹಿತಿ ಇದ್ದರೂ ಸರ್ಕಾರದ ನಿರ್ಲಕ್ಷ್ಯ'

'ಬ್ರಿಟನ್‌ನಲ್ಲಿ ಕೊರೊನಾ ರೂಪಾಂತರ ಸೋಂಕು ಎರಡು ತಿಂಗಳ ಹಿಂದೆಯೇ ಕಾಣಿಸಿಕೊಂಡಿತ್ತು. ದೇಶಕ್ಕೂ ಹರಡುವ ಮಾಹಿತಿಯೂ ಇದ್ದರೂ ಇಂಗ್ಲೆಂಡ್‌ನಿಂದ ಬಂದವರನ್ನು ಪತ್ತೆ ಹಚ್ಚಿ ಕ್ವಾರಂಟೈನ್‌ಗೆ ಒಳಪಡಿಸುವಲ್ಲಿ ಸರ್ಕಾರ ವಿಳಂಬ ಧೋರಣೆ ಅನುಸರಿಸಿತು' ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ದೂರಿದರು.

'ವಿದೇಶಗಳಿಂದ ಬಂದವರನ್ನು ಸರಿಯಾಗಿ ಕ್ವಾರಂಟೈನ್‌ಗೆ ಒಳಪಡಿಸದೆ ಇದ್ದುದೇ ಸೋಂಕು ಹರಡಲು ಕಾರಣವಾಗಿತ್ತು. ಕೇಂದ್ರ ಮತ್ತು ರಾಜ್ಯಸರ್ಕಾರ ಈ ಬಾರಿಯೂ ತಪ್ಪು ಮುಂದುವರಿಸಿದೆ. ಕೋವಿಡ್ ಹೆಸರಿನಲ್ಲಿ ಹಣ ದೋಚುವ ಕಡೆಗೆ ಸರ್ಕಾರದ ಗಮನ ಇದೆ, ಜನರ ಜೀವರಕ್ಷಣೆಯತ್ತ ಇಲ್ಲ' ಎಂದರು. 'ವಿದೇಶಗಳಿಂದ ಬಂದವರು ಮೊಬೈಲ್ ಸ್ವಿಚ್ಡ್ ಆಫ್ ಮಾಡಿಕೊಂಡರೆ ಏನು ಮಾಡುವುದು ಎಂದು ಆರೋಗ್ಯ ಸಚಿವರು ಬೇಜವಾಬ್ದಾರಿಯಾಗಿ ಹೇಳುತ್ತಾರೆ. ಅವರು ಬರುತ್ತಿದ್ದಂತೆ ಮೊಬೈಲ್ ಸಂಖ್ಯೆ ಪರಿಶೀಲಿಸಬೇಕಿತ್ತು. ತಂತ್ರಜ್ಞಾನ ಬಳಸುವಲ್ಲಿಯೂ ಸರ್ಕಾರಗಳು ವಿಫಲವಾಗುತ್ತಿವೆ' ಎಂದು ದೂರಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

ಜ.1ರಿಂದ ಎಸ್ಸೆಸ್ಸೆಲ್ಸಿ, ಪಿ.ಯು. ತರಗತಿ ನಡೆಸಲು ಸಿದ್ಧತೆ • ಪ್ರತಿ ತರಗತಿಯಲ್ಲಿ ಗರಿಷ್ಠ 15 ವಿದ್ಯಾರ್ಥಿಗಳಿಗೆ ಆಸನ ವ್ಯವಸ್ಥೆ

# ಸಜ್ಜಾಗಿವೆ ಬಿಬಿಎಂಪಿ ಶಾಲಾ ಕಾಲೇಜುಗಳು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಒಂಬತ್ತು ತಿಂಗಳುಗಳಿಂದ ವಿದ್ಯಾರ್ಥಿಗಳ ಕಲರವವಿಲ್ಲದೇ ಬಿಕೋ ಎನ್ನುತ್ತಿದ್ದ ಬಿಬಿಎಂಪಿಯ ಶಾಲಾ ಕಾಲೇಜುಗಳಲ್ಲಿ ಹೊಸ ವರ್ಷದ ಮೊದಲ ದಿನದಿಂದಲೇ ಢಣ ಢಣ ಗಂಟೆ ಸದ್ದು ಮೊಳಗಲಿದೆ. ಎಸ್ಸೆಸ್ಸೆಲ್ಸಿ ಹಾಗೂ ಪಿ.ಯು. ತರಗತಿಗಳನ್ನು ಆರಂಭಿಸಲು ಬಿಬಿಎಂಪಿ ತಯಾರಿ ನಡೆಸಿದೆ.

'ಬಿಬಿಎಂಪಿ ಅಧೀನದ ಶಾಲಾ ಕಾಲೇಜುಗಳಲ್ಲಿ ಸರ್ಕಾರದ ಸೂಚನೆ ಮೇರೆಗೆ ಹತ್ತನೇ ತರಗತಿ ಹಾಗೂ ಪದವಿ ಪೂರ್ವ ತರಗತಿಗಳನ್ನು ಆರಂಭಿಸಲು ಸಕಲ ಸಿದ್ಧತೆ ಮಾಡಿಕೊಂಡಿದ್ದೇವೆ. ವಿದ್ಯಾರ್ಥಿಗಳು ಶಾಲೆಯಲ್ಲಿ ಅಂತರ ಕಾಪಾಡಿಕೊಂಡು ಅಧ್ಯಯನ ಮುಂದುವರಿಸಲು ವ್ಯವಸ್ಥೆ ಕಲ್ಪಿಸುವ ಬಗ್ಗೆ ತಯಾರಿ ನಡೆಸಿದ್ದೇವೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಶಿಕ್ಷಣ) ಜೆ.ಮಂಜುನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

'ತರಗತಿ ಕೊಠಡಿಯೊಂದರಲ್ಲಿ ಗರಿಷ್ಠ 15 ವಿದ್ಯಾರ್ಥಿಗಳಿಗೆ ಮಾತ್ರ ಆಸನ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಕೊಠಡಿಯ ವಿಸ್ತೀರ್ಣ ದೊಡ್ಡದಾಗಿದ್ದರೆ ಗರಿಷ್ಠ 20 ವಿದ್ಯಾರ್ಥಿಗಳಿಗೆ ಆಸನ ವ್ಯವಸ್ಥೆ ಕಲ್ಪಿಸಬಹುದು. ಶಾಲೆ ಆರಂಭಿಸುವ ಮುನ್ನ ಸೋಂಕು ನಿವಾರಕ ದ್ರಾವಣ ಸಿಂಪಡಿಸಿ ಕಟ್ಟಡವನ್ನು ಶುಚಿಗೊಳಿಸುವಂತೆಯೂ ಸೂಚನೆ ನೀಡಿದ್ದೇವೆ' ಎಂದರು.

'ಕಲಾ, ವಿಜ್ಞಾನ ಹಾಗೂ ವಾಣಿಜ್ಯ ವಿಭಾಗಗಳ ತರಗತಿಗಳು ಪ್ರತ್ಯೇಕವಾಗಿ ನಡೆಯುವುದರಿಂದ ಪಿ.ಯು ಕಾಲೇಜುಗಳಲ್ಲಿ ಎಲ್ಲೂ ತರಗತಿ ಕೊಠಡಿ ಸಮಸ್ಯೆ ಇಲ್ಲ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು ಇರುವ ಕೆಲವು ಪ್ರೌಢಶಾಲೆಗಳಲ್ಲಿ ಸ್ವಲ್ಪ ಸಮಸ್ಯೆ ಆಗಲಿದೆ. ಕ್ಲೀವ್‌ಲ್ಯಾಂಡ್ ಟೌನ್ ಪ್ರೌಢಶಾಲೆಯಲ್ಲಿ 187 ವಿದ್ಯಾರ್ಥಿಗಳಿದ್ದು, ಎಂಟು ಕೊಠಡಿಗಳು ಮಾತ್ರ ಇವೆ. ಅಲ್ಲಿನ ಪಿ.ಯು. ಕಾಲೇಜಿನಲ್ಲಿ 493 ವಿದ್ಯಾರ್ಥಿಗಳಿದ್ದು, 10 ಕೊಠಡಿಗಳಿವೆ. ವಿದ್ಯಾರ್ಥಿಗಳ ಪ್ರತ್ಯೇಕ ತಂಡಗಳನ್ನು ರಚಿಸಿಕೊಂಡು ಬೆಳಿಗ್ಗೆ ಮತ್ತು ಮಧ್ಯಾಹ್ನ ಬೇರೆ ಬೇರೆ ಪಾಳಿಯಲ್ಲಿ ತರಗತಿ ನಡೆಸುವಂತೆ ಸೂಚನೆ ನೀಡಿದ್ದೇವೆ' ಎಂದರು.

'ಬಿಬಿಎಂಪಿ ಅಧೀನದ ಎಲ್ಲ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರ ಹಾಗೂ ಪಿ.ಯು ಕಾಲೇಜುಗಳ ಪ್ರಾಂಶುಪಾಲರ ಜೊತೆ ಸೋಮವಾರ ಸಭೆ ನಡೆಸಿದ್ದೇನೆ. ಶಾಲೆಗಳಲ್ಲಿ ಸೋಂಕು ಹರಡದಂತೆ ತಡೆಯಲು ಎಲ್ಲ ರೀತಿಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿದ್ದೇನೆ' ಎಂದೂ ಅವರು ತಿಳಿಸಿದರು.

### ಅಂಕಿ-ಅಂಶಗಳು

**15** ಬಿಬಿಎಂಪಿ ಅಧೀನದ ಪಿ.ಯು.ಕಾಲೇಜುಗಳು

**2,070** ಬಿಬಿಎಂಪಿ ಕಾಲೇಜುಗಳಲ್ಲಿನ ದ್ವಿತೀಯ ಪಿ.ಯು ವಿದ್ಯಾರ್ಥಿಗಳು

**32** ಬಿಬಿಎಂಪಿ ಅಧೀನದ ಪ್ರೌಢಶಾಲೆಗಳು

**2,190** ಬಿಬಿಎಂಪಿ ಪ್ರೌಢಶಾಲೆಗಳಲ್ಲಿ 10ನೇ ತರಗತಿ ವಿದ್ಯಾರ್ಥಿಗಳು




ಜಗಜೀವನರಾಂ ನಗರದ ಪಾದರಾಯನಪುರದಲ್ಲಿರುವ ಬಿಬಿಎಂಪಿ ಬಾಲಕಿಯರ ಸಂಯುಕ್ತ ಪದವಿಪೂರ್ವ ಕಾಲೇಜು – ಪ್ರಜಾವಾಣಿ ಸಂಗ್ರಹ ಚಿತ್ರ

## 'ವಿದ್ಯಾಗಮ ಪುನರಾರಂಭ'

ಸ್ಥಗಿತಗೊಂಡಿದ್ದ ವಿದ್ಯಾಗಮ ಕಾರ್ಯಕ್ರಮವನ್ನು ಮತ್ತೆ ಆರಂಭಿಸುವುದಕ್ಕೂ ಬಿಬಿಎಂಪಿ ಸಿದ್ಧತೆ ನಡೆಸಿದೆ. 'ವಿದ್ಯಾಗಮ ಕಾರ್ಯಕ್ರಮದಡಿ ಅಧ್ಯಾಪಕರು 6 ರಿಂದ 9ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಶಾಲಾ ಪ್ರಾಂಗಣದಲ್ಲೇ ಮಾಹಿತಿ ಮಾರ್ಗದರ್ಶನ ನೀಡಲಿದ್ದಾರೆ. ಆಸಕ್ತ ಪೋಷಕರು ಮಕ್ಕಳನ್ನು ವಿದ್ಯಾಗಮ ಕಾರ್ಯಕ್ರಮಕ್ಕೆ ಕಳುಹಿಸಿಕೊಡಬಹುದು' ಎಂದು ಜೆ.ಮಂಜುನಾಥ್ ತಿಳಿಸಿದರು.

## 'ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಳ'

ಬಿಬಿಎಂಪಿಯ ಶಾಲಾ ಕಾಲೇಜುಗಳಲ್ಲಿ 2019–2ನೇ ಶೈಕ್ಷಣಿಕ ವರ್ಷಕ್ಕೆ ಹೋಲಿಸಿದರೆ ಈ ಸಾಲಿನಲ್ಲಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಹೆಚ್ಚಳವಾಗಿದೆ.

'2019–20ರಲ್ಲಿ ಬಿಬಿಎಂಪಿ ಅಧೀನದ ಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟು 17 ಸಾವಿರ ವಿದ್ಯಾರ್ಥಿಗಳು ದಾಖಲಾಗಿದ್ದರು. ಇವುಗಳಲ್ಲಿ ಶಿಶುವಿಹಾರಗಳಿಗೆ ದಾಖಲಾದವರ ಸಂಖ್ಯೆಯೇ 6 ಸಾವಿರದಷ್ಟಿತ್ತು. ಈ ಬಾರಿ ಶಿಶು ವಿಹಾರಗಳನ್ನು ಹೊರತುಪಡಿಸಿ 12,500 ವಿದ್ಯಾರ್ಥಿಗಳು ಇದುವರೆಗೆ ದಾಖಲಾಗಿದ್ದಾರೆ' ಎಂದು ಜೆ.ಮಂಜುನಾಥ್ ಮಾಹಿತಿ ನೀಡಿದರು.

'ಈಗಲೂ ದಾಖಲಾತಿ ಪ್ರಕ್ರಿಯೆ ಮುಂದುವರಿದಿದೆ. ಶಾಲೆಗಳು ಪೂರ್ಣ ಪ್ರಮಾಣದಲ್ಲಿ ಆರಂಭವಾದ ಬಳಿಕ ಇನ್ನಷ್ಟು ವಿದ್ಯಾರ್ಥಿಗಳು ಸೇರ್ಪಡೆಗೊಳ್ಳುವ ನಿರೀಕ್ಷೆ ಇದೆ' ಎಂದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ಎಂ.ಜಿ.ರಸ್ತೆ, ಚರ್ಚ್‌ಸ್ಟ್ರೀಟ್‌ನಲ್ಲಿ ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ಈ ಬಾರಿಯ ಹೊಸ ವರ್ಷಾಚರಣೆಗೆ ಸರ್ಕಾರ ಸಾಕಷ್ಟು ನಿರ್ಬಂಧಗಳನ್ನು ಹೇರಿದೆ. ಪ್ರತಿವರ್ಷ ಹೆಚ್ಚು ಜನ ಸೇರುತ್ತಿದ್ದ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ರೆಸಿಡೆನ್ಸಿ ರಸ್ತೆ, ಮ್ಯೂಸಿಯಂ ರಸ್ತೆ ಹಾಗೂ ಸೇಂಟ್ ಮಾರ್ಕ್ಸ್ ರಸ್ತೆಗಳಲ್ಲಿ ವಾಹನಗಳ ಸಂಚಾರವನ್ನು ನಿರ್ಬಂಧಿಸಿ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಆದೇಶ ಹೊರಡಿಸಿದ್ದಾರೆ.

ಕಮಿಷನರೇಟ್ ವ್ಯಾಪ್ತಿಯಲ್ಲಿ ಡಿ. 31ರಂದು ಸಂಜೆ 6 ಗಂಟೆಯಿಂದ ಜ. 1ರ ಬೆಳಿಗ್ಗೆ 6 ಗಂಟೆಯವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಅಂದು ರಾತ್ರಿ 8 ಗಂಟೆಯಿಂದ ಬೆಳಿಗ್ಗೆ 6 ಗಂಟೆಯವರೆಗೆ ಹಲವು ರಸ್ತೆಗಳಲ್ಲಿ ವಾಹನಗಳ ಸಂಚಾರ ನಿರ್ಬಂಧಿಸಲಾಗಿದ್ದು, ಕೆಲವೆಡೆ ಮಾರ್ಗ ಬದಲಾವಣೆ ಸಹ ಮಾಡಲಾಗಿದೆ.

‘ಹೊಸ ವರ್ಷಾಚರಣೆ ನೆಪದಲ್ಲಿ ಕೆಲವರು ವ್ಹೀಲಿಂಗ್, ಡ್ರ್ಯಾಗ್ ರೇಸ್ ಮಾಡುವ ಸಾಧ್ಯತೆ ಇದೆ. ಹೀಗಾಗಿ, ನಗರದ ಎಲ್ಲ ಮೇಲ್ಸೇತುವೆಗಳನ್ನು ಬಂದ್ ಮಾಡಲಾಗುತ್ತಿದೆ’ ಎಂದು ಆದೇಶದಲ್ಲಿ ಕಮಿಷನರ್ ತಿಳಿಸಿದ್ದಾರೆ.

‘ಎಂ.ಜಿ. ರಸ್ತೆ (ಕ್ವೀನ್ಸ್ ವೃತ್ತದಿಂದ ಟ್ರಿನಿಟಿ ವೃತ್ತ), ಕಬ್ಬನ್ ರಸ್ತೆ, ರೆಸಿಡೆನ್ಸಿ, ರಿಚ್ಮಂಡ್ ರಸ್ತೆ, ಇನ್ಫೆಂಟ್ರಿ ರಸ್ತೆ, ಬ್ರಿಗೇಡ್ ರಸ್ತೆ, ಅಶೋಕನಗರ ಹಳೇ ಪಿ.ಎಸ್ ವೃತ್ತ, ಚರ್ಚ್ ಸ್ಟ್ರೀಟ್, ಮ್ಯೂಸಿಯಂ ರಸ್ತೆ, ರೆಸ್ಟ್ ಹೌಸ್ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ ಹಾಗೂ ಇಂದಿರಾ ನಗರ 100 ಅಡಿ ರಸ್ತೆಯಲ್ಲಿ ವಾಹನಗಳ ನಿಲುಗಡೆಯನ್ನೂ ನಿಷೇಧಿಸಲಾಗಿದೆ. ಯಾರಾದರೂ ನಿಯಮ ಉಲ್ಲಂಘಿಸಿದರೆ, ಅಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದೂ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ಮೊಳೆಗಳಿಂದ ಮರಗಳಿಗೆ ಮುಕ್ತಿ

ಬೆಂಗಳೂರು: ಭಿತ್ತಿಪತ್ರಗಳು ಹಾಗೂ ಜಾಹೀರಾತು ಫಲಕಗಳನ್ನು ಅಳವಡಿಸುವಾಗ ಮರಗಳಿಗೆ ಹಾನಿಯಾಗುವಂತೆ ಹೊಡೆಯಲಾಗಿದ್ದ ಮೊಳೆಗಳು ಹಾಗೂ ಪಿನ್‌ಗಳನ್ನು ತೆರವುಗೊಳಿಸುವ ‘ಕಿಲ್‌ಬಿಲ್’ ಅಭಿಯಾನವನ್ನು ‘ಟೀಮ್ ಹಸಿರು’ ತಂಡ ಹಮ್ಮಿಕೊಂಡಿತ್ತು.

ತಂಡದ ಸ್ವಯಂಸೇವಕರು ಎರಡು ಗಂಟೆ ಅವಧಿಯಲ್ಲಿ ಎನ್.ಆರ್.ಕಾಲೊನಿಯ ಬಸ್ ನಿಲ್ದಾಣದಿಂದ ನೆಟ್ಟಕಲ್ಲಪ್ಪ ವೃತ್ತದವರೆಗಿನ ರಸ್ತೆಯಲ್ಲಿ 15ಕ್ಕೂ ಹೆಚ್ಚು ಮರಗಳಿಂದ ಸಾವಿರಕ್ಕೂ ಹೆಚ್ಚು ಮೊಳೆಗಳನ್ನು ತೆರವುಗೊಳಿಸಿದ್ದಾರೆ.

‘ಮರಗಳ ಮೇಲೆ ಪ್ರಚಾರಕ್ಕಾಗಿ ಭಿತ್ತಿಪತ್ರಗಳಿಗೆ ಮೊಳೆಗಳನ್ನು ಬಲವಾಗಿ ಹೊಡೆಯುತ್ತಾರೆ. ಇದು ಮರದ ಒಳಭಾಗಕ್ಕೆ ಇಳಿದು, ಅವುಗಳ ಬೆಳವಣಿಗೆಗೆ ಹಾನಿ ಮಾಡುತ್ತದೆ. ಮರಗಳ ಆರೋಗ್ಯದ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತದೆ’ ಎಂದು ಟೀಮ್ ಹಸಿರು ತಂಡದ ಸಂಸ್ಥಾಪಕ ಟ್ರಸ್ಟಿ ಚಿರಾಗ್ ಎಸ್. ರಾವ್ ತಿಳಿಸಿದರು.

‘ಮರಗಳನ್ನು ಮೊಳೆಗಳಿಂದ ಮುಕ್ತಗೊಳಿಸಲು ಕಿಲ್‌ಬಿಲ್ ಅಭಿಯಾನ ಆರಂಭಿಸಿದೆವು. ಸ್ವಯಂಸೇವಕರು ಮೊಳೆಗಳನ್ನು ತೆರವು ಮಾಡುವ ಮೂಲಕ ಮರಗಳನ್ನು ಸ್ವತಂತ್ರಗೊಳಿಸಿದ್ದಾರೆ. ಹಾನಿಯಾಗಿರುವ ಭಾಗಗಳಲ್ಲಿ ಔಷಧಿ ಸಿಂಪಡಿಸಿದ್ದೇವೆ’ ಎಂದರು.

# ರಾಜ್ಯಕ್ಕೆ ಬಂತು ಹೈಸ್ಪೀಡ್ ವೈರಸ್!

## ಬೆಂಗಳೂರಿಗೆ ಬಂದ ಮೂವರಲ್ಲಿ ಬ್ರಿಟನ್ ವೈರಸ್ ಪತ್ತೆ, ಹೊಸ ಆತಂಕ

### ವಸಂತಪುರದ ತಾಯಿ–ಮಗಳು, ಜೆ.ಪಿ.ನಗರದ ವ್ಯಕ್ತಿಯಲ್ಲಿ ವೈರಸ್ ಪತ್ತೆ | ಆಸ್ಪತ್ರೆಗೆ ದಾಖಲು, ಆರೋಗ್ಯ ಸ್ಥಿರ

### ಸೋಂಕಿತರ ಸಂಪರ್ಕದಲ್ಲಿದ್ದ 42 ಜನ ಕ್ವಾರಂಟೈನ್ | ಸೋಂಕಿತರಿದ್ದ ಮನೆ, ಅಪಾರ್ಟ್‌ಮೆಂಟ್ ಸೀಲ್‌ಡೌನ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಚೀನಾ ವೈರಸ್ ಕೋವಿಡ್ 19 ಆರ್ಭಟ ದಿನೇ ದಿನೇ ಕ್ಷೀಣಿಸುತ್ತಿದೆ ಎಂದು ಸಮಾಧಾನ ಪಟ್ಟುಕೊಳ್ಳುವ ಈ ಹಂತದಲ್ಲಿಯೇ ಬ್ರಿಟನ್‌ನ ರೂಪಾಂತರಿ ಕೊರೋನಾ ವೈರಾಣು 'ಬಿ.1.1.7' ರಾಜ್ಯಕ್ಕೆ ವಕ್ಕರಿಸಿದ್ದು, ಮತ್ತೊಂದು ಸುತ್ತಿನ ಭೀತಿಯ ಅಲೆಯೇಳುವಂತೆ ಮಾಡಿದೆ.

ಕೇಂದ್ರ ಆರೋಗ್ಯ ಇಲಾಖೆ ಮಂಗಳವಾರ ಪ್ರಕಟಿಸಿರುವ ಮಾಹಿತಿಯಲ್ಲಿ ದೇಶದಲ್ಲಿ ಆರು ಜನರಲ್ಲಿ ಹೊಸ ವೈರಾಣು ಪತ್ತೆಯಾಗಿದೆ. ಇದರಲ್ಲಿ ಮೂವರು ರಾಜ್ಯ ರಾಜಧಾನಿ ಬೆಂಗಳೂರಿನವರೇ ಆಗಿದ್ದಾರೆ. ರಾಜ್ಯದಲ್ಲಿ ಆರಂಭದಲ್ಲಿ ಸೋಂಕು ದೃಢಪಟ್ಟಿದ್ದ ನಾಲ್ವರು ಬ್ರಿಟನ್ ಪ್ರವಾಸಿಗರಿಗೆ ಮಾತ್ರ ವಂಶವಾಹಿ ಪರೀಕ್ಷೆ ನಡೆಸಲಾಗಿತ್ತು. ಇದರಲ್ಲಿ ಮೂವರಿಗೆ ರೂಪಾಂತರಿ ವೈರಸ್ ದೃಢಪಟ್ಟಿದ್ದರೆ, ಒಬ್ಬರಿಗೆ ಮಾತ್ರ ನೆಗೆಟಿವ್ ಬಂದಿದೆ. ಉಳಿದವರಲ್ಲಿ 11 ಜನರ ಪರೀಕ್ಷೆ ನಡೆಯುತ್ತಿದ್ದು, 12 ಜನರ ಪರೀಕ್ಷೆ ಬಾಕಿ ಇದೆ. ಡಿ.19ರಂದು ಬ್ರಿಟನ್‌ನಿಂದ ರಾಜ್ಯಕ್ಕೆ ವಾಪಸಾಗಿದ್ದ ಬೊಮ್ಮನಹಳ್ಳಿ ವಲಯದ ವಸಂತಪುರದ 34 ವರ್ಷದ ಮಹಿಳೆ ಮತ್ತು ಆಕೆಯ 6 ವರ್ಷದ ಮಗಳು ಹಾಗೂ ಜೆ.ಪಿ.ನಗರದ 34 ವರ್ಷದ ಮತ್ತೊಬ್ಬ ವ್ಯಕ್ತಿಗೆ ರೂಪಾಂತರಿ ಸೋಂಕು ತಗುಲಿರುವುದು ದೃಢಪಟ್ಟಿದೆ.

'ವಸಂತಪುರದ ತಾಯಿ ಮತ್ತು ಮಗಳನ್ನು ವಿಕ್ಟೋರಿಯಾ ಆಸ್ಪತ್ರೆಯ ಐಸೋಲೇಷನ್ ವಾರ್ಡ್‌ಗೆ ದಾಖಲಿಸಿ ಚಿಕಿತ್ಸೆ ಮುಂದುವರೆಸಲಾಗಿದೆ. ಮತ್ತೊಬ್ಬ ಸೋಂಕಿತ ವ್ಯಕ್ತಿಗೆ ಅಪೋಲೋ ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿಟ್ಟು ಚಿಕಿತ್ಸೆ ನೀಡಲಾಗುತ್ತಿದೆ. ಮೂವರ ಆರೋಗ್ಯದಲ್ಲಿ ಯಾವುದೇ ಸಮಸ್ಯೆ ಇಲ್ಲ, ಸೂಕ್ತ ಚಿಕಿತ್ಸೆ ಹಾಗೂ ಹೆಚ್ಚಿನ ನಿಗಾ ವಹಿಸಲಾಗಿದೆ' ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಭಾರತಕ್ಕೆ ವಾಪಸಾದ ವೇಳೆ ನಡೆಸಲಾದ ಕೊರೋನಾ ಪರೀಕ್ಷೆ ವೇಳೆ ಈ ಮೂವರಿಗೂ ಕೋವಿಡ್ 19 ದೃಢಪಟ್ಟಿತ್ತು. ನಂತರ ಅವರಿಗೆ ರೂಪಾಂತರಿ ವೈರಾಣು ಪತ್ತೆಗೆ ನಿಮ್ಹಾನ್ಸ್‌ನಲ್ಲಿ ವಂಶವಾಹಿ ಪರೀಕ್ಷೆ ನಡೆಸಲಾಗಿತ್ತು. ↘ 13



ಬೆಂಗಳೂರಿನ ವಸಂತಪುರದಲ್ಲಿ ಸೋಂಕಿತರು ವಾಸವಿದ್ದ ಅಪಾರ್ಟ್‌ಮೆಂಟ್ ಅನ್ನು ಸೀಲ್‌ಡೌನ್ ಮಾಡಲಾಗಿದೆ.

## ಲಾಕ್‌ಡೌನ್ ಅವಶ್ಯಕತೆ ಇಲ್ಲ: ಸಚಿವ ಸುಧಾಕರ್



ರೂಪಾಂತರಿ ವೈರಸ್ ಬೆಂಗಳೂರಿನ ಮೂವರಲ್ಲಿ ಕಂಡುಬಂದಿದ್ದರೂ ಕೂಡ ಮತ್ತೆ ಲಾಕ್‌ಡೌನ್ ಅಥವಾ ಸೀಲ್‌ಡೌನ್ ಮಾಡುವಂತಹ ಯಾವುದೇ ಪ್ರಸ್ತಾಪ ರಾಜ್ಯ ಸರ್ಕಾರದ ಮುಂದಿಲ್ಲ. ಪರಿಸ್ಥಿತಿ ನಿಯಂತ್ರಣದಲ್ಲಿದೆ. ಸೋಂಕು ಹಬ್ಬದಂತೆ ಸರ್ವ ಕ್ರಮಗಳನ್ನು ಕೈಗೊಳ್ಳಲಾಗಿದೆ. ಯಾರೂ ಕೂಡ ಆತಂಕ ಪಡುವ ಆಗತ್ಯವಿಲ್ಲ.

• **ಡಾ.ಸುಧಾಕರ್** ಆರೋಗ್ಯ ಸಚಿವ

## ಬ್ರಿಟನ್ ವೈರಸ್ ವಿರುದ್ಧವೂ ಲಸಿಕೆ ಕೆಲಸ ಮಾಡುತ್ತೆ

**ನವದೆಹಲಿ:** ಕೊರೋನಾ ವೈರಸ್ಸಿನ ಹೊಸ ರೂಪಾಂತರದ ವಿರುದ್ಧವೂ ಲಸಿಕೆಗಳು ಕೆಲಸ ಮಾಡುತ್ತವೆ. ಈಗಾಗಲೇ ತಯಾರಾಗಿರುವ ಲಸಿಕೆಗಳು ಬ್ರಿಟನ್ ಅಥವಾ ದಕ್ಷಿಣ ಆಫ್ರಿಕಾದಲ್ಲಿ ಪತ್ತೆಯಾಗಿರುವ ಹೊಸ ತಳಿಯ ಕೊರೋನಾ ವೈರಸ್ಸಿನ ವಿರುದ್ಧ ಕೆಲಸ ಮಾಡುವುದಿಲ್ಲ ಎಂಬುದಕ್ಕೆ ಯಾವುದೇ ಸಾಕ್ಷ್ಯವಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ. ಈ ಕುರಿತು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ ಕೆ.ವಿಜಯರಾಘವನ್, ಹೊಸ ರೂಪಾಂತರಿ ವೈರಸ್‌ನಿಂದ ರೋಗದ ತೀವ್ರತೆ ಹೆಚ್ಚಾಗುತ್ತದೆ ಎಂಬುದು ಇಲ್ಲಿಯವರೆಗೂ ಕಂಡುಬಂದಿಲ್ಲ. ಬಹುತೇಕ ಲಸಿಕೆಗಳು ಕೊರೋನಾದ ಸ್ಪೈಕ್ ಪ್ರೋಟೀನ್ ವಿರುದ್ಧ ಕೆಲಸ ಮಾಡುವಂತೆ ತಯಾರಾಗಿವೆ ಎಂಬುದು ನಿಜ. ಹೊಸತಾಗಿ ಪತ್ತೆಯಾಗಿರುವ ಕೊರೋನಾ ತಳಿಯ ಸ್ಪೈಕ್ ಪ್ರೋಟೀನ್‌ನಲ್ಲೇ ವ್ಯತ್ಯಾಸವಿರುವುದರಿಂದ ಜನರಿಗೆ ಲಸಿಕೆಗಳ ಬಗ್ಗೆ ಅನುಮಾನ ಬಂದಿರಬಹುದು. ಆದರೆ, ಲಸಿಕೆಗಳು ರೋಗನಿರೋಧಕ ಶಕ್ತಿಯನ್ನೇ ಉತ್ತೇಜಿಸಿ ನಾನಾ ವಿಧವಾದ ರಕ್ಷಣಾತ್ಮಕ ಪ್ರತಿಕಾಯಗಳನ್ನು ಉತ್ಪಾದಿಸುತ್ತವೆ ಎಂದರು.

• **ಹೊಸ ಮಾದರಿಯಿಂದ ರೋಗದ ತೀವ್ರತೆ ಹೆಚ್ಚಾಗಲ್ಲ**

## ದೇಶದ ಒಟ್ಟು 6 ಜನರಲ್ಲಿ ಬ್ರಿಟನ್ ವೈರಸ್ ಪತ್ತೆ

### ಬೆಂಗಳೂರು 3, ಹೈದರಾಬಾದ್ 2, ಪುಣೆಯಲ್ಲಿ 1 ಕೇಸ್ ಪತ್ತೆ

**ನವದೆಹಲಿ:** ಬ್ರಿಟನ್ ಹೈಸ್ಪೀಡ್ ವೈರಸ್ ಭಾರತದಲ್ಲಿ ಒಟ್ಟು ಆರು ಮಂದಿಯಲ್ಲಿ ಪತ್ತೆಯಾಗಿದೆ. ಬೆಂಗಳೂರಿನ ನಿಮ್ಹಾನ್ಸ್ ಪ್ರಯೋಗಾಲಯದಲ್ಲಿ ಮೂರು, ಹೈದರಾಬಾದ್‌ನ ಸೆಂಟರ್ ಫಾರ್ ಸೆಲ್ಯುಲರ್ ಅಂಡ್ ಮಾಲಿಕ್ಯುಲರ್ ಬಯಾಲಜಿ ಪ್ರಯೋಗಾಲಯದಲ್ಲಿ ಎರಡು ಹಾಗೂ ಪುಣೆಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿಯಲ್ಲಿ ಒಂದು ಸ್ಯಾಂಪಲ್‌ನಲ್ಲಿ ಈ ವೈರಸ್‌ನ ಸೋಂಕು ದೃಢಪಟ್ಟಿದೆ. ಈ ಎಲ್ಲಾ ಆರು ಮಂದಿಯನ್ನೂ ಆಯಾ ರಾಜ್ಯ ಸರ್ಕಾರಗಳು ಏಕಾಂಗಿಯಾಗಿ ಪ್ರತ್ಯೇಕ ಕೊಠಡಿಯಲ್ಲಿ ಇರಿಸಿ ನಿಗಾವಹಿಸಿವೆ. ಎಂದು ಕೇಂದ್ರ ಆರೋಗ್ಯ ಇಲಾಖೆ ತಿಳಿಸಿದೆ. ವಿವರ ↘ 15

## ಎಲ್ಲಾ ವಿದೇಶಿ ಸೋಂಕಿತರಿಗೆ ಜೀನ್ ಸೀಕ್ವೆನ್ಸಿಂಗ್ ಪರೀಕ್ಷೆ

**ನವದೆಹಲಿ:** ವಿದೇಶದಿಂದ ಭಾರತಕ್ಕೆ ಡಿ.9ರಿಂದ 22ರವರೆಗೆ ಆಗಮಿಸಿ ಕೊರೋನಾ ಪಾಸಿಟಿವ್ ಬಂದವರಿಗೆ ಹಾಗೂ ಸೋಂಕಿನ ಲಕ್ಷಣ ಹೊಂದಿರುವವರಿಗೆ ಜೀನೋಮ್ ಸೀಕ್ವೆನ್ಸಿಂಗ್ ನಡೆಸಲಾಗುವುದು. ಇನ್ನಿತರರನ್ನು ಐಸಿಎಂಆರ್ ಮಾರ್ಗದರ್ಶಿ ಸೂತ್ರದ ಪ್ರಕಾರ ವಿದೇಶದಿಂದ ಬಂದ 5ರಿಂದ 10ನೇ ದಿನದೊಳಗೆ ಕೊರೋನಾ ಪರೀಕ್ಷೆಗೆ ಒಳಡಿಸಲಾಗುವುದು ಎಂದು ಕೇಂದ್ರ ಆರೋಗ್ಯ ಇಲಾಖೆ ತಿಳಿಸಿದೆ.

ರಾಜ್ಯಕ್ಕೆ ಬ್ರಿಟನ್‌ನಿಂದ ಬಂದಿರುವವರಲ್ಲಿ ವೈರಸ್ ಪತ್ತೆಯಾಗಿದೆ ಎಂದು ಕನ್ನಡಪ್ರಭ ಡಿ.26ರಂದು ವರದಿ ಮಾಡಿತ್ತು.


ರಾಜ್ಯದಲ್ಲಿ 4 ಜನಕ್ಕೆ ಬ್ರಿಟನ್ ವೈರಸ್?

ಬ್ರಿಟನ್‌ನಿಂದ ಬಂದ ನಾಲ್ವರಲ್ಲಿ ವೈರಸ್ ಶಂಕೆ 1-2 ದಿನದಲ್ಲಿ ಈ ಬಗ್ಗೆ ಅಧಿಕೃತ ವರದಿ ಸಾಧ್ಯತೆ

## ಲಕ್ಷಣಗಳೇನು?

- ರೂಪಾಂತರಿ ವೈರಸ್‌ನಲ್ಲಿ ಹಳೆಯ ಕೊರೋನಾ ವೈರಸ್‌ನ ಎಲ್ಲ ಲಕ್ಷಣಗಳು
- ಆದರೆ ಹಳೆಯ ವೈರಸ್‌ಗಿಂತ ಇದರಲ್ಲಿ ಹರಡುವ ವೇಗ ಶೇ.70ರಷ್ಟು ಹೆಚ್ಚು
- ನೆಗಡಿ, ಕೆಮ್ಮು, ಒಣ ಕಫ
- ಶೀತ ಜ್ವರ, ತೀವ್ರ ಜ್ವರ, ತಲೆನೋವು
- ರುಚಿ ಮತ್ತು ವಾಸನೆ ಕಳೆದುಕೊಳ್ಳುವುದು
- ಹಸಿವಾಗದಿರುವುದು ಮತ್ತು ಆಯಾಸ
- ಸ್ನಾಯುಸೆಳೆತ
- ಉಸಿರಾಟದ ಸಮಸ್ಯೆ
- ಮೈಮೇಲೆ ಗುಳ್ಳೆಗಳಾಗುವುದು

ಕನ್ನಡಪ್ರಭ

# ಇಡೀ ಅಪಾರ್ಟ್‌ಮೆಂಟೇ ಕ್ವಾರಂಟೈನ್ ಕೇಂದ್ರ

## ವಸಂತಪುರದ ತಾಯಿ, ಮಗಳಿಗೆ ಬ್ರಿಟನ್ ವೈರಸ್ | ಅಪಾರ್ಟ್‌ಮೆಂಟ್ ವಾಸಿಗಳ ಸಾಂಸ್ಥಿಕ ಕ್ವಾರಂಟೈನ್ ಮಾಡಲು ಮುಂದಾದ ಪಾಲಿಕೆ
## ಹೋಟೆಲ್‌ಗೆ ತೆರಳಲು ನಿವಾಸಿಗಳ ವಿರೋಧ | ಅಪಾರ್ಟ್‌ಮೆಂಟ್‌ಗೆ ಬೀಗ, ಅಲ್ಲೇ ಕ್ವಾರಂಟೈನ್ ವ್ಯವಸ್ಥೆ | ಸ್ಥಳದಲ್ಲೇ ಅಧಿಕಾರಿಗಳ ಮೊಕ್ಕಾಂ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜಧಾನಿ ಬೆಂಗಳೂರಲ್ಲಿ ರೂಪಾಂತರಿ ಕೊರೋನಾ ವೈರಸ್ ದೃಢಪಟ್ಟ ತಾಯಿ ಮತ್ತು ಮಗಳ ಸಂಪರ್ಕದಲ್ಲಿದ್ದವರು ಸಾಂಸ್ಥಿಕ ಕ್ವಾರಂಟೈನ್‌ಗೆ ನಿರಾಕರಿಸಿದ ಕಾರಣ ಅವರು ವಾಸವಿರುವ ಅಪಾರ್ಟ್‌ಮೆಂಟ್ ಅನ್ನೇ ಬಿಬಿಎಂಪಿ ಅಧಿಕಾರಿಗಳು ಸಾಂಸ್ಥಿಕ ಕ್ವಾರಂಟೈನ್ ಕೇಂದ್ರವಾಗಿ ಮಾರ್ಪಡಿಸಿದ್ದಾರೆ.

ಬ್ರಿಟನ್‌ನಿಂದ ವಾಪಸ್ಸಾದವರಲ್ಲಿ ಕೋವಿಡ್-19 ಸೋಂಕು ದೃಢಪಟ್ಟಿದ್ದವರಿಗೆ ನಡೆಸಲಾಗಿದ್ದ ವಂಶವಾಹಿ ಪರೀಕ್ಷಾ ಫಲಿತಾಂಶಯನ್ನು ಮಂಗಳವಾರ ಪ್ರಕಟಿಸಿದ ಕೇಂದ್ರ ಆರೋಗ್ಯ ಇಲಾಖೆ, ಬೆಂಗಳೂರಿನ 34 ವರ್ಷದ ತಾಯಿ ಮತ್ತು ಆಕೆಯ 6 ವರ್ಷದ ಮಗಳು ಹಾಗೂ ಜೆ.ಪಿ.ನಗರ ಮೂರನೇ ಹಂತದ 34 ವರ್ಷದ ಮತ್ತೊಬ್ಬ ವ್ಯಕ್ತಿಗೆ ಬ್ರಿಟನ್ ರೂಪಾಂತರಿ ವೈರಸ್ ದೃಢಪಟ್ಟಿರುವುದಾಗಿ ತಿಳಿಸಿತು.

ಈ ಪ್ರಕಟಣೆ ಬೆನ್ನಲ್ಲೇ ಸೋಂಕಿತರ ಸಂಪರ್ಕಿತರ ಕಾರ್ಯಾಚರಣೆಗಿಳಿದ ಬಿಬಿಎಂಪಿ ಅಧಿಕಾರಿಗಳು ಸೋಂಕಿತ ತಾಯಿ ಮತ್ತು ಮಗು ವಾಸವಿದ್ದ ಬೊಮ್ಮನಹಳ್ಳಿ ವಲಯದ ವಸಂತಪುರ ಬಳಿಯ ಸಿರಿ ಎಂಬೆಸಿ ಅಪಾರ್ಟ್‌ಮೆಂಟ್‌ಗೆ ತೆರಳಿ ಅವರ ಕುಟುಂಬದವರು ಹಾಗೂ ಇತರೆ 35 ಪ್ರಾಥಮಿಕ ಸಂಪರ್ಕಿತರಿಗೆ ವಿಷಯ ತಿಳಿಸಿ ಸಾಂಸ್ಥಿಕ ಕ್ವಾರಂಟೈನ್‌ಗಾಗಿ ಹೋಟೆಲ್ ವೊಂದಕ್ಕೆ ಕರೆದೊಯ್ಯಲು ಮುಂದಾದರು. ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ ಅಪಾರ್ಟ್‌ಮೆಂಟ್ ನಿವಾಸಿಗಳು ನಾವು ಎಲ್ಲಿಗೂ ಬರುವುದಿಲ್ಲ, ನಮ್ಮ ಮನೆಗಳಲ್ಲೇ ಹೋಂ ಕ್ವಾರಂಟೈನ್‌ನಲ್ಲಿ ಇರುವುದಾಗಿ ಪಟ್ಟುಹಿಡಿದರು. ಇದರಿಂದ ಬೇರೆ ದಾರಿ ಕಾಣದೇ ಅಧಿಕಾರಿಗಳು ಅವರಿಗೆ ಅಪಾರ್ಟ್‌ಮೆಂಟ್‌ನಲ್ಲೇ ಕ್ವಾರಂಟೈನ್‌ನಲ್ಲಿರಲು ಅವಕಾಶ ನೀಡಿ ಇಡೀ ಅಪಾರ್ಟ್‌ಮೆಂಟ್ ಅನ್ನು ಸೀಲ್‌ಡೌನ್ ಮಾಡಲಾಗಿದೆ.

**35 ಮಂದಿ ಕ್ವಾರಂಟೈನ್:** ಅಪಾರ್ಟ್‌ಮೆಂಟ್‌ನ ಒಟ್ಟು 17 ಫ್ಲ್ಯಾಟ್‌ನಲ್ಲಿ ವಾಸವಿದ್ದ 35 ಮಂದಿಯನ್ನು ಕ್ವಾರಂಟೈನ್ ಮಾಡಲಾಗಿದೆ. ಅಪಾರ್ಟ್‌ಮೆಂಟ್‌ಗೆ ನಿಗಾ ವಹಿಸಲು ಸಿಸಿಟಿವಿ ಕ್ಯಾಮರಾ ವ್ಯವಸ್ಥೆ, ಗೇಟ್‌ಗೆ ಬೀಗ ಹಾಕಲಾಗಿದೆ. ಸಂಪರ್ಕಿತರ ಮೇಲೆ ನಿಗಾ ವಹಿಸಲು ಆರೋಗ್ಯ ಸಿಬ್ಬಂದಿ ನಿಯೋಜಿಸಲಾಗಿದೆ. ಪ್ರತಿ ಮನೆ ಸದಸ್ಯರು ಮನೆಯಲ್ಲಿ ಇರುವಂತೆ ಸೂಚಿಸಲಾಗಿದೆ. ಇಡೀ ಅಪಾರ್ಟ್‌ಮೆಂಟ್‌ಗೆ ಸ್ಯಾನಿಟೈಸ್ ಮಾಡಲಾಗಿದೆ. ಭದ್ರತೆಗೆ ಬ್ಯಾರಿಕೇಡ್ ಅಳವಡಿಸಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ಗೇಟ್‌ಗೆ ಹೋಂ ಕ್ವಾರಂಟೈನ್ ಭಿತ್ತಿಪತ್ರ ಅಂಟಿಸಲಾಗಿದೆ.



ಸ್ಥಳದಲ್ಲೇ ಮೊಕ್ಕಾಂ ಹೂಡಲು ಟೆಂಟ್ ಹಾಕುತ್ತಿರುವ ಸಿಬ್ಬಂದಿ

### ಮನೆ ಬಾಗಿಲಿಗೆ ಹಾಲು, ಹಣ್ಣು, ತರಕಾರಿ

ಅಪಾರ್ಟ್‌ಮೆಂಟ್ ನಿವಾಸಿಗಳು ಕ್ವಾರಂಟೈನ್ ಅವಧಿ ಮುಕ್ತಾಗೊಳ್ಳುವವರಿಗೆ ದಿನ ಬಳಕೆಗೆ ಬೇಕಾದ ದಿನಸಿ, ಹಣ್ಣು, ತರಕಾರಿ, ಹಾಲು ಪೂರೈಕೆಗೆ ಬಿಬಿಎಂಪಿ ಸ್ವಯಂ ಸೇವಕರನ್ನು ನಿಯೋಜಿಸಿದೆ. ಹಣ ಕೊಟ್ಟು ತಮಗೆ ಬೇಕಾದ ವಸ್ತುಗಳನ್ನು ಪಡೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದು ಬೊಮ್ಮನಹಳ್ಳಿಯ ಜಂಟಿ ಆಯುಕ್ತ ರಾಮಕೃಷ್ಣ 'ಕನ್ನಡಪ್ರಭ'ಕ್ಕೆ ಮಾಹಿತಿ ನೀಡಿದ್ದಾರೆ.

### ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಆತಂಕ

ವಸಂತಪುರದ ಸಿರಿ ಎಂಬೆಸಿ ಅಪಾರ್ಟ್‌ಮೆಂಟ್‌ನ ತಾಯಿ- ಮಗಳಿಗೆ ಹೈಸ್ಪೀಡ್ ಬ್ರಿಟನ್ ಸೋಂಕು ಕಾಣಿಕೊಂಡ ವಿಷಯ ತಿಳಿಯುತ್ತಿದ್ದಂತೆ ಅಪಾರ್ಟ್‌ಮೆಂಟ್‌ನಲ್ಲಿ ವಾಸವಿರುವ 17 ಕುಟುಂಬದ ಸದಸ್ಯರು ಆತಂಕಕ್ಕೆ ಒಳಗಾಗಿದ್ದಾರೆ. ಬಿಬಿಎಂಪಿ ಆರೋಗ್ಯ ತಪಾಸಣಾ ತಂಡ ತಪಾಸಣೆ ಆಗಮಿಸಿದ ವೇಳೆ ಕೆಲವರು ಮನೆಯಿಂದ ಹೊರಗೆ ಬರುವುದಕ್ಕೂ ಭಯಪಟ್ಟುಕೊಂಡ ದೃಶ್ಯಗಳು ಕಂಡು ಬಂದವು.

### ಹಸುಗೂಸಿಗಾಗಿ ಅಂಗಲಾಚಿದ ಹಿರಿ ಜೀವ

ಅಪಾರ್ಟ್‌ಮೆಂಟ್‌ನಲ್ಲಿ ಕ್ವಾರಂಟೈನ್‌ಗೆ ಒಳಪಟ್ಟ 35 ಮಂದಿಯ ಪೈಕಿ ಎರಡು ವರ್ಷದ ಮಗು ಸೇರಿತ್ತು. ಮಗುವಿಗೆ ತೊಂದರೆ ಆಗಬಹುದೆಂದು ನಗರದ ಬೇರೆಡೆ ನೆಲೆಸಿರುವ ಮಗುವಿನ ಅಜ್ಜ-ಅಜ್ಜಿ ಅಪಾರ್ಟ್‌ಮೆಂಟ್ ಗೇಟ್ ಬಳಿ ಆಗಮಿಸಿ, ಮಗುವನ್ನು ನೀಡುವಂತೆ ಅಂಗಲಾಚಿ ಬೇಡಿಕೊಂಡ ಘಟನೆ ನಡೆಯಿತು. ಕೊನೆಗೆ ಮಗುವಿನ ಅಜ್ಜ-ಅಜ್ಜಿಯನ್ನು ಸಮಾಧಾನ ಪಡಿಸಿ ಮನೆಗೆ ಕಳುಹಿಸಿಕೊಡಲಾಯಿತು.

### ಸೋಂಕಿತನ ಪತ್ನಿ, ಮಗನನ್ನು ಕ್ವಾರಂಟೈನ್ ಮಾಡದೆ ನಿರ್ಲಕ್ಷ್ಯ?

ಇನ್ನು, ಬ್ರಿಟನ್ ವೈರಸ್ ದೃಢಪಟ್ಟ ಜೆ.ಪಿ.ನಗರದ 34 ವರ್ಷದ ವ್ಯಕ್ತಿಯೊಂದಿಗೆ ಬ್ರಿಟನ್‌ನಿಂದ ಆಗಮಿಸಿದ ಆತನ ಪತ್ನಿ, ಮಗನನ್ನು ಕ್ವಾರಂಟೈನ್ ಮಾಡದೆ ಬಿಬಿಎಂಪಿ ಅಧಿಕಾರಿಗಳು ನಿರ್ಲಕ್ಷಿಸಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಇದರಿಂದ ಸೋಂಕಿತನ ಕುಟುಂಬದವರು ಎಲ್ಲೆಂದರಲ್ಲಿ ಓಡಾಡಿದ್ದಾರೆ. ಆದರೂ, ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ಜತೆಗೆ ಅವರ ತಂದೆ, ತಾಯಿ ಸೇರಿದಂತೆ ಸೋಂಕಿತ ವ್ಯಕ್ತಿಯೊಂದಿಗೆ ಏಳು ಮಂದಿ ಸಂಪರ್ಕದಲ್ಲಿದ್ದರು ಎಂದಷ್ಟೇ ಹೇಳುತ್ತಿದ್ದಾರೆ. ಅವರನ್ನು ಕ್ವಾರಂಟೈನ್ ಮಾಡಿಲ್ಲ ಎನ್ನಲಾಗಿದೆ.




ಅಪಾರ್ಟ್‌ಮೆಂಟ್ ಮುಂದಿನ ರಸ್ತೆಯನ್ನು ಸೀಲ್‌ಡೌನ್ ಮಾಡಿರುವುದು.

### ಹೆಚ್ಚು ತೊಂದರೆ ಇರುವವರು ಆಸ್ಪತ್ರೆಗೆ

ರೂಪಾಂತರಿ ವೈರಸ್ ಪತ್ತೆಯಾದ ಸೋಂಕಿತರೊಂದಿಗೆ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರ ಪೈಕಿ 60 ವರ್ಷ ಮೇಲ್ಪಟ್ಟವರು ಮತ್ತು ಮಕ್ಕಳಿಗೆ ಸೋಂಕು ತಗುಲುವ ಆತಂಕ ಹೆಚ್ಚಾಗಿರಲಿದೆ. ಹಾಗಾಗಿ, ಹೆಚ್ಚಿನ ಅಪಾಯಕ್ಕೆ ತುತ್ತಾಗುವವರ ಆಸ್ಪತ್ರೆಗೆ ದಾಖಲಿಸಲಾಗುವುದು. ಕಡಿಮೆ ಅಪಾಯ ಇರುವವರನ್ನು ಹೋಂ ಕ್ವಾರಂಟೈನ್ ಅಥವಾ ಆರೈಕೆ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗುವುದು ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ರಾಜೇಂದ್ರ ಚೋಳನ್ ಹೇಳಿದ್ದಾರೆ.

### ಹೊಸ ವೈರಸ್ ಪತ್ತೆ ಆಗುತ್ತಿದ್ದಂತೆ ಸ್ಥಳೀಯರಿಗೆ ಆತಂಕ

**ಬೆಂಗಳೂರು:** ನಗರದಲ್ಲಿ ಕೊರೋನಾ ರೂಪಾಂತರ ಸೋಂಕು ದೃಢಪಟ್ಟಿರುವ ಬಿಬಿಎಂಪಿಯ ದಕ್ಷಿಣ ವಲಯದ ಜೆ.ಪಿ ನಗರದ ಮೂರನೇ ಹಂತ ಹಾಗೂ ಬೊಮ್ಮನಹಳ್ಳಿಯ ವಸಂತಪುರದ ಸಿರಿ ಎಂಬೆಸಿ ಅಪಾರ್ಟ್‌ಮೆಂಟ್ ಸುತ್ತಮುತ್ತಲ ಪ್ರದೇಶದ ನಾಗರಿಕರಲ್ಲಿ ಸೋಂಕಿನ ಆತಂಕ ಶುರುವಾಗಿದೆ.

ಸೋಂಕಿತರ ಮನೆಯ ಸುತ್ತಮುತ್ತಲ ರಸ್ತೆಗಳಲ್ಲಿ ಬಂದ್ ವಾತಾವರಣ ನಿರ್ಮಾಣವಾಗಿತ್ತು. ಪಾಲಿಕೆಯ ಆರೋಗ್ಯಾಧಿಕಾರಿಗಳು ಈ ಪ್ರದೇಶಗಳಲ್ಲಿ ಸ್ಯಾನಿಟೈಸ್ ಮಾಡಲು ಪ್ರಾರಂಭಿಸುತ್ತಿದ್ದಂತೆಯೇ ಸ್ಥಳೀಯರು ಮನೆ ಸೇರಿಕೊಳ್ಳುತ್ತಿದ್ದ ದೃಶ್ಯಗಳು ಕಂಡು ಬಂದವು.

ಈ ಸಂಬಂಧ ಪ್ರತಿಕ್ರಿಯೆ ನೀಡಿದ ಪಾಲಿಕೆಯ ಮುಖ್ಯ ಆರೋಗ್ಯಾಧಿಕಾರಿ ವಿಜಯೇಂದ್ರ, ನಗರದಲ್ಲಿ ರೂಪಾಂತರಿ ಕೊರೋನಾ ಸೋಂಕು ದೃಢಪಟ್ಟವರ ಸಂಪರ್ಕದಲ್ಲಿದ್ದವರನ್ನು ಐಸೋಲೇಷನ್ ಮಾಡಲಾಗಿದೆ. ಇದನ್ನು ಹೊರತುಪಡಿಸಿ ಇಡೀ ಪ್ರದೇಶವನ್ನು ಸೀಲ್‌ಡೌನ್ ಅಥವಾ ಲಾಕ್‌ಡೌನ್ ಮಾಡುವುದಕ್ಕೆ ನಮಗೆ ಯಾವುದೇ ನಿರ್ದೇಶನ ಬಂದಿಲ್ಲ ಎಂದು ತಿಳಿಸಿದರು.

ಕನ್ನಡಪ್ರಭ

**ಮೊದಲ ಕೇಸ್** ಮಾ.9ರಂದು ಬೆಂಗಳೂರು ಮೂಲಕವೇ ಚೀನಾ ವೈರಸ್ ರಾಜ್ಯಕ್ಕೆ ಬಂದಿತ್ತು | ಬ್ರಿಟನ್ ವೈರಸ್‌ನ ರಾಜ್ಯದ ಮೊದಲ ಕೇಸ್ ಸಹ ಇಲ್ಲೇ ಪತ್ತೆ

# ಬ್ರಿಟನ್ ವೈರಸ್‌ಗೂ ಸಿಲಿಕಾನ್ ಸಿಟಿಯೇ ಹೆಬ್ಬಾಗಿಲು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮಾ.9ರಂದು ಬೆಂಗಳೂರು ಮೂಲಕವೇ ರಾಜ್ಯಕ್ಕೆ ಕಾಲಿಟ್ಟ 'ಕೋವಿಡ್ 19' ಮೂಲ ವೈರಸ್ ಹತ್ತು ತಿಂಗಳಲ್ಲಿ 9 ಲಕ್ಷಕ್ಕೂ ಹೆಚ್ಚು ಜನರಿಗೆ ಹರಡಿ, 12 ಸಾವಿರಕ್ಕೂ ಹೆಚ್ಚು ಜನರ ಬಲಿ ಪಡೆದರೂ ಇನ್ನೂ ತನ್ನ ಆರ್ಭಟ ನಿಲ್ಲಿಸಿಲ್ಲ. ಈಗ ವೈರಸ್‌ನ ರೂಪಾಂತರಿ ಪ್ರಭೇದ 'ಬಿ.1.1.7' ಕೂಡ ಬೆಂಗಳೂರು ಮೂಲಕವೇ ರಾಜ್ಯಕ್ಕೆ ಕಾಲಿಟ್ಟಿದ್ದು ಜನರಲ್ಲಿ ಆತಂಕ ಹೆಚ್ಚಿಸಿದೆ.

ಚೀನಾದಲ್ಲಿ ಉದ್ಭವಿಸಿದ ಮೂಲ ವೈರಸ್ ರಾಜ್ಯಕ್ಕೆ ಪ್ರವೇಶಿಸಿದ ಸಂದರ್ಭದಲ್ಲಿ ಮಾಡಿದ ಎಡವಟ್ಟುಗಳನ್ನೇ ಈ ಬಾರಿಯೂ ಸರ್ಕಾರ ಪುನರಾವರ್ತಿಸಿದೆ. ಅಂದರೆ ಬ್ರಿಟನ್ ಹಾಗೂ ಇತರ ವಿದೇಶಗಳಿಂದ ಬಂದವರನ್ನು ವಿಮಾನ ನಿಲ್ದಾಣದಲ್ಲಿ ಕೊರೋನಾ ಟೆಸ್ಟ್‌ಗೆ ಒಳಪಡಿಸದೇ ಮನೆಗೆ ಕಳಿಸಲಾಗಿದೆ. ಈಗ ಇಂಥವರಿಂದಲೇ ಸೋಂಕು ಹರಡುವಿಕೆ ಆರಂಭವಾಗಿದ್ದು, ಹೀಗಾಗಿ ಮತ್ತೆ ಸೋಂಕು ಸಂಖ್ಯೆ ಹೆಚ್ಚುವುದೇ ಎಂಬ ಆತಂಕ ಸೃಷ್ಟಿಯಾಗಿದೆ.

**300ಕ್ಕೂ ಅಧಿಕ ಮಂದಿ ನಾಪತ್ತೆ:** ಏಕೆಂದರೆ, ಸರ್ಕಾರದ ಅಂಕಿ ಅಂಶಗಳ ಪ್ರಕಾರವೇ ಡಿಸೆಂಬರ್ ತಿಂಗಳಲ್ಲಿ ಬ್ರಿಟನ್‌ನಿಂದ 2127 ಜನರು ರಾಜ್ಯಕ್ಕೆ ಆಗಮಿಸಿದ್ದಾರೆ. ಇವರಲ್ಲಿ ಇದುವರೆಗೂ 1766 ಜನರನ್ನು ಪತ್ತೆ ಹಚ್ಚಿ ಕೋವಿಡ್ ಪರೀಕ್ಷೆ ನಡೆಸಲಾಗಿದೆ. ಉಳಿದ 300ಕ್ಕೂ ಹೆಚ್ಚು ಮಂದಿ ನಾಪತ್ತೆಯಾಗಿದ್ದಾರೆ. ನಾಮಪತ್ತೆಯಾಗಿರುವ ಎಷ್ಟು ಜನರಲ್ಲಿ ಬ್ರಿಟನ್ ವೈರಸ್ ಇದೆಯೋ ಗೊತ್ತಿಲ್ಲ. ಅವರಿಂದ ರೂಪಾಂತರಿ ವೈರಸ್ ಹರಡಲಾರಂಭಿಸಿದೆಯಾ ಎಂಬ ಭಯ ಸಾರ್ವಜನಿಕರಲ್ಲಿ ಶುರುವಾಗಿದೆ.

**ಸಮೂಹಕ್ಕೆ ಹರಡುವ ಭೀತಿ:** ಆರೋಗ್ಯ ಇಲಾಖೆ ತಾನು ಪತ್ತೆ ಹಚ್ಚಲಾಗದ ಬ್ರಿಟನ್ ಪ್ರವಾಸಿಗಳನ್ನು ಹುಡುಕಿಕೊಡುವಂತೆ ಪೊಲೀಸರ ಮೊರೆ ಹೋಗಿದೆ. ನಾಪತ್ತೆಯಾಗಿರುವವರು ತಾವಾಗೇ ಬಂದು ಪರೀಕ್ಷೆಗೆ ಒಳಗಾಗಿದ್ದರೆ ಕಾನೂನು ಕ್ರಮ ಎಚ್ಚರಿಕೆಯನ್ನೂ ನೀಡಿದೆ. ಈಗಾಗಲೇ ಅವರೆಲ್ಲರೂ ರಾಜ್ಯಕ್ಕೆ ಹಿಂತಿರುಗಿ ಏಳೆಂಟು ದಿನ ಕಳೆದಿದೆ. ಇಷ್ಟು ದಿನ ಅವರು ಎಲ್ಲಿದ್ದರು, ಯಾರ್‍ಯಾರ ಸಂಪರ್ಕದಲ್ಲಿದ್ದರು ಎಂಬುದನ್ನು ಪತ್ತೆ ಹಚ್ಚುವುದೇ ಹರಸಾಹಸದ ಕೆಲಸ. ಈ ವೇಳೆಗೆ ಅವರಲ್ಲಿ ಕೆಲವರಿಗಾದರೂ ರೂಪಾಂತರಿ ವೈರಸ್ ಸೋಂಕಿದ್ದರೆ ಅದು ಸಮೂಹಕ್ಕೆ ಹರಡುವ ಭೀತಿಯಿದೆ.

## ಬ್ರಿಟನ್ ವೈರಸ್ ಜತೆ 2ನೇ ಅಲೆ ಎಚ್ಚರಿಕೆ

ಇದರ ಮಧ್ಯೆ ಜನವರಿ ಅಥವಾ ಫೆಬ್ರವರಿಯಲ್ಲಿ ಕೊರೋನಾ ಎರಡನೇ ಅಲೆ ಏಳುವ ಸಾಧ್ಯತೆಗಳಿವೆ ಎಂದು ತಜ್ಞರ ಎಚ್ಚರಿಕೆಯೂ ಇದೆ. ಹೀಗಾಗಿ ವೇಗವಾಗಿ ಹರಡುವ ರೂಪಾಂತರಿ ಕರೋನಾ ಜತೆಗೆ ಎರಡನೇ ಅಲೆಯೂ ಆರಂಭವಾಗಿಬಿಟ್ಟರೆ ಎಂಬ ಆತಂಕ ಸಾರ್ವಜನಿಕರನ್ನು ಕಾಡುತ್ತಿದೆ. ಆದರೆ, ತಜ್ಞರ ಪ್ರಕಾರ ಅಂತಹ ಪರಿಸ್ಥಿತಿ ಉದ್ಭವಿಸುವ ಸಾಧ್ಯತೆ ಕಡಿಮೆ. ಏಕೆಂದರೆ, ಬ್ರಿಟನ್ ಕೊರೋನಾ ಮಾರಕತೆ ತೀವ್ರವಾಗಿಲ್ಲ, ಇನ್ನು ಸಮೂಹದಲ್ಲಿ ಹರ್ಡ್ ಇಮ್ಯೂನಿಟಿ ಬಂದಿರುವ ಸಾಧ್ಯತೆಯೂ ಇರುವುದರಿಂದ ಎರಡನೇ ಅಲೆ ಆರಂಭವಾಗುವ ಸಾಧ್ಯತೆಯೂ ತೀರಾ ಕ್ಷೀಣ. ವೇಗವಾಗಿ ಹರಡಲಿದೆ ಎಂದು ಹೇಳಲಾಗುತ್ತಿರುವ ರೂಪಾಂತರಿ ವೈರಸ್ ರಾಜ್ಯಕ್ಕೆ ಕಾಲಿಟ್ಟಿರುವುದು ಈಗಾಗಲೇ ಕೋವಿಡ್‌ನಿಂದ ತೀವ್ರ ಸಂಕಷ್ಟ ಅನುಭವಿಸಿರುವ ಸಾರ್ವಜನಿಕರಲ್ಲಿ ಮತ್ತಷ್ಟು ಆತಂಕ ಹೆಚ್ಚಿಸಿದೆ.

ಕನ್ನಡಪ್ರಭ

# ಬ್ರಿಟನ್‌ನಿಂದ ನಗರಕ್ಕೆ ಬಂದಿದ್ದ ಮತ್ತೊಬ್ಬರಿಗೆ ಕೊರೋನಾ ದೃಢ

**ಬೆಂಗಳೂರು:** ರೂಪಾಂತರಿ ಕೊರೋನಾ ವೈರಸ್ ಪತ್ತೆಯಾಗಿರುವ ಬ್ರಿಟನ್‌ನಿಂದ ಬೆಂಗಳೂರು ನಗರಕ್ಕೆ ಹಿಂದಿರುಗಿರುವವರ ಪೈಕಿ ಮಂಗಳವಾರ ಮತ್ತೊಬ್ಬ ವ್ಯಕ್ತಿಗೆ ಕೊರೋನಾ ಸೋಂಕು ದೃಢಪಟ್ಟಿದ್ದು, ಇದರೊಂದಿಗೆ ಒಟ್ಟು ಸೋಂಕಿತರ ಸಂಖ್ಯೆ 17ಕ್ಕೆ ಏರಿಕೆಯಾಗಿದೆ. ಡಿ.1ರಿಂದ 21ವರೆಗೆ ಬ್ರಿಟನ್‌ನಿಂದ ಒಟ್ಟು 1,456 ಮಂದಿ ಬೆಂಗಳೂರು ನಗರಕ್ಕೆ ವಾಪಸ್ಸಾಗಿದ್ದಾರೆ. ಈ ಪೈಕಿ ಬಿಬಿಎಂಪಿ 1,290 ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಿದೆ. ಇನ್ನು 13 ಮಂದಿಯ ಸೋಂಕು ಪರೀಕ್ಷೆ ಬಾಕಿ ಇದೆ. ಈ ಪೈಕಿ 17 ಮಂದಿಗೆ ಸೋಂಕು ಪತ್ತೆಯಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

**ನಾಪತ್ತೆ ವಿವರ ಮುಚ್ಚಿಡುವ ಯತ್ನ?:** ಈ ಮಧ್ಯೆ ಬ್ರಿಟನ್ನಿಂದ ಬೆಂಗಳೂರಿಗೆ ವಾಪಸಾದ ಪ್ರಯಾಣಿಕರಲ್ಲಿ ನಾಪತ್ತೆಯಾದವರ ಸಂಖ್ಯೆಯನ್ನು ಬಿಬಿಎಂಪಿ ಹಾಗೂ ಆರೋಗ್ಯ ಇಲಾಖೆ ಮುಚ್ಚಿಡುವ ಪ್ರಯತ್ನ ನಡೆಸುತ್ತಿರುವ ಅನುಮಾನ ವ್ಯಕ್ತವಾಗಿದೆ. ಮಂಗಳವಾರ ನಾಪತ್ತೆ ವಿವರಗಳನ್ನು ಮಾಧ್ಯಮಗಳಿಗೆ ನೀಡಿಲ್ಲ. ಕಳೆದ ಶನಿವಾರ ಬಿಬಿಎಂಪಿ ಅಧಿಕಾರಿಗಳು ಬ್ರಿಟನ್‌ನಿಂದ ಬೆಂಗಳೂರು ನಗರಕ್ಕೆ ಆಗಮಿಸಿದವರ ಪೈಕಿ 220 ಮಂದಿ ನಾಪತ್ತೆಯಾಗಿದ್ದು, ಅವರ ಸಂಪರ್ಕಕ್ಕೆ ಲಭ್ಯವಾಗುತ್ತಿಲ್ಲ ಎಂದು ಮಾಹಿತಿ ನೀಡಿದ್ದರು. ಭಾನುವಾರದ ವೇಳೆ ಕೆಲವರು ಪತ್ತೆಯಾಗಿದ್ದು, ಸಂಪರ್ಕಕ್ಕೆ ಲಭ್ಯವಾಗದವರ ಸಂಖ್ಯೆ 204ಕ್ಕೆ ಇಳಿಕೆಯಾಗಿತ್ತು. ಆದರೆ ಸೋಮವಾರದ ವರದಿಯಲ್ಲಿ ನಾಪತ್ತೆ ಸಂಖ್ಯೆ ಮತ್ತೆ 214ಕ್ಕೆ ಏರಿಕೆಯಾಗಿತ್ತು.

ಕನ್ನಡಪ್ರಭ

# ಕೊರೋನಾ ಭೀತಿ ನಡುವೆಯೇ ಹೊಸ ವರ್ಷಾಚರಣೆಗೆ ಸಜ್ಜು!

## ನ್ಯೂಯರ್ ಪಾರ್ಟಿಗಳಿಗೆ ಬೆಂಗ್ಳೂರು ಸೇರಿ ರಾಜ್ಯಾದ್ಯಂತ ಸಿದ್ಧತೆ

## ಪ್ರವಾಸಿ ತಾಣಗಳತ್ತ ಜನರು | ಹೋಟೆಲ್‌ಗಳಲ್ಲಿ ಬುಕ್ಕಿಂಗ್ ಕ್ಲೋಸ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೊರೋನಾ ಹೊಸ ಅಲೆಯ ಭೀತಿಯ ನಡುವೆಯೂ ಸಮೀಪಿಸುತ್ತಿರುವ '2021ರ ಹೊಸ ವರ್ಷ'ವನ್ನು ಸ್ವಾಗತಿಸಲು ರಾಜಧಾನಿ ಬೆಂಗಳೂರು ಸೇರಿದಂತೆ ರಾಜ್ಯದೆಲ್ಲೆಡೆ ಸಿದ್ಧತೆಗಳು ನಡೆದಿವೆ. ಪ್ರತಿಷ್ಠಿತ ಕೆಲ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ರೆಸಾರ್ಟ್‌ಗಳು ಪ್ಯಾಕೇಜ್‌ಗಳನ್ನು ಘೋಷಿಸುವ ಮೂಲಕ ಗ್ರಾಹಕರನ್ನು ಸೆಳೆಯುತ್ತಿವೆ.

ಕಳೆದ ಏಳೆಂಟು ತಿಂಗಳಿಂದ ಕೊರೋನಾ ವೈರಸ್ ಹಾವಳಿಯಿಂದ ಬೇಸತ್ತಿದ್ದವರಿಗೆ ಸೋಂಕಿನ ಪ್ರಮಾಣ ಕಡಿಮೆಯಾಗುತ್ತಿರುವುದು ಸಂಭ್ರಮಕ್ಕೆ ಕಾರಣವಾಗಿದೆ. ಬೆಂಗಳೂರಿನಲ್ಲಿ ಕೆಲವು ನಿರ್ಬಂಧದೊಂದಿಗೆ ವರ್ಷಾಚರಣೆಗೆ ಅವಕಾಶ ನೀಡಿರುವ ಹಿನ್ನೆಲೆಯಲ್ಲಿ ಗ್ರಾಹಕರನ್ನು ಸೆಳೆಯಲು ಕ್ಲಬ್, ರೆಸಾರ್ಟ್, ಹೊಟೇಲ್, ಪಬ್‌ಗಳು ಹಲವು ಕೊಡುಗೆಗಳನ್ನು ಘೋಷಿಸುತ್ತಿವೆ.

**ಶೇ.90ರಷ್ಟು ಬುಕ್ಕಿಂಗ್?:** ಬೆಂಗಳೂರು ಹಾಗೂ ರಾಜ್ಯದ ಎಲ್ಲಾ ರೆಸ್ಟೋರೆಂಟ್‌ಗಳು, ಹೋಟೆಲ್‌ಗಳು, ರೆಸಾಟ್‌ರ್‌ಗಳು, ಮಾಲ್‌ಗಳು ಗ್ರಾಹಕರನ್ನು ಆಕರ್ಷಿಸಲು ಶೃಂಗಾರಗೊಂಡಿವೆ. ಕೆಲಹೋಟೆಲ್‌ಗಳಲ್ಲಿಯುವಜನರನ್ನು ಸೆಳೆಯಲು ಮನಸೆಳೆಯುವ ಪಾರ್ಟಿ, ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಚಿಕ್ಕಮಗಳೂರು, ಕೊಡಗು, ಕರಾವಳಿ ಹಾಗೂ ಮಲೆನಾಡಿನ ವಿವಿಧ ಪ್ರವಾಸಿತಾಣಗಳು, ರೆಸಾಟ್‌ರ್‌ಗಳು, ರೆಸ್ಟೋರೆಂಟ್‌ಗಳು, ಹೋಂ ಸ್ಟೇಗಳು, ದೊಡ್ಡಮಟ್ಟದ ಹೋಟೆಲ್‌ಗಳತ್ತ ಪ್ರವಾಸಿಗರು ಹೆಜ್ಜೆ ಹಾಕಿದ್ದಾರೆ. ಇನ್ನು ಬೆಂಗಳೂರಿಗೆ ಸಮೀಪವಿರುವ ಕನಕಪುರ, ರಾಮನಗರ, ಸಕಲೇಶಪುರ, ಗೋಕರ್ಣ ರೆಸಾಟ್‌ರ್‌ಗಳು, ರೆಸ್ಟೋರೆಂಟ್‌ಗಳು, ಹೋಂ ಸ್ಟೇಗಳು, ದೊಡ್ಡಮಟ್ಟದ ಹೋಟೆಲ್‌ಗಳಲ್ಲೂ ಮುಂಗಡ ಬುಕ್ಕಿಂಗ್ ಭರದಿಂದ ಸಾಗಿದ್ದರೆ, ಕೆಲವು ಕಡೆಗಳಲ್ಲಿ ಮುಂಗಡ ಬುಕ್ಕಿಂಗ್ ಸಹ ಮುಗಿದಿದೆ.

**ರಾಜಧಾನಿಯಲ್ಲಿ ಪಾರ್ಟಿ ಮೆರುಗು!:** ಬೆಂಗಳೂರಿನಲ್ಲಿ ಕೊರೋನಾ ಪ್ರಕರಣಗಳು ಇಳಿಕೆ ಕಂಡಿರುವುದರಿಂದ ಮೋಜು, ಮಸ್ತಿ ಪ್ರಿಯರು ವರ್ಷಾಚರಣೆಗೆ ಕಾತುರದಿಂದ ಕಾಯುತ್ತಿದ್ದಾರೆ. ಡಿ.31ರ ರಾತ್ರಿ ನಗರದಲ್ಲಿ ವಾಹನಗಳನ್ನು ನಿರ್ಬಂಧಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಪಾರ್ಟಿ ಮಾಡದಂತೆ ಮುನ್ನೆಚ್ಚರಿಕೆಗಳನ್ನು ನೀಡಲಾಗಿದೆ. ಈ ಮಧ್ಯೆಯೂ ಕುಟುಂಬದ ಸದಸ್ಯರು, ಸ್ನೇಹಿತರು, ಆತ್ಮೀಯರೊಂದಿಗೆ ಹೊಸ ವರ್ಷವನ್ನು ಸ್ವಾಗತಿಸಲು ಜನರು ಸಿದ್ಧತೆಯಲ್ಲಿದ್ದಾರೆ. ನಗರದ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಜಯನಗರ, ಬೆಳ್ಳಂದೂರು ಹೀಗೆ ವಿವಿಧ ಪ್ರದೇಶಗಳ ಪ್ರತಿಷ್ಠಿತ ಕೆಲ ರೆಸ್ಟೋರೆಂಟ್, ಹೋಟೆಲ್‌ಗಳು ಸೌಲಭ್ಯಗಳನ್ನು ಕಲ್ಪಿಸುವುದರ ಮೇಲೆ 3-4 ಗಂಟೆಗೆ 2500 ರು., 4-5 ಸಾವಿರ ರು. ನಿಗದಿಪಡಿಸಿವೆ. ಆಸಕ್ತರು ಪಾರ್ಟಿಗಳಲ್ಲಿ ಪಾಲ್ಗೊಳ್ಳಲು ಬುಕ್ ಮೈಶೋ, ಥ್ರಿಲ್ಲೊಫಿಲಿಯಾ ವೆಬ್‌ಸೈಟ್ ವೀಕ್ಷಿಸಬಹುದು.

### ನಾಳೆ ರಾತ್ರಿ 10ರಿಂದಲೇ ಮೇಲ್ಸೇತುವೆಗಳು ಬಂದ್

**ಬೆಂಗಳೂರು:** ಹೊಸ ವರ್ಷಾಚರಣೆ ಸಂದರ್ಭದಲ್ಲಿ ರಸ್ತೆ ಅಪಘಾತಗಳಿಗೆ ನಿಯಂತ್ರಿಸುವ ಸಲುವಾಗಿ ನಗರದ ಎಲ್ಲ ಮೇಲ್ಸೇತುವೆಗಳಲ್ಲಿ ವಾಹನ ಸಂಚಾರವನ್ನು ಪೊಲೀಸ್ ಆಯುಕ್ತ ಕಮಲ್ ಪಂತ್ ನಿರ್ಬಂಧಿಸಿದ್ದಾರೆ. ನಗರ ವ್ಯಾಪ್ತಿಯಲ್ಲಿರುವ 44 ಮೇಲ್ಸೇತುವೆಗಳಲ್ಲಿ ಗುರುವಾರ ರಾತ್ರಿ 10 ಗಂಟೆಯಿಂದ ಶುಕ್ರವಾರ ಬೆಳಗ್ಗೆ 6ರ ವರೆಗೆ ವಾಹನಗಳ ಓಡಾಟಕ್ಕೆ ನಿಷೇಧಿಸಲಾಗಿದೆ. ಹೊಸ ವರ್ಷದ ಸ್ವಾಗತಿಸುವ ಸಡಗರದಲ್ಲಿ ಕೆಲವು ಮೇಲ್ಸೇತುವೆಗಳಲ್ಲಿ ವ್ಹೀಲಿಂಗ್ ಹಾಗೂ ಡ್ರ್ಯಾಗ್ ರೇಸ್ ಮಾಡುವ ಕಾರಣಕ್ಕೆ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಅದೇ ರೀತಿ ಹೊಸ ವರ್ಷಾಚರಣೆಗೆ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ರೆಸಿಡೆನ್ಸಿ ರಸ್ತೆ, ಸೆಂಟ್ ಮಾರ್ಕ್ಸ್ ರಸ್ತೆ ಮತ್ತು ಚರ್ಚ್ ಸ್ಟ್ರೀಟ್‌ಗಳಲ್ಲಿ ಜನರು ಗುಂಪು ಸೇರುವ ಸಾಧ್ಯತೆಗಳಿರುತ್ತವೆ. ಅದಕ್ಕಾಗಿ ಈ ರಸ್ತೆಗಳಲ್ಲಿ ವಾಹನಸಂಚಾರ ನಿರ್ಬಂಧ ವಿಧಿಸಿ ಮರ್ಯಾಯ ಮಾರ್ಗವನ್ನು ಕಲ್ಪಿಸಲಾಗಿದೆ ಎಂದಿದ್ದಾರೆ.

ಕನ್ನಡಪ್ರಭ

# ಬ್ರಿಟನ್ ವೈರಸ್ ಬಗ್ಗೆ ಆತಂಕ ಬೇಡ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲಿ ಈಗಾಗಲೇ ಅರ್ಧಕ್ಕಿಂತ ಹೆಚ್ಚು ಜನರಿಗೆ ಕೊರೋನಾ 19 ಸೋಂಕು ಬಂದು ಹೋಗಿದೆ. ಸಮುದಾಯದಲ್ಲಿ ರೋಗ ನಿರೋಧಕ ಶಕ್ತಿ ಬಂದಿರುವ ಲಕ್ಷಣಗಳಿವೆ. ಈ ಶಕ್ತಿಯು ರೂಪಾಂತರಿ ವೈರಸ್ ವಿರುದ್ಧದ ಹೋರಾಟಕ್ಕೂ ಸಹಕಾರಿಯಾಗಲಿದೆ. ಹಾಗಾಗಿ ಬ್ರಿಟನ್ ರೂಪಾಂತರಿ ವೈರಸ್ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ ಎನ್ನುತ್ತಾರೆ ತಜ್ಞರು.



ಬೆಂಗಳೂರಿನಲ್ಲಿ ಪ್ರಸ್ತುತ ಪತ್ತೆಯಾಗಿರುವ ಬ್ರಿಟನ್ ವೈರಸ್ 'ಬಿ.1.1.7' ಹೊಸ ವೈರಸ್ ಅಲ್ಲ. ಇದು ಕೋವಿಡ್-19ನ ರೂಪಾಂತರ ಅಷ್ಟೆ. ಇದು ಹರಡುವ ತೀವ್ರತೆ ಹೆಚ್ಚು ಎಂದು ಹೇಳಲಾಗುತ್ತಿದೆಯಾದರೂ ರೂಪಾಂತರ ವೈರಸ್‌ನ ಸಾಮರ್ಥ್ಯ ಮೂಲ ವೈರಸ್‌ಷ್ಟು ಇರುವುದಿಲ್ಲ. ಅಲ್ಲದೆ, ಈಗಾಗಲೇ ಶೇ.50ರಷ್ಟು ಜನರಿಗೆ ಕೋವಿಡ್ ಬಂದು ಹೋಗಿರುವುದರಿಂದ ಸಮುದಾಯದಲ್ಲಿ ಆ ವೈರಸ್ ವಿರುದ್ಧ ಹೋರಾಡುವ ರೋಗ ನಿರೋಧ ಶಕ್ತಿ ಹೆಚ್ಚಾಗಿದೆ. ಇದೇ ಶಕ್ತಿ ರೂಪಾಂತರ ವೈರಸ್ ವಿರುದ್ಧದ ಹೋರಾಟಕ್ಕೂ ಸಹಕಾರಿಯಾಗಲಿದೆ ಎಂದು ಜಯದೇವ ನಿರ್ದೇಶಕರೂ ಆದ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ ಡಾ.ಮಂಜುನಾಥ್ ಹೇಳಿದ್ದಾರೆ.

ಕನ್ನಡಪ್ರಭ Wed, 30 December 2020
https://kpepaper.asianetnews.com/c/57374683

ಕನ್ನಡಪ್ರಭ

# 3.87 ಲಕ್ಷ ದಾಟಿದ ಸೋಂಕಿತರ ಸಂಖ್ಯೆ

**ಬೆಂಗಳೂರು:** ನಗರದಲ್ಲಿ ಮಂಗಳವಾರ 370 ಜನರಲ್ಲಿ ಸೋಂಕು ಪತ್ತೆಯಾಗಿದ್ದು, 843 ಮಂದಿ ಗುಣಮುಖರಾಗಿದ್ದಾರೆ. ಇಬ್ಬರು ಸೋಂಕಿನಿಂದ ಮೃತಪಟ್ಟಿರುವವರದಿಯಾಗಿದೆ. ಈ ಮೂಲಕ ನಗರದಲ್ಲಿ ಈವರೆಗೆ ಒಟ್ಟು ಸೋಂಕಿತರ ಸಂಖ್ಯೆ 3,87,278ಕ್ಕೆ ಏರಿಕೆಯಾಗಿದ್ದು, ಗುಣಮುಖರ ಸಂಖ್ಯೆ 3,75,221ಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 7750ಕ್ಕೆ ಇಳಿಕೆಯಾಗಿದ್ದು, ಈ ಪೈಕಿ 92 ರೋಗಿಗಳ ಆರೋಗ್ಯ ಸ್ಥಿತಿ ಗಂಭೀರವಾಗಿದೆ. ಮಂಗಳವಾರ ಇಬ್ಬರು ಸೋಂಕಿನಿಂದ ಮೃತಪಟ್ಟಿದ್ದು, ಈವರೆಗೆ ಸೋಂಕಿನಿಂದ ಸಾವನ್ನಪ್ಪಿರುವವರ ಸಂಖ್ಯೆ 4306ಕ್ಕೆ ಏರಿಕೆಯಾಗಿದೆ.

ಕನ್ನಡಪ್ರಭ

# ಪತ್ತೆಯಾಗದ ಕ್ಯಾಬ್ ಚಾಲಕರು

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬ್ರಿಟನ್‌ನಿಂದ ಆಗಮಿಸಿದ ವಸಂತಪುರ ತಾಯಿ, ಮಗಳು ಡಿ.19 ಮತ್ತು 20ರಂದು ಆಟೋ ಹಾಗೂ ಕ್ಯಾಬ್‌ನಲ್ಲಿ ನಗರದ ವಿವಿಧೆಡೆ ಓಡಾಡಿದ್ದು, ಇದೀಗ ಆ ಚಾಲಕರು ಯಾರೆಂಬುದು ಪತ್ತೆಯಾಗಿಲ್ಲ. ಅವರನ್ನು ಪತ್ತೆ ಮಾಡುವುದು ದೊಡ್ಡ ತಲೆನೋವಾಗಿದೆ.

ಡಿ.19 ರಂದು ಬ್ರಿಟನ್‌ನಿಂದ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ವಸಂತಪುರದ ತಾಯಿ, ಮಗಳು ಏರ್ಪೋರ್ಟ್ ಟ್ಯಾಕ್ಸಿಯಲ್ಲಿ ವಸಂತಪುರದ ಸಿರಿ ಎಂಬೆಸಿ ಅಪಾರ್ಟ್‌ಮೆಂಟ್‌ಗೆ ತೆರಳಿದ್ದಾರೆ. ಆರೋಗ್ಯ ಸಮಸ್ಯೆ ಕಂಡು ಬಂದ ಹಿನ್ನೆಲೆ, ತಕ್ಷಣ ಆಟೋದಲ್ಲಿ ಆರ್‌ಬಿಐ ಲೇಔಟ್‌ನ ನೈಬರ್‌ಹುಡ್ ಖಾಸಗಿ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆದಿದ್ದಾರೆ. ಮರುದಿನ (ಡಿ.20) ಅದೇ ಆಸ್ಪತ್ರೆಗೆ ಪರೀಕ್ಷೆಗೆ ಹೋಗಿದ್ದರು. ಇದೀಗ ತಾಯಿ-ಮಗಳು ಇಬ್ಬರಿಗೂ ಬ್ರಿಟನ್ನ ರೂಪಾಂತರ ವೈರಾಣು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ನೈಬರ್‌ಹುಡ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ವೈದ್ಯ, ನರ್ಸ್, ಲ್ಯಾಬ್ ಟೆಕ್ನಿಷಿಯನ್ ಸೇರಿದಂತೆ ಒಟ್ಟು ನಾಲ್ವರನ್ನು ಕ್ವಾರಂಟೈನ್ ಮಾಡಲಾಗಿದೆ.

ವಿಜಯ ಕರ್ನಾಟಕ

ರೂಪಾಂತರ ಕೊರೊನಾ ಹಿನ್ನೆಲೆಯಲ್ಲಿ ಅಪಾರ್ಟ್‌ಮೆಂಟ್ ವಾಸಿಗಳಿಗೆ ದಿಗ್ಬಂಧನ

## ನಿಮ್ಹಾನ್ಸ್ ಆಸ್ಪತ್ರೆಯ ಐಸೊಲೇಶನ್ ವಾರ್ಡ್‌ನಲ್ಲಿ ಸೋಂಕಿತರಿಗೆ ಚಿಕಿತ್ಸೆ

# ಮತ್ತೆ ಬಂತು ಸೀಲ್‌ಡೌನ್!

**ವಿಕ ಸುದ್ದಿಲೋಕ** ಬೆಂಗಳೂರು

ಇಂಗ್ಲೆಂಡ್‌ನಿಂದ ನಗರಕ್ಕೆ ಬಂದಿದ್ದ 34 ವರ್ಷದ ಮಹಿಳೆ ಮತ್ತು ಅವರ ಮಗು ಸೇರಿ ಮೂವರಿಗೆ ಬ್ರಿಟನ್ ರೂಪಾಂತರ ಸೋಂಕು ತಗಲಿರುವುದು ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ತಾಯಿ ಮತ್ತು ಮಗು ನೆಲೆಸಿದ್ದ ವಸಂತಪುರ ವಾರ್ಡ್‌ನ ವಿಠ್ಠಲನಗರದಲ್ಲಿನ ಅಪಾರ್ಟ್‌ಮೆಂಟ್ ಅನ್ನು ಬಿಬಿಎಂಪಿ ಸೀಲ್‌ಡೌನ್ ಮಾಡಿದೆ.




ವಸಂತಪುರ ವಾರ್ಡ್‌ನ ವಿಠ್ಠಲನಗರದ ಅಪಾರ್ಟ್‌ಮೆಂಟ್ ಸೀಲ್‌ಡೌನ್ ಮಾಡಲಾಯಿತು.

**ಸೋಂಕಿತರ ಜತೆ ಪ್ರಾಥಮಿಕ ಸಂಪರ್ಕ ಹೊಂದಿದವರಿಗೆ ಹೋಮ್ ಕ್ವಾರಂಟೈನ್**

**ಹೋಟೆಲ್‌ಗೆ ತೆರಳಲು ನಿರಾಕರಿಸಿದ ಅಪಾರ್ಟ್‌ಮೆಂಟ್ ವಾಸಿಗಳು**

ನಗರದ ಮೂವರಿಗೆ ಹೊಸ ಸೋಂಕು ತಗಲಿರುವುದು ನಿಮ್ಹಾನ್ಸ್‌ನಲ್ಲಿ ನಡೆದ ವಂಶವಾಹಿ ಪರೀಕ್ಷೆ ವೇಳೆ ಗೊತ್ತಾಗಿದೆ. ಇವರನ್ನು ಆಸ್ಪತ್ರೆಯ ಐಸೋಲೇಷನ್ ವಾರ್ಡ್ ನಲ್ಲಿಟ್ಟು ಚಿಕಿತ್ಸೆ ನೀಡಲಾಗುತ್ತಿದೆ. ಸೋಂಕಿತರೊಂದಿಗೆ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಕ್ಕೆ ಬಂದವರನ್ನು ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ.

ಬ್ರಿಟನ್ ರೂಪಾಂತರ ಸೋಂಕಿತ ತಾಯಿ ಮತ್ತು ಮಗನೊಂದಿಗೆ ಪ್ರಾಥಮಿಕ ಸಂಪರ್ಕದಲ್ಲಿದ್ದ ಇಬ್ಬರು, ದ್ವಿತೀಯ ಸಂಪರ್ಕ ಹೊಂದಿದ್ದ 35 ಮಂದಿ ವಾಸವಿದ್ದ ಅಪಾರ್ಟ್‌ಮೆಂಟ್ ಅನ್ನು ಸೀಲ್‌ಡೌನ್ ಮಾಡಲಾಗಿದೆ. ಇಲ್ಲಿನ ನಿವಾಸಿಗಳು ಸಾಂಸ್ಥಿಕ ಕ್ವಾರಂಟೈನ್ ಕೇಂದ್ರಗಳಿಗೆ ತೆರಳಲು ನಿರಾಕರಿಸಿದ್ದರಿಂದಾಗಿ ಪಾಲಿಕೆಯು ಈ ಕ್ರಮ ಕೈಗೊಂಡಿದೆ. ಎಲ್ಲ ನಿವಾಸಿಗಳ ಗಂಟಲು ದ್ರವದ ಮಾದರಿ ಸಂಗ್ರಹಿಸಿ ಆರ್‌ಟಿಪಿಸಿಆರ್ ಪರೀಕ್ಷೆಗೆ ಕಳುಹಿಸಲಾಗಿದೆ.

ಸೋಂಕಿತರೊಂದಿಗೆ ಪ್ರಾಥಮಿಕ, ದ್ವಿತೀಯ ಸಂಪರ್ಕ ಹೊಂದಿದ್ದವರನ್ನು ಸಾಂಸ್ಥಿಕ ಕ್ವಾರಂಟೈನ್ ಕೇಂದ್ರಗಳಾಗಿರುವ ಹೋಟೆಲ್‌ಗಳಿಗೆ ಸ್ಥಳಾಂತರಿಸಲು ಸರಕಾರ ಸೂಚಿಸಿದೆ. ಆದರೆ, ಅಪಾರ್ಟ್‌ಮೆಂಟ್ ನಿವಾಸಿಗಳು ಹೋಟೆಲ್ ಕ್ವಾರಂಟೈನ್‌ಗೆ ನಿರಾಕರಿಸಿದ್ದು, ಹೋಮ್ ಕ್ವಾರಂಟೈನ್‌ಗೆ ಒಳಗಾಗಿದ್ದಾರೆ. ಹಾಗಾಗಿ, ಇಡೀ ಅಪಾರ್ಟ್‌ಮೆಂಟ್ ಅನ್ನು ಸೀಲ್‌ಡೌನ್ ಮಾಡಿ, ಇಬ್ಬರು ಪೊಲೀಸರನ್ನು ನಿಯೋಜಿಸಲಾಗಿದೆ.

''ಬ್ರಿಟನ್ ರೂಪಾಂತರ ಸೋಂಕು ತಗಲಿದ್ದ ತಾಯಿ ಮತ್ತು ಮಗು ವಾಸವಿದ್ದ ಅಪಾರ್ಟ್‌ಮೆಂಟ್‌ನ ಎಲ್ಲ ನಿವಾಸಿಗಳನ್ನು ಕ್ವಾರಂಟೈನ್ ಮಾಡಲಾಗಿದೆ. ಎಲ್ಲರನ್ನೂ 14 ದಿನಗಳ ಕಾಲ ಕ್ವಾರಂಟೈನ್‌ಗೆ ಒಳಪಡಿಸಲಾಗುತ್ತಿದೆ. ನಿತ್ಯ ಅಪಾರ್ಟ್‌ಮೆಂಟ್ ಆವರಣವನ್ನು ಸ್ಯಾನಿಟೈಸ್ ಮಾಡಿಸಲು ಕ್ರಮ ಕೈಗೊಳ್ಳಲಾಗಿದೆ,'' ಎಂದು ಬೊಮ್ಮನಹಳ್ಳಿ ವಲಯದ ಆರೋಗ್ಯಾಧಿಕಾರಿ ಡಾ. ಸುರೇಶ್ ಹೇಳಿದರು.

## ಸಂಪರ್ಕಕ್ಕೆ ಸಿಗದ 135 ಮಂದಿ

**ವಿಕ ಸುದ್ದಿಲೋಕ** ಬೆಂಗಳೂರು

ಬ್ರಿಟನ್‌ನಿಂದ ಹಿಂತಿರುಗಿರುವ ಇನ್ನೂ 135 ಜನರನ್ನು ನಗರದಲ್ಲಿ ಪತ್ತೆ ಮಾಡಬೇಕಾಗಿದ್ದು, ಅವರು ವಿಳಾಸದ ತಪ್ಪು ಮಾಹಿತಿ ನೀಡಿದ್ದಾರೆ ಎಂದು ತಿಳಿದು ಬಂದಿದೆ.

ಕೇಂದ್ರ ಸರಕಾರದ ಸೂಚನೆ ಅನುಸಾರ ಬ್ರಿಟನ್ ವಿಮಾನ ಸಂಚಾರ ಸ್ಥಗಿತಗೊಳಿಸುವವರೆಗೆ ನಗರಕ್ಕೆ ಆಗಮಿಸಿದ್ದ ಒಂದೂವರೆ ಸಾವಿರ ಪ್ರಯಾಣಿಕರನ್ನು ಗುರುತಿಸಲಾಗಿದೆ. ಆದರಲ್ಲಿ ಸುಮಾರು 1,300ಕ್ಕೂ ಹೆಚ್ಚು ಮಂದಿ ಸ್ವಯಂಪ್ರೇರಿತ ಹಾಗೂ ಕರೆ ಮಾಡಿದ ಬಳಿಕ ಬಂದು ಆರ್‌ಟಿ-ಪಿಸಿಆರ್ ಪರೀಕ್ಷೆ ಮಾಡಿಸಿಕೊಂಡಿದ್ದಾರೆ. ಅವರ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಿತರನ್ನು ಕೂಡ ಪತ್ತೆ ಹಚ್ಚಿ ಕ್ವಾರಂಟೈನ್‌ನಲ್ಲಿರುವಂತೆ ತಿಳಿಸಲಾಗಿದೆ.

34 ಜನರನ್ನು ಪೊಲೀಸ್ ನೆರವಿನೊಂದಿಗೆ ಪತ್ತೆ ಹಚ್ಚಲಾಗಿದೆ. ಆದರೆ, ಇನ್ನೂ 135 ಮಂದಿ ಪತ್ತೆಯಾಗಬೇಕಿದೆ. ಅವರು ಫೋನ್ ಸಂಪರ್ಕಕ್ಕೆ ಮತ್ತು ವಿಳಾಸದಲ್ಲಿ ಸಿಕ್ಕಿಲ್ಲ. ಬೇರೆ ಬೇರೆ ಮಾರ್ಗಗಳ ಮೂಲಕ ಹುಡುಕಾಟ ನಡೆಯುತ್ತಿದೆ ಎಂದು ಬಿಬಿಎಂಪಿ ಅಧಿಕಾರಿ ತಿಳಿಸಿದ್ದಾರೆ.

### ವಂಶವಾಹಿ ಪರೀಕ್ಷೆ

''ಬಿಬಿಎಂಪಿ ವ್ಯಾಪ್ತಿಯಲ್ಲಿ ಇಂಗ್ಲೆಂಡ್‌ನಿಂದ ಬಂದಿರುವ 16 ಮಂದಿಗೆ ಕೊರೊನಾ ಸೋಂಕು ತಗಲಿರುವುದು ಆರ್‌ಟಿಪಿಸಿಆರ್ ಪರೀಕ್ಷೆಯಿಂದ ದೃಢಪಟ್ಟಿದೆ. ಹಾಗಾಗಿ, ಇವರಿಗೆ ತಗಲಿರುವುದು ಬ್ರಿಟನ್ ರೂಪಾಂತರವೇ ಎಂಬುದನ್ನು ತಿಳಿಯಲು ವಂಶವಾಹಿ ಪರೀಕ್ಷೆಗೆ ನಿಮ್ಹಾನ್ಸ್‌ಗೆ ಕಳುಹಿಸಲಾಗಿದೆ. ಇವರೊಂದಿಗೆ ಪ್ರಾಥಮಿಕ ಸಂಪರ್ಕದಲ್ಲಿದ್ದ 45 ಮಂದಿ ಹೋಂ ಕ್ವಾರಂಟೈನ್‌ನಲ್ಲಿದ್ದಾರೆ,'' ಎಂದು ಪಾಲಿಕೆಯ ಮುಖ್ಯ ಆರೋಗ್ಯಾಧಿಕಾರಿ ಡಾ. ವಿಜಯೇಂದ್ರ ತಿಳಿಸಿದರು.

## 370 ಮಂದಿಗೆ ಕೊರೊನಾ ಸೋಂಕು

**ಬೆಂಗಳೂರು:** ನಗರದಲ್ಲಿ ಮಂಗಳವಾರ ಹೊಸದಾಗಿ 370 ಮಂದಿಯಲ್ಲಿ ಸೋಂಕು ಪತ್ತೆಯಾಗಿದೆ, ಇಬ್ಬರು ಬಲಿಯಾಗಿದ್ದಾರೆ. ನಗರ ಜಿಲ್ಲೆಯಲ್ಲಿ ಪತ್ತೆಯಾಗುತ್ತಿರುವ ಸೋಂಕಿತ ಪ್ರಕರಣಗಳಿಗಿಂತ ಗುಣಮುಖರಾಗುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಮಂಗಳವಾರ ಒಂದೇ ದಿನ 843 ಮಂದಿ ಚೇತರಿಸಿಕೊಂಡಿದ್ದಾರೆ. ನಗರದಲ್ಲಿ ಇದುವರೆಗೆ ಒಟ್ಟು 3,87,278 ಮಂದಿಗೆ ಸೋಂಕು ತಗಲಿರುವುದು ದೃಢಪಟ್ಟಿದೆ. ಈ ಪೈಕಿ 3,75,221 ಮಂದಿ ಗುಣಮುಖರಾಗಿದ್ದಾರೆ. ಉಳಿದ 7750 ರೋಗಿಗಳು ನಿಗದಿತ ಆಸ್ಪತ್ರೆ, ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಕೋವಿಡ್‌ನಿಂದ ನರಳುತ್ತಿದ್ದವರಲ್ಲಿ ಈವರೆಗೆ 4306 ಮಂದಿ ಸಾವಿಗೀಡಾಗಿದ್ದಾರೆ.

VK ವಿಜಯ ಕರ್ನಾಟಕ

### ಡಿ.9-22ರ ಅವಧಿಯಲ್ಲಿ ಬ್ರಿಟನ್‌ನಿಂದ ಬಂದವರಿಗೆ ತಪಾಸಣೆ

# ಡಿಎನ್‌ಎ ಪರೀಕ್ಷೆ ಕಡ್ಡಾಯ

**ಹೊಸದಿಲ್ಲಿ:** ಬ್ರಿಟನ್‌ನಿಂದ ಡಿ.9 ರಿಂದ 22ರರ ಅವಧಿಯಲ್ಲಿ ಭಾರತಕ್ಕೆ ಆಗಮಿಸಿ ಕೊರೊನಾ ತಪಾಸಣೆಯಲ್ಲಿ ಪಾಸಿಟಿವ್ ಬಂದಿರುವ ಎಲ್ಲ ಪ್ರಯಾಣಿಕರು 'ಜಿನೋಮ್ ಸೀಕ್ವೆನ್ಸಿಂಗ್' ಎಂಬ ಡಿಎನ್‌ಎ ಪರೀಕ್ಷೆಗೆ ಕಡ್ಡಾಯವಾಗಿ ಒಳಪಡಬೇಕಿದೆ. ರೂಪಾಂತರಿತ ವೈರಾಣು ಪ್ರಸರಣ ವೇಗವನ್ನು ಹೆಚ್ಚಿಸಿಕೊಂಡಿರುವ ಹಿನ್ನೆಲೆಯಲ್ಲಿ ಭಾರತದಲ್ಲಿ ಪ್ರಸರಣ ತಡೆಯಲು ಕೇಂದ್ರ ಸರಕಾರ ಈ ಕ್ರಮ ಕೈಗೊಂಡಿದೆ.

ರೂಪಾಂತರಿ ಕೊರೊನಾ ವೈರಾಣು ಭಾರತಕ್ಕೆ ಕಾಲಿಟ್ಟಿರುವ ಆತಂಕದ ನಡುವೆಯೇ ಆ ದೇಶದಿಂದ ಬಂದವರ ತಪಾಸಣೆ ಕುರಿತಂತೆ ಕೇಂದ್ರ ಸರಕಾರ ಮಂಗಳವಾರ ಮಾರ್ಗಸೂಚಿ ಪ್ರಕಟಿಸಿದೆ. ಡಿ.22ರೊಳಗೆ ಬ್ರಿಟನ್‌ನಿಂದ ಬಂದು ಕೊರೊನಾ ತಪಾಸಣೆಯಲ್ಲಿ ನೆಗೆಟಿವ್ ಬಂದಿದ್ದವರನ್ನು ಆಯಾ ರಾಜ್ಯಗಳಲ್ಲಿ ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳು ಮತ್ತು ಜಿಲ್ಲಾ ಆರೋಗ್ಯಾಧಿಕಾರಿಗಳು ಪತ್ತೆ ಮಾಡಿ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಮಾರ್ಗಸೂಚಿಯಂತೆ ಪರೀಕ್ಷೆಗೆ ಒಳಪಡಿಸಲಿದ್ದಾರೆ. ಈಗಾಗಲೇ ಬ್ರಿಟನ್ ಕೊರೊನಾ ವೈರಾಣು ಪತ್ತೆಗೆ ಸಾರ್ಸ್-ಕೋವ್-2 ಜಿನಾಮಿಕ್ಸ್ ಕನ್ಸಾರ್ಟಿಯಂ (ಐಎನ್‌ಎಸ್‌ಎಸಿಒಜಿ) ಪ್ರಯೋಗಾಲಯಗಳನ್ನು ಆರೋಗ್ಯ ಸಚಿವಾಲಯ ಸ್ಥಾಪಿಸಿದೆ. ದೇಶಾದ್ಯಂತ ಈ ಪ್ರಯೋಗಾಲಯದ ವ್ಯವಸ್ಥೆಗಳನ್ನು ವಿಸ್ತರಿಸಲಾಗುತ್ತಿದೆ. ಹೊಸ ಕೊರೊನಾ ಪ್ರಭೇದದ ಪ್ರಸರಣ ವೇಗ ಮತ್ತು ಅದರ ಗರಿಷ್ಠ ಪರಿಣಾಮಗಳ ಬಗ್ಗೆ ಸೂಕ್ಷ್ಮ ಅಧ್ಯಯನವನ್ನು ಐಸಿಎಂಆರ್ ಹಾಗೂ ತಜ್ಞ ವೈದ್ಯರುಗಳ ತಂಡ ಕೈಗೊಳ್ಳುತ್ತಿದೆ.

**ಲಸಿಕೆ ಕೆಲಸ ಮಾಡುತ್ತದೆ:** ಈಗ ಕ್ಲಿನಿಕಲ್ ಟ್ರಯಲ್ ಹಂತದಲ್ಲಿರುವ ಕೊರೊನಾ ನಿರೋಧಕ ಲಸಿಕೆಗಳು ರೂಪಾಂತರಿ ವೈರಾಣುವಿನ ಮೇಲೆಯೂ ಪರಿಣಾಮ ಬೀರಲಿದೆ ಎಂದು ಕೇಂದ್ರ ಸರಕಾರದ ಮುಖ್ಯ ವೈಜ್ಞಾನಿಕ ಸಲಹೆಗಾರ ಕೆ.ವಿಜಯ ರಾಘವನ್ ಹೇಳಿದ್ದಾರೆ. ''ಲಸಿಕೆಗಳು ಹೊಸ ವೈರಾಣುವಿನ ಮೇಲೆ ಕೆಲಸ ಮಾಡಲ್ಲ ಎನ್ನುವುದಕ್ಕೆ ಸದ್ಯ ಯಾವುದೇ ವೈಜ್ಞಾನಿಕ ಪುರಾವೆಗಳಿಲ್ಲ. ಹೊಸ ವೈರಾಣು ಮಾರಣಾಂತಿಕ ಅಲ್ಲ. ಆದರೆ ಅದರ ಪ್ರಸರಣ ವೇಗ ಹೆಚ್ಚಿರುವುದು ಆತಂಕ ಮೂಡಿಸಿದೆ,'' ಎಂದು ವಿಜಯ ರಾಘವನ್ ಹೇಳಿದ್ದಾರೆ.



### ಲಂಡನ್ ವೈರಸ್ ಮತ್ತೆಲ್ಲಿ ಕಂಡಿದೆ?

ಡೆನ್ಮಾರ್ಕ್, ನೆದರ್‌ಲ್ಯಾಂಡ್, ಆಸ್ಟ್ರೇಲಿಯಾ, ಇಟಲಿ, ಸ್ವೀಡನ್, ಕೆನಡಾ, ಸ್ಪೇನ್, ಸ್ವಿಟ್ಜರ್‌ಲೆಂಡ್, ಸಿಂಗಾಪುರ್, ಫ್ರಾನ್ಸ್

### 33,000

ಡಿ.22ರ ಮಧ್ಯರಾತ್ರಿವರೆಗೂ ಬ್ರಿಟನ್‌ನಿಂದ ದೇಶದ ಹಲವು ಏರ್‌ಪೋರ್ಟ್‌ಗಳಿಗೆ ಬಂದು ಇಳಿದಿರವ ಪ್ರಯಾಣಿಕರು

### 6 ಮಂದಿಗೆ ಬ್ರಿಟನ್ ಸೋಂಕು ದೃಢ

ಬ್ರಿಟನ್‌ನಿಂದ ಬಂದ ಆರು ಮಂದಿಯಲ್ಲಿ ರೂಪಾಂತರಿ ವೈರಾಣು ಪತ್ತೆಯಾಗಿದೆ. ಆ ಪೈಕಿ ಮೂವರನ್ನು ಬೆಂಗಳೂರಿನಲ್ಲಿರುವ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ಆಸ್ಪತ್ರೆ(ನಿಮ್ಹಾನ್ಸ್)ಯಲ್ಲಿ ಐಸೋಲೇಷನ್‌ನಲ್ಲಿ ಇರಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಇದೇ ರೀತಿ ಹೈದರಾಬಾದ್‌ನಲ್ಲಿ ಇಬ್ಬರು, ಪುಣೆಯಲ್ಲಿ ಒಬ್ಬ ಸೋಂಕಿತರನ್ನು ಇರಿಸಲಾಗಿದೆ. ಸೋಂಕಿತರೊಂದಿಗೆ ಪ್ರಯಾಣಿಸಿದವರು, ಅವರನ್ನು ಭೇಟಿಯಾದವರು, ಕುಟುಂಬಸ್ಥರನ್ನು ಕೂಡ ಪತ್ತೆ ಮಾಡಿ ಅವರನ್ನು ಕೂಡ ಪರೀಕ್ಷೆಗೆ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಪಡಿಸುವ ಕಾರ್ಯ ಪ್ರಗತಿಯಲ್ಲಿದೆ.

### ಜಿನೋಮ್ ಸೀಕ್ವೆನ್ಸಿಂಗ್ ಪರೀಕ್ಷೆ ಎಂದರೇನು?

ಒಂದು ಜೀವಿಯ ರಚನೆಯ ಎಲ್ಲ ಮಾಹಿತಿಗಳನ್ನು ಒಳಗೊಂಡ ಅತಿಸಣ್ಣ ಧಾತು 'ಡಿಎನ್‌ಎ'(ಡಿಯೊಕ್ಸಿರೈಬೊ ನ್ಯೂಕ್ಲಿಕ್ ಆ್ಯಸಿಡ್) ಎಲ್ಲರ ದೇಹದೊಳಗೂ ಅಡಕವಾಗಿರುತ್ತದೆ. ಅಡೆನೈನ್(ಎ), ಗುವಾನೈನ್(ಜಿ), ಥೈಮೈನ್(ಟಿ) ಹಾಗೂ ಸಿಸ್ಟೊಸೈನ್ (ಸಿ) ಎಂಬ ಕಣಗಳಿಂದ ಪ್ರತಿ ಜೀವಿಯಲ್ಲೂ ವಿಭಿನ್ನ ಮಾಧರಿಗಳಲ್ಲಿ ಡಿಎನ್‌ಎ ರಚನೆಯಾಗಿರುತ್ತದೆ. ಇಂಥ ಕಣಗಳ ರಚನೆಯನ್ನು ಸೂಕ್ಷ್ಮವಾಗಿ ಗಮನಿಸಿ ಅದರ ಮಾದರಿಯನ್ನು ಅರಿಯುವುದಕ್ಕೆ 'ಜಿನೋಮ್ ಸಿಕ್ವೆನ್ಸಿಂಗ್' ಎನ್ನಲಾಗುತ್ತದೆ. ಮಾನವ ದೇಹದಲ್ಲಿನ ಒಂದು ಜಿನೋಮ್ ಸುಮಾರು 300 ಕೋಟಿಯಷ್ಟು ಎ,ಜಿ,ಟಿ,ಸಿ ಕಣಗಳಿಂದ ರಚಿಸಲ್ಪಟ್ಟಿದೆ. ಈ ಡಿಎನ್‌ಎ ರಚನಾ ಮಾದರಿಯನ್ನು ಆಧರಿಸಿ ಬ್ರಿಟನ್‌ನಲ್ಲಿ ಪತ್ತೆಯಾಗಿರುವ ರೂಪಾಂತರಿತ ಕೊರೊನಾ ಸೋಂಕಿತರಿಂದ ಪಡೆದ ರಕ್ತ, ಗಂಟಲು ದ್ರವಗಳ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಇದುವರೆಗೂ ಪತ್ತೆಯಾಗಿರುವ ಕೊರೊನಾ ವೈರಾಣು ರಚನೆ ಮಾದರಿಗಳಿಗಿಂತ ಇದು ಹೇಗೆ ಭಿನ್ನವಾಗಿದೆ ಎಂದು ಕೂಲಂಕಷ ಅಧ್ಯಯನ ನಡೆಸಲಾಗುತ್ತದೆ. ವಿಭಿನ್ನ ರಚನಾ ಮಾದರಿಯಿದ್ದಲ್ಲಿ ಅದು ಕೊರೊನಾ ವೈರಾಣುವಿನ ಆಧುನಿಕ ರೂಪಾಂತರ ಎಂದು ಪರಿಗಣಿಸಿ ನಿಗಾದಲ್ಲಿ ಇರಿಸಲಾಗುತ್ತದೆ.

### ಮುನ್ನೆಚ್ಚರಿಕೆ ಕಾರ್ಯತಂತ್ರದ ಹೆಜ್ಜೆಗಳು

- ಡಿ.31ರವರೆಗೆ ಬ್ರಿಟನ್‌ಗೆ ಹೋಗುವ, ಅಲ್ಲಿಂದ ಬರುವ ವಿಮಾನಗಳು ಬಂದ್, ಅಗತ್ಯ ಬಿದ್ದರೆ ನಿರ್ಬಂಧ ವಿಸ್ತರಣೆ
- ಈಗಾಗಲೇ ದೇಶಕ್ಕೆ ಕಾಲಿಟ್ಟಿರುವ ಎಲ್ಲ ಬ್ರಿಟನ್ ಯಾತ್ರಿಕರಿಗೂ ಕಡ್ಡಾಯ ಆರ್‌ಟಿ-ಪಿಸಿಆರ್ ಟೆಸ್ಟ್
- 10 ಪ್ರಾದೇಶಿಕ ಪ್ರಯೋಗಾಲಯಗಳ ಸ್ಥಾಪನೆ, ಎಲ್ಲ ರಾಜ್ಯಗಳಿಂದ ಬರುವ ಕೊರೊನಾ ಸೋಂಕಿತರ 5% ಮಾದರಿಗಳ ಜಿನೋಮ್ ಸೀಕ್ವೆನ್ಸಿಂಗ್ ಪರೀಕ್ಷೆ
- ಆರೋಗ್ಯ ಸಚಿವಾಲಯದಿಂದ ಹೊಸ ಬ್ರಿಟನ್ ಪ್ರಭೇದ ಪ್ರಸರಣ ತಡೆಗೆ ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸಿಜರ್ (ಎಸ್‌ಒಪಿ) ಬಿಡುಗಡೆ

### ಜನ ಏನು ಮಾಡಬೇಕು?

- ಮೂಗು ಮುಚ್ಚಿಕೊಳ್ಳುವಂತೆ ಮಾಸ್ಕ್ ಧರಿಸುವುದನ್ನು ರೂಢಿಸಿಕೊಳ್ಳಬೇಕು
- ಸಾಮಾಜಿಕ ಅಂತರ ಕಾಪಾಡಿಕೊಳ್ಳುವುದನ್ನು ಮರೆಯಬಾರದು
- ನಿಯಮಿತವಾಗಿ ಸಾಬೂನಿನಿಂದ ಕೈ ತೊಳೆದುಕೊಳ್ಳಬೇಕು ಅಥವಾ ಸ್ಯಾನಿಟೈಸರ್ ಬಳಸಬೇಕು

VK
ವಿಜಯ ಕರ್ನಾಟಕ

ಬೆಂಗಳೂರಿನ ಮೂವರು ಸೇರಿ ಭಾರತದ 6 ಮಂದಿಯಲ್ಲಿ ರೂಪಾಂತರಿ ವೈರಸ್ ಪತ್ತೆ | ಆತಂಕ ಅನಗತ್ಯವೆಂದ ತಜ್ಞರು | ಎಚ್ಚರದಿಂದ ಇರಲು ಸೂಚನೆ

# ಬ್ರಿಟನ್ ವೈರಸ್ ಭಯ ಬೇಡ

**ಹೊಸದಿಲ್ಲಿ/ಬೆಂಗಳೂರು:** ಜಗತ್ತಿನ ಹಲವು ದೇಶಗಳಲ್ಲಿ ಮತ್ತೊಮ್ಮೆ ಕೊರೊನಾ ಅಲೆಯ ಆತಂಕ ಸೃಷ್ಟಿಸಿರುವ ಬ್ರಿಟನ್ ರೂಪಾಂತರಿ ವೈರಸ್ ಭಾರತದಲ್ಲೂ ಕಾಣಿಸಿಕೊಂಡಿದೆ. ಬೆಂಗಳೂರಿನ ಮೂವರು ಸೇರಿದಂತೆ ಬ್ರಿಟನ್‌ನಿಂದ ಭಾರತಕ್ಕೆ ಮರಳಿದ 6 ಮಂದಿಯಲ್ಲಿ ಈ ವೈರಸ್ ಸೋಂಕು ದೃಢಪಟ್ಟಿದೆ. ದೇಶ ಮತ್ತು ರಾಜ್ಯದಲ್ಲಿ ಕೊರೊನಾ ಸೋಂಕು ಭಾರಿ ಇಳಿಮುಖವಾಗಿರುವ ಬಗ್ಗೆ ಜನರಲ್ಲಿ ನಿರಾಳ ಭಾವದ ನಡುವೆಯೇ ಈ ಸುದ್ದಿ ಮತ್ತೆ ಆತಂಕಕ್ಕೆ ಕಾರಣವಾಗಿದೆ. ಆದರೆ, ತಜ್ಞರು ರೂಪಾಂತರಿ ವೈರಸ್ ಬಗ್ಗೆ ಕಳವಳಪಡುವ ಅಗತ್ಯವಿಲ್ಲ ಎಂದು ಅಭಯ ನೀಡಿದ್ದಾರೆ.

''ಪ್ರಸ್ತುತ ಅಭಿವೃದ್ಧಿಪಡಿಸಿರುವ ಲಸಿಕೆಯು ಮ್ಯುಟೆಂಟ್ ವೈರಸ್ ವಿರುದ್ಧವೂ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ರೂಪಾಂತರಿ ವೈರಸ್, ಹಳೆಯ ಪ್ರಭೇದಕ್ಕಿಂತಲೂ ಹೆಚ್ಚು ಮಾರಣಾಂತಿಕವೆಂಬುದು ದೃಢಪಟ್ಟಿಲ್ಲ. ಇದು ಮತ್ತಷ್ಟು ವೇಗವಾಗಿ ಹರಡುತ್ತದೆಯೆಂದು ಹೇಳಲಾಗಿದೆಯಷ್ಟೇ. ಹೀಗಾಗಿ ಜನರು ಮತ್ತಷ್ಟು ಜಾಗರೂಕತೆಯಿಂದ ಇದ್ದರೆ ಸಾಕು. ಭಯಪಡುವ ಅಗತ್ಯವಿಲ್ಲ'' ಎಂದು ವೈದ್ಯರು, ತಜ್ಞರು ಹೇಳಿದ್ದಾರೆ.

ಬೆಂಗಳೂರಿನ ನಿಮ್ಹಾನ್ಸ್, ಹೈದರಾಬಾದ್‌ನ 'ಸಿಸಿಎಂಬಿ' ಹಾಗೂ ಪುಣೆಯ 'ಎನ್‌ಐವಿ' ಸಂಸ್ಥೆಗಳಲ್ಲಿ ರೂಪಾಂತರಿತ ವೈರಸ್‌ನ 'ಜಿನೋಮ್ ಸೀಕ್ವೆನ್ಸಿಂಗ್' ಪತ್ತೆ ಪರೀಕ್ಷೆ ನಡೆಸಲಾಗಿತ್ತು.

26.12.2020


ವಿಜಯ ಕರ್ನಾಟಕ

ಬೆಂಗಳೂರಲ್ಲಿ ಲಂಡನ್ ವೈರಸ್?

ಲಂಡನ್‌ನಿಂದ ಬಂದ ತಾಯಿ, ಮಗುವಿನಲ್ಲಿ ಪತ್ತೆ | ಆರೋಗ್ಯ ಇಲಾಖೆ ಕಟ್ಟೆಚ್ಚರ

ಲಂಡನ್‌ನಿಂದ ಬೆಂಗಳೂರಿಗೆ ಬಂದ ಇಬ್ಬರಲ್ಲಿ ಮ್ಯುಟೆಂಟ್ ವೈರಸ್ ಇರುವ ಬಗ್ಗೆ 4 ದಿನಗಳ ಹಿಂದೆಯೇ ವಿಕ ವರದಿ ಪ್ರಕಟಿಸಿತ್ತು.

ಹೊಸ ಸೋಂಕಿನಿಂದ ಮತ್ತಷ್ಟು ಹೆಚ್ಚಿನ ಅಪಾಯ ಇಲ್ಲ. ಆದರೆ, ಸೋಂಕು ಬೇಗ ಹರಡುವ ಕಾರಣ ಜನ ಜಾಗೃತರಾಗಿರಬೇಕು. ಈಗ ಅಭಿವೃದ್ಧಿಪಡಿಸಿರುವ ಬೇರೆ ಬೇರೆ ಕಂಪನಿಗಳ ಲಸಿಕೆಗಳು ಕೋವಿಡ್ ರೂಪಾಂತರ ವೈರಸ್‌ಗೆ ಪರಿಣಾಮಕಾರಿಯಾಗಿವೆ. ಹಾಗಾಗಿ ಅನಗತ್ಯ ಭಯ ಬೇಡ.

**-ಡಾ. ಸುದರ್ಶನ್ ಬಲ್ಲಾಳ್**
ಮುಖ್ಯಸ್ಥರು, ಮಣಿಪಾಲ್ ಆಸ್ಪತ್ರೆ

ಯುಕೆಯಿಂದ ಬಂದವರ ಪೈಕಿ 26 ಮಂದಿಯ ಮಾದರಿಗಳನ್ನು ನಿಮ್ಹಾನ್ಸ್‌ಗೆ ಕಳುಹಿಸಲಾಗಿತ್ತು. ಅವರಲ್ಲಿ ಮೂವರಿಗೆ ಹೊಸ ಪ್ರಭೇದದ ವೈರಸ್ ಪತ್ತೆಯಾಗಿದೆ. ವಿದೇಶದಿಂದ ಬಂದು ಸಂಪರ್ಕಕ್ಕೆ ಸಿಗದವರ ಪತ್ತೆ ಕಾರ್ಯ ನಡೆಯುತ್ತಿದೆ.

**-ಡಾ. ಕೆ ಸುಧಾಕರ್** ಆರೋಗ್ಯ ಸಚಿವ

ಅಸ್ತಿತ್ವಕ್ಕಾಗಿ ವೈರಸ್ ರೂಪಾಂತರ » 03

ಸಂಪರ್ಕಕ್ಕೆ ಸಿಗದ 135 ಮಂದಿ

ನಮ್ಮ ಬೆಂಗಳೂರು ನೋಡಿ

## ಅಪಾರ್ಟ್‌ಮೆಂಟ್ ಸೀಲ್‌ಡೌನ್



ಬ್ರಿಟನ್‌ನಿಂದ ಬೆಂಗಳೂರಿಗೆ ಬಂದಿದ್ದ 34 ವರ್ಷದ ಮಹಿಳೆ ಮತ್ತು ಅವರ ಮಗು ಸೇರಿ ಮೂವರಿಗೆ ಬ್ರಿಟನ್ ರೂಪಾಂತರ ಸೋಂಕು ತಗಲಿರುವುದು ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ತಾಯಿ ಮತ್ತು ಮಗು ನೆಲೆಸಿದ್ದ ವಸಂತಪುರ ವಾರ್ಡ್‌ನ ವಿಠ್ಠಲನಗರದಲ್ಲಿನ ಅಪಾರ್ಟ್‌ಮೆಂಟ್ ಅನ್ನು ಬಿಬಿಎಂಪಿ ಸೀಲ್‌ಡೌನ್ ಮಾಡಿದೆ. ಸೋಂಕಿತರೊಂದಿಗೆ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕಕ್ಕೆ ಬಂದವರನ್ನು ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ.

## ಭಾರತದಲ್ಲಿ ಎಲ್ಲೆಲ್ಲಿ ಪತ್ತೆ?

**03** ಬೆಂಗಳೂರು

**02** ಹೈದರಾಬಾದ್

**01** ಪುಣೆ

## ಲಸಿಕೆ ತಾಲೀಮು ಯಶಸ್ವಿ

ಆಂಧ್ರ ಪ್ರದೇಶ, ಗುಜರಾತ್, ಪಂಜಾಬ್ ಮತ್ತು ಅಸ್ಸಾಂ ರಾಜ್ಯಗಳಲ್ಲಿ 2 ದಿನಗಳ ಕಾಲ ನಡೆದ ಕೊರೊನಾ ಪ್ರತಿರೋಧಕ ಲಸಿಕೆ ವಿತರಣೆ ತಾಲೀಮು ಯಶಸ್ವಿಯಾಗಿದೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ. ಲಸಿಕೆ ವಿತರಣೆಯ ಎಲ್ಲಾ ಪ್ರಕ್ರಿಯೆಯ ಸನ್ನದ್ಧತೆ ಪರೀಕ್ಷೆಗೆ ಈ ತಾಲೀಮು ನಡೆಸಲಾಗಿತ್ತು.

## ಸಾವಿನ ಸಂಖ್ಯೆ ಕೇವಲ 4

ರಾಜ್ಯದಲ್ಲಿ ಮಂಗಳವಾರ ಕೋವಿಡ್ ಸಾವಿನ ಸಂಖ್ಯೆ 4ಕ್ಕೆ ಇಳಿದಿದೆ. ಬೆಂಗಳೂರು, ಮೈಸೂರು ಬಿಟ್ಟರೆ ಮತ್ತಾವ ಜಿಲ್ಲೆಗಳಲ್ಲೂ ಸಾವು ಸಂಭವಿಸಿಲ್ಲ. 662 ಹೊಸ ಕೇಸ್ ದಾಖಲಾಗಿದ್ದರೆ, 1344 ಮಂದಿ ಗುಣಮುಖರಾಗಿದ್ದಾರೆ. ದೇಶಾದ್ಯಂತ ಕೇವಲ 16,432 ಪ್ರಕರಣಗಳು ಪತ್ತೆಯಾಗಿವೆ.

VK
ವಿಜಯ ಕರ್ನಾಟಕ

# ರೂಪಾಂತರಿತ ವೈರಸ್ ತುಂಬಾ ಅಪಾಯಕಾರಿಯಲ್ಲ

■ **ವಿಕ ಸುದ್ದಿಲೋಕ** ಬೆಂಗಳೂರು

ರೂಪಾಂತರವಾದ ಕೋವಿಡ್-19 ಸೋಂಕು ವೇಗವಾಗಿ ಹರಡುತ್ತದೆಯಾದರೂ ತೀವ್ರತೆ ಮಾತ್ರ ಕೋವಿಡ್-19 ವೈರಸ್‌ನಷ್ಟೇ ಇರುತ್ತದೆ. ಎಂದಿನಂತೆ ಮಾಸ್ಕ್ ಧರಿಸುವುದು, ದೈಹಿಕ ಅಂತರ ಕಾಪಾಡುವುದು, ಸೋಪಿನಿಂದ ಕೈ ತೊಳೆಯುವುದು ಮತ್ತು ಸ್ಯಾನಿಟೈಸ್ ಮಾಡಿಕೊಂಡರೆ ಆತಂಕಪಡುವ ಅಗತ್ಯವಿಲ್ಲ ಎಂದು ತಜ್ಞ ವೈದ್ಯರು ಸಲಹೆ ನೀಡಿದ್ದಾರೆ.

''ಕೋವಿಡ್-19 ಸ್ಪೈಕ್ ಪ್ರೊಟೀನ್‌ನಲ್ಲಿ ಬದಲಾವಣೆಯಾಗಿದೆ. ಮನುಷ್ಯನ ದೇಹದಲ್ಲಿನ ಸೆಲ್‌ಗಳಿಗೆ ಅಟ್ಯಾಚ್ ಆಗಿ ಬೇಗ ಹಬ್ಬುತ್ತದೆ. ಆದರೆ, ಸೋಂಕಿನ ತೀವ್ರತೆ ಹಾಲಿ ಇರುವ ಕೋವಿಡ್-19ನಷ್ಟೇ ಇರುತ್ತದೆ. ಲಕ್ಷಣಗಳಲ್ಲೂ ಯಾವುದೇ ಬದಲಾವಣೆ ಇಲ್ಲ, ಬ್ರಿಟನ್‌ನಲ್ಲಿ ಹಬ್ಬುತ್ತಿರುವುದನ್ನು ಸಂಶೋಧನೆ ಮಾಡಿದಾಗ ವೈರಸ್ ರೂಪಾಂತರವಾಗಿರುವುದು ಗೊತ್ತಾಗಿದೆ. ಹೀಗಾಗಿ, ಎಚ್ಚರಿಕೆಯಿಂದ ಇರಬೇಕು,'' ಎಂದು ಮಣಿಪಾಲ್ ಆಸ್ಪತ್ರೆಯ ಮುಖ್ಯಸ್ಥ ಡಾ. ಸುದರ್ಶನ್ ಬಲ್ಲಾಳ್ ತಿಳಿಸಿದರು.

''ಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ರೂಪಾಂತರಿತ ವೈರಸ್ ಬಗ್ಗೆ ಹೇಳುವುದಾದರೆ ಮನೆಯ ಬೀಗವನ್ನು ಕೀಲಿ ಬಳಸಿ ತೆಗೆಯುವುದು ಕೋವಿಡ್-19. ಅದೇ ಮನೆಯ ಸ್ಮಾರ್ಟ್ ಲಾಕ್ ಕೀಲಿ ಬಳಸದೆ ಫೇಸ್‌ಐಡಿ ತಂತ್ರಜ್ಞಾನದ ಮೂಲಕ ತೆಗೆದರೆ ಅದು ಬ್ರಿಟನ್‌ನಲ್ಲಿ ರೂಪಾಂತರವಾದ ವೈರಸ್. ಸ್ಮಾಟ್‌ಲಾಕ್ ತೆರೆಯಲು ಸೆಕೆಂಡ್ ಸಾಕು. ಇದೇ ಈ ವೈರಸ್ ನಡುವಿನ ವ್ಯತ್ಯಾಸ,'' ಎಂದು ಕ್ಯಾನ್ಸರ್ ತಜ್ಞ ಡಾ. ವಿಶಾಲ್ ರಾವ್ ತಿಳಿಸಿದರು.

''ರೂಪಾಂತರಗೊಂಡಿರುವ ವೈರಸ್‌ಗೆ ಈಗ ನೀಡುತ್ತಿರುವ ಚಿಕಿತ್ಸೆಯನ್ನೇ ಮುಂದುವರೆಸಬಹುದು. ಸೋಂಕು ಹೆಚ್ಚು ಹಾನಿ ಮಾಡುತ್ತದೆ ಎನ್ನುವುದಕ್ಕೆ ಸಾಕ್ಷ್ಯಾಧಾರಗಳು ಸಿಕ್ಕಿಲ್ಲ, ಈ ಬಗ್ಗೆ ಬ್ರಿಟನ್ ಸೇರಿದಂತೆ ವಿವಿಧೆಡೆ ಸಂಶೋಧನೆ ನಡೆದಿದೆ,'' ಎಂದು ಆರ್‌ಜಿಐಸಿಡಿ ನಿರ್ದೇಶಕ ಡಾ. ಸಿ. ನಾಗರಾಜ್ ಎಚ್ಚರಿಸಿದರು.

**ಅಸ್ತಿತ್ವಕ್ಕಾಗಿ ರೂಪಾಂತರಗೊಳ್ಳುವ ವೈರಸ್**

ವೈರಸ್‌ಗಳು ರೂಪಾಂತರಗೊಳ್ಳುವುದು ಸಹಜ ಪ್ರಕ್ರಿಯೆ. ಸಾಕಷ್ಟು ಬಾರಿ ತಮ್ಮ ಅಸ್ತಿತ್ವಕ್ಕಾಗಿ ವೈರಸ್ ರೂಪಾಂತರಗೊಳ್ಳುತ್ತದೆ. ಆದರೆ, ರೂಪಾಂತರಗೊಳ್ಳುವ ನಿರ್ದಿಷ್ಟ ವೈರಸ್ ಕೆಲವೊಮ್ಮೆ ಮನುಷ್ಯನ ಮೇಲೆ ಬೀರುವ ಋಣಾತ್ಮಕ ಪರಿಣಾಮದ ತೀವ್ರತೆ ಕಡಿಮೆಯಾಗುತ್ತದೆ. ಕೆಲವೊಮ್ಮೆ ಹೆಚ್ಚೂ ಆಗಬಹುದು. ಆದರೆ, ತೀವ್ರವಾಗುವ ಸಾಧ್ಯತೆ ಕಡಿಮೆ. ಭೂಮಿ ಮೇಲೆ ಅತಿ ಹೆಚ್ಚು ಬಲಿ ಪಡೆದ ಸ್ಪ್ಯಾನಿಶ್ ವೈರಸ್ (1914-1918ರ ನಡುವಿನ ಅವಧಿ) ಅಸ್ತಿತ್ವದಲ್ಲಿದ್ದರೂ ಅದನ್ನು ನಾವು ಈಗ ಕೇಳುವುದು ತೀರಾ ಕಡಿಮೆ. ಇನ್ನು ಪ್ರತಿ ವರ್ಷ ಕಾಣಿಸುವ ಜ್ವರ, ಕೆಮ್ಮಿನ ವೈರಸ್‌ಗಳು ಪ್ರತಿ ವರ್ಷ ರೂಪಾಂತರಗೊಳ್ಳುತ್ತವೆ. ಹೀಗಾಗಿ, ಅವುಗಳ ಸೋಂಕಿನ ತಡೆಗೆ ಲಸಿಕೆ ಬದಲಾವಣೆ, ಸುಧಾರಣೆ ನಿರಂತರವಾಗಿ ನಡೆಯುತ್ತಿರುತ್ತದೆ ಎಂದು ಡಾ. ಬಲ್ಲಾಳ್ ಹೇಳಿದರು.

## ನಮ್ಮ ಎಚ್ಚರ ನಮಗಿರಲಿ, ಭಯ ಬೇಡ ಎಂದ ತಜ್ಞರು

**ಕೋವಿಡ್ -19 ಲಸಿಕೆಯೇ ಸಾಕು**




**ವಿಜ್ಞಾನಿಗಳ ಪ್ರಕಾರ ಈಗ ಅಭಿವೃದ್ಧಿಪಡಿಸಿರುವ ಲಸಿಕೆಗಳು ಕೋವಿಡ್ ರೂಪಾಂತರ ವೈರಸ್‌ಗೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ. ಒಂದು ವೇಳೆ ಲಸಿಕೆ ಕೆಲಸ ಮಾಡದಿದ್ದರೆ ಬೇಗ ಸುಧಾರಣೆ ಮಾಡಿಕೊಳ್ಳಬಹುದು. ಲಸಿಕೆಗಳ ಕುರಿತು ಸಂಶೋಧನೆ ತೀವ್ರಗತಿಯಲ್ಲಿ ನಡೆಯುತ್ತದೆ. ಜತೆಗೆ ಬೇರೆ ಬೇರೆ ಕಂಪನಿಗಳು ಇನ್ನೂ ಟ್ರಯಲ್‌ನಲ್ಲಿರುವ ಕಾರಣ ಶೀಘ್ರ ಬದಲಾವಣೆಯಾಗಲಿದೆ ಎಂದು ಡಾ. ಸುದರ್ಶನ ಬಲ್ಲಾಳ್ ಹೇಳಿದರು.**



**ಬ್ರಿಟನ್‌ನಿಂದ ಬಂದವರನ್ನು ಪತ್ತೆ ಮಾಡಿ ಚಿಕಿತ್ಸೆ ಕೊಡಿಸಲು ತ್ವರಿತ ಕ್ರಮ ಕೈಗೊಳ್ಳಲಾಗಿದೆ. 1,600ಕ್ಕೂ ಹೆಚ್ಚು ಜನರಿಗೆ ಪರೀಕ್ಷೆ ಮಾಡಲಾಗಿದೆ. ಹಾಗಾಗಿ ಈ ವಿಚಾರದಲ್ಲಿ ಸರಕಾರ ವೈಫಲ್ಯ ಕಂಡಿದೆ ಎನ್ನುವ ಆರೋಪಕ್ಕೆ ಅರ್ಥವಿಲ್ಲ.**

**-ಡಾ.ಕೆ.ಸುಧಾಕರ್** ಆರೋಗ್ಯ ಸಚಿವ

VK
ವಿಜಯ ಕರ್ನಾಟಕ

# ಮತ್ತೆ ಲಾಕ್‌ಡೌನ್ ಇಲ್ಲ

**ಬೆಂಗಳೂರು:** ಬ್ರಿಟನ್ ವೈರಸ್ ಬಗ್ಗೆ ಆತಂಕ ಬೇಡ. ರಾಜ್ಯದಲ್ಲಿ ಮತ್ತೆ ಲಾಕ್‌ಡೌನ್, ಸೀಲ್ ಡೌನ್ ಅವಶ್ಯತೆಯೂ ಇಲ್ಲ ಎಂದು ವೈದ್ಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿ, ''ಹೊರ ದೇಶದಿಂದ ಬಂದಿರುವ 1,614 ಜನರನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಈ ಪೈಕಿ 26 ಮಂದಿಗೆ ಪಾಸಿಟಿವ್ ಬಂದಿದೆ. ಅವರಲ್ಲಿ ಮೂವರಲ್ಲಿ ಹೊಸ ವೈರಸ್ ಪತ್ತೆಯಾಗಿರುವುದನ್ನು ಐಸಿಎಂಆರ್ ಖಚಿತ ಪಡಿಸಿದೆ. ಎಲ್ಲರನ್ನೂ ಐಸೊಲೇಷನ್‌ನಲ್ಲಿ ಇಡಲಾಗಿದೆ. ಇವರ ಪ್ರಾಥಮಿಕ, ದ್ವಿತೀಯ ಸಂಪರ್ಕಿತರನ್ನೂ ಪತ್ತೆ ಮಾಡಿ ಐಸೊಲೇಷನ್‌ನಲ್ಲಿ ಇಡಲಾಗಿದೆ,'' ಎಂದು ತಿಳಿಸಿದರು.

**28 ದಿನ ಐಸೊಲೇಷನ್:** ಹೊಸ ವೈರಸ್ ಸಂಬಂಧ ಕೇಂದ್ರದ ಮಾರ್ಗಸೂಚಿ ಅನುಸಾರ ಸೋಂಕಿತರನ್ನು 28 ದಿನ ಐಸೊಲೇಷನ್‌ನಲ್ಲಿ ಇಡಬೇಕಾಗುತ್ತದೆ ಎಂದರು.

## 33,000 ಮಂದಿಯ ಟೆಸ್ಟ್

**ಬೆಂಗಳೂರು:** ನ.25ರಿಂದ -ಡಿ. 23ರ ನಡುವೆ ಬ್ರಿಟನ್‌ನಿಂದ ಮರಳಿದ 33,000 ಪ್ರಯಾಣಿಕರನ್ನು ಪರೀಕ್ಷೆಗೆ ಒಳಪಡಿಸಲಾಗಿದ್ದು, ಇವರಲ್ಲಿ 114 ಮಂದಿಗೆ ಸೋಂಕು ದೃಢಪಟ್ಟಿದ್ದು, 6 ಜನರಲ್ಲಿ ರೂಪಾಂತರಿ ವೈರಸ್ ದೃಢಪಟ್ಟಿದೆ. ಸೋಂಕಿತರನ್ನು ವಿಶೇಷ ಐಸೊಲೇಷನ್ ವಾರ್ಡ್‌ಗಳಲ್ಲಿ ಇರಿಸಿ, ಚಿಕಿತ್ಸೆ ನೀಡಲಾಗುತ್ತಿದೆ. ಸಹ ಪ್ರಯಾಣಿಕರು ಸೇರಿದಂತೆ ಪ್ರಥಮ ಮತ್ತು ದ್ವಿತೀಯ ಸಂಪರ್ಕಿತರ ಪತ್ತೆ ತೀವ್ರಗೊಳಿಸಲಾಗಿದೆ. ಮತ್ತಷ್ಟು ಸ್ಯಾಂಪಲ್‌ಗಳ 'ಜಿನೋಮ್ ಸೀಕ್ವೆನ್ಸಿಂಗ್' ವರದಿ ಬಂದ ಬಳಿಕ ಹೊಸ ಪ್ರಭೇದದ ಸೋಂಕಿತರ ಸಂಖ್ಯೆ ಹೆಚ್ಚುವ ಸಾಧ್ಯತೆಯಿದೆ.

**ವಿಮಾನ ರದ್ದು ವಿಸ್ತರಣೆ:** ಸೋಂಕಿನ ಹೆಚ್ಚಳದ ಹಿನ್ನೆಲೆಯಲ್ಲಿ ಬ್ರಿಟನ್-ಭಾರತದ ನಡುವಿನ ವಿಮಾನಯಾನವನ್ನು ಜ.31ರವರೆಗೂ ನಿರ್ಬಂಧ ವಿಸ್ತರಿಸುವ ಬಗ್ಗೆ ವಿಮಾನಯಾನ ಸಚಿವಾಲಯ ಸುಳಿವು ನೀಡಿದೆ.

VK
ವಿಜಯ ಕರ್ನಾಟಕ

# ಎಂ.ಜಿ. ರಸ್ತೆ ಸೇರಿ 6 ಮಾರ್ಗದಲ್ಲಿ ರಾತ್ರಿ ವಾಹನ ಸಂಚಾರ ನಿಷೇಧ

■ **ವಿಕ ಸುದ್ದಿಲೋಕ** ಬೆಂಗಳೂರು

ಪ್ರತಿ ವರ್ಷ ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಜನರು, ವಾಹನಗಳಿಂದ ತುಂಬಿ ತುಳುಕುತ್ತಿದ್ದ ನಗರದ ಎಂ.ಜಿ ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಮ್ಯೂಸಿಯಂ ರಸ್ತೆ, ರೆಸ್ಟ್ ಹೌಸ್ ಪಾರ್ಕ್ ರಸ್ತೆ ಮತ್ತು ರೆಸಿಡೆನ್ಸಿ ರಸ್ತೆಗಳಲ್ಲಿ ಈ ಬಾರಿ ವಾಹನಗಳ ಸಂಚಾರ ನಿಷೇಧಿಸಲಾಗಿದೆ.

ಈ ಆರು ರಸ್ತೆಗಳಲ್ಲಿ ಡಿ.31ರ ರಾತ್ರಿ 8ರಿಂದ ಜ.1ರ ಬೆಳಗಿನ ಜಾವ 2 ಗಂಟೆವರೆಗೆ ವಾಹನ ಸಂಚಾರ ನಿಷೇಧಿಸಲಾಗಿದೆ. ವಾಹನ ಸವಾರರು ಪರ್ಯಾಯ ರಸ್ತೆಗಳಲ್ಲಿ ಸಂಚರಿಸುವಂತೆ ಸಂಚಾರ ಪೊಲೀಸರು ಮನವಿ ಮಾಡಿದ್ದಾರೆ. ಡಿ.31ರ ಸಂಜೆ 6ರಿಂದ ಜ.1ರ ಬೆಳಗ್ಗೆ 6ರವರೆಗೆ ನಿಷೇಧಾಜ್ಞೆಯೂ ಜಾರಿಯಲ್ಲಿರುವ ಕಾರಣ ಪ್ರಮುಖ ರಸ್ತೆ ಗಳಲ್ಲಿ ಜನರು ಗುಂಪಾಗಿ ಸಂಚರಿಸುವಂತಿಲ್ಲ.

ವೀಲಿಂಗ್, ಡ್ರ್ಯಾಗ್ ರೇಸಿಂಗ್ ಜತೆಗೆ ಪಾರ್ಟಿ ಮಾಡಲು ಯುವಕರು ಮುಂದಾಗುವ ಸಾಧ್ಯತೆಯಿರುವ ಹಿನ್ನೆಲೆಯಲ್ಲಿ ನಗರದ 44 ಫ್ಲೈಓವರ್‌ಗಳ ಮೇಲೆ ರಾತ್ರಿ 10ರಿಂದ ಬೆಳಗ್ಗೆ 6 ಗಂಟೆವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಈ ವೇಳೆ ಫ್ಲೈವರ್ ಕೆಳಗಿನ, ಪಕ್ಕದ ಸರ್ವಿಸ್ ರಸ್ತೆಗಳಲ್ಲಿ ವಾಹನಗಳು ಸಂಚರಿಸಬೇಕು.



ಬ್ರಿಗೇಡ್ ರಸ್ತೆಯಲ್ಲಿ ಸಿಸಿ ಕ್ಯಾಮೆರಾ, ಧ್ವನಿವರ್ಧಕ ಅಳವಡಿಕೆ

## ವಾಹನ ನಿಲುಗಡೆ ನಿಷೇಧ

ಡಿ.31ರ ಸಂಜೆ 4 ಗಂಟೆಯಿಂದ ಜ.1ರ ಬೆಳಗಿನ ಜಾವ 2 ಗಂಟೆವರೆಗೆ ನಗರದ ಎಂ.ಜಿ. ರಸ್ತೆಯ ಕ್ವೀನ್ಸ್ ವೃತ್ತದಿಂದ ಟ್ರಿನಿಟಿ ವೃತ್ತದವರೆಗೆ, ಕಬ್ಬನ್ ರಸ್ತೆ, ರೆಸಿಡೆನ್ಸಿ ರಸ್ತೆ, ರಿಚ್‌ಮಂಡ್ ರಸ್ತೆ, ಇನ್‌ಫೆಂಟ್ರಿ ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಮ್ಯೂಸಿಯಂ ರಸ್ತೆ, ರೆಸ್ಟ್ ಹೌಸ್ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ಮಗರತ್ ರಸ್ತೆ, ಮಾರ್ಕನ್ ರಸ್ತೆ, ಮೇನ್ ಗಾರ್ಡ್ ಕ್ರಾಸ್ ರಸ್ತೆ, ಡಿಸ್ಪೆನ್ಸರಿ ರಸ್ತೆ ಮತ್ತು ಇಂದಿರಾನಗರ 100 ಅಡಿ ರಸ್ತೆಯಲ್ಲಿ ವಾಹನಗಳ ಪಾರ್ಕಿಂಗ್ ನಿಷೇಧಿಸಲಾಗಿದೆ. ಎಂ.ಜಿ. ರಸ್ತೆ ಸುತ್ತಲಿನ ರಸ್ತೆಗಳಲ್ಲಿ ಪಬ್, ಬಾರ್ ಮತ್ತು ರೆಸ್ಟೋರೆಂಟ್‌ಗಳಿಗೆ ಮುಂಗಡ ಬುಕ್ಕಿಂಗ್ ಮಾಡುವ ಗ್ರಾಹಕರು ಶಿವಾಜಿನಗರ ಬಸ್ ನಿಲ್ದಾಣ ಸೇರಿದಂತೆ ಬೇರೆ ಬೇರೆ ಕಡೆ ಇರುವ ಪಾರ್ಕಿಂಗ್ ಸ್ಥಳಗಳಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡಬಹುದು.

ವಿಜಯವಾಣಿ
ಕನ್ನಡಿಗರ ಧ್ವನಿ

# ರೂಪಾಂತರಿ ಇದೆ, ಲಾಕ್‌ಡೌನ್ ಇಲ್ಲ!

## ಸಚಿವ ಡಾ.ಸುಧಾಕರ್ ಹೇಳಿಕೆ | ಬ್ರಿಟನ್‌ನಿಂದ ಮರಳಿದ ಮೂವರಲ್ಲಿ ಸೋಂಕು ಪತ್ತೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬ್ರಿಟನ್‌ನಿಂದ ರಾಜ್ಯಕ್ಕೆ ಮರಳಿದವರ ಪೈಕಿ ಮೂವರಲ್ಲಿ ಹೊಸ ಮಾದರಿ ಕರೊನಾ ವೈರಾಣು ಪತ್ತೆಯಾಗಿದ್ದರೂ ಲಾಕ್‌ಡೌನ್, ಇಡೀ ಪ್ರದೇಶ ಅಥವಾ ಬಡಾವಣೆ ಸೀಲ್‌ಡೌನ್ ಅನಗತ್ಯವೆಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ಮಂಗಳವಾರ ಪ್ರಕರಣಗಳು ಹೊರಬಿದ್ದ ಬಳಿಕ ಭೇಟಿಯಾದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನ ತಾಯಿ-ಮಗು, ಮತ್ತೊಬ್ಬ ಮಹಿಳೆಯಲ್ಲಿ ಹೊಸ ಪ್ರಭೇದದ ಸೋಂಕು ಪತ್ತೆಯಾಗಿರುವುದು ಐಸಿಎಂಆರ್ ನೀಡಿದ ಮಾಹಿತಿಯಿಂದ ಗೊತ್ತಾಗಿದೆ. ಬ್ರಿಟನ್‌ನಲ್ಲಿ ಕಾಣಿಸಿಕೊಂಡ ರೂಪಾಂತರಿ ಕರೊನಾ ರಾಜ್ಯದಲ್ಲಿ ಪತ್ತೆಯಾದ ಕಾರಣಕ್ಕೆ ಲಾಕ್‌ಡೌನ್, ಇಡೀ ಪ್ರದೇಶ ಸೀಲ್‌ಡೌನ್ ಅನಗತ್ಯವಾಗಿದೆ. ಕೇಂದ್ರದ ಮಾರ್ಗಸೂಚಿಯಂತೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಾಗುವುದು ಎಂದು ಸ್ಪಷ್ಟಪಡಿಸಿದರು.

**ಶಾಲೆ-ಕಾಲೇಜುಗಳ ಪುನರಾರಂಭ ಅಬಾಧಿತ:** ಬ್ರಿಟನ್‌ನಲ್ಲಿ ಪತ್ತೆಯಾದ ವೈರಸ್ ಪ್ರಕರಣಗಳು ರಾಜ್ಯದಲ್ಲೂ ಪತ್ತೆಯಾಗಿದ್ದರಿಂದ ಆತಂಕ ಇಲ್ಲವೇ ಗಾಬರಿಯಾಗಬೇಕಾದ ಅಗತ್ಯವಿಲ್ಲ. ಈಗಾಗಲೇ ನಿರ್ಧರಿಸಿರುವಂತೆ ಜ.1ರಿಂದ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳು ಪುನರಾರಂಭ ಅಬಾಧಿತವೆಂದು ಹೇಳಿದರು.

ಅಷ್ಟಕ್ಕೂ ಬ್ರಿಟನ್‌ನಿಂದ ವಾಪಸ್ಸಾದ ಎಲ್ಲರಿಗೂ ಕರೊನಾ ಸೋಂಕು ದೃಢಪಟ್ಟಿಲ್ಲ. ತಜ್ಞರು ಹೇಳುವ ಪ್ರಕಾರ ಸಮುದಾಯದಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಸಿದೆ. ಹೀಗಾಗಿ ರೂಪಾಂತರಿ ಕರೊನಾ ಹೆಚ್ಚಾಗಿ ಬಾಧಿಸುವುದಿಲ್ಲವೆಂಬ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

### ಮೂವರಿಗೆ ಚಿಕಿತ್ಸೆ, ಕ್ರಮ

ಹೊಸ ಮಾದರಿ ಕರೊನಾ ವೈರಸ್ ಸೋಂಕಿತ ಮೂವರಿಗೂ ನಿಮ್ಹಾನ್ಸ್‌ನ ಪ್ರತ್ಯೇಕ ಕೊಠಡಿಯಲ್ಲಿಟ್ಟು ಚಿಕಿತ್ಸೆ ನೀಡಲಾಗುತ್ತಿದೆ. ಬ್ರಿಟನ್‌ನಿಂದ ರಾಜ್ಯಕ್ಕೆ ಹಿಂದಿರುಗಿದ 1,614 ಜನರ ರಕ್ತದ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಲಾಗಿತ್ತು. ಇದರಲ್ಲಿ 1588 ಜನರ ಪರೀಕ್ಷಾ ವರದಿ ನೆಗೆಟಿವ್ ಬಂದಿದೆ ಎಂದು ತಿಳಿಸಿದರು. ಬಾಕಿ 26 ಜನರಿಗೆ ಕರೊನಾ ಸೋಂಕು ದೃಢಪಟ್ಟಿದ್ದರಿಂದ ಆಸ್ಪತ್ರೆಯಲ್ಲಿ ಪ್ರತ್ಯೇಕವಾಗಿರಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಅಲ್ಲದೆ, ಸೋಂಕಿತರ ರಕ್ತದ ಮಾದರಿಯ ಹೆಚ್ಚಿನ ಅಧ್ಯಯನಕ್ಕಾಗಿ ನಿಮ್ಹಾನ್ಸ್‌ನ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು ಎಂದು ವಿವರಿಸಿದರು.




ಬೆಂಗಳೂರಿನ ವಸಂತಪುರದಲ್ಲಿ ಸೀಲ್‌ಡೌನ್ ಆಗಿರುವ ಅಪಾರ್ಟ್‌ಮೆಂಟ್.

### ಕಠಿಣ ಕ್ರಮದ ಎಚ್ಚರಿಕೆ

ಇಂಗ್ಲೆಂಡ್‌ನಿಂದ ಹಿಂದಿರುಗಿದವರ ಪೈಕಿ ಕೆಲವರು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡ ಕಾರಣ ಸಂಪರ್ಕ ಸಿಗುತ್ತಿಲ್ಲ. ಅಂತಹವರನ್ನು ಪೊಲೀಸರು ಪತ್ತೆ ಮಾಡುತ್ತಿದ್ದು, 48 ಗಂಟೆ ಗಡುವು ನೀಡಲಾಗಿದೆ. ನಂತರವೂ ಸಿಗದಿದ್ದರೆ ಕಾನೂನು ರೀತ್ಯ ಅಪರಾಧವಾಗುತ್ತದೆ. ವೈಯಕ್ತಿಕ, ಸಮುದಾಯದ ಆರೋಗ್ಯ ರಕ್ಷಣೆ ದೃಷ್ಟಿಯಿಂದ ಪರೀಕ್ಷೆಗೆ ಒಳಗಾಗಲೇಬೇಕು. ಇಲ್ಲವಾದರೆ ಗಡುವು ಮುಗಿದ ಬಳಿಕ ಕಠಿಣ ಕ್ರಮಕೈಗೊಳ್ಳಬೇಕಾಗುತ್ತದೆ ಎಂದು ಡಾ.ಸುಧಾಕರ್ ಎಚ್ಚರಿಸಿದರು.



### ಕೋವಿಡ್‌ಗೆ ನಾಲ್ವರು ಬಲಿ

ರಾಜ್ಯದಲ್ಲಿ ಮಂಗಳವಾರ ನಾಲ್ವರು ಸೋಂಕಿಗೆ ಬಲಿಯಾಗಿದ್ದು, ಮೃತರ ಸಂಖ್ಯೆ 12,074 ತಲುಪಿದೆ. 662 ಹೊಸ ಕರೊನಾ ಸೋಂಕು ಪ್ರಕರಣಗಳು ವರದಿಯಾಗಿದ್ದು, ಸೋಂಕಿತರ ಸಂಖ್ಯೆ 9.17 ಲಕ್ಷ ತಲುಪಿದೆ. 1,344 ಸೋಂಕಿತರ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದು, ಗುಣಮುಖರ ಸಂಖ್ಯೆ 8.93 ಲಕ್ಷಕ್ಕೆ ಏರಿಕೆಯಾಗಿದೆ. 11,861 ಸಕ್ರಿಯ ಪ್ರಕರಣಗಳಿದ್ದು, 206 ಮಂದಿ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

### ಸಂಪರ್ಕಿತರ ಪತ್ತೆ, ನಿಗಾ

ಯು.ಕೆ.ಯಿಂದ ವಿಮಾನದಲ್ಲಿ ಬಂದವರ ಸಹ ಪ್ರಯಾಣಿಕರು, ಸೋಂಕಿತರ ಪ್ರಥಮ ಮತ್ತು ದ್ವಿತೀಯ ಸಂಪರ್ಕಿತರನ್ನು ಪತ್ತೆ ಹಚ್ಚಿ ಪರೀಕ್ಷಿಸಲಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಹೋಮ್ ಕ್ವಾರಂಟೈನ್‌ನಲ್ಲಿ ಇರಲು ಸೂಚಿಸಿದ್ದು, ಸರ್ಕಾರ ವಿಫಲವಾಗಿರುವ ಪ್ರಶ್ನೆಯೇ ಉದ್ಭವಿಸದು ಎಂದು ತಳ್ಳಿಹಾಕಿದರು.

### ಏಕರೂಪದ ಮಾಹಿತಿ ವ್ಯವಸ್ಥೆ

ಎಸ್-ಜೀನ್ಸ್ ಸೀಕ್ವೆನ್ಸ್ ಅಧ್ಯಯನಕ್ಕಾಗಿ ದೇಶದಲ್ಲಿ 10 ಪ್ರಯೋಗಾಲಯಗಳನ್ನು ಕೇಂದ್ರ ಸರ್ಕಾರ ಗೊತ್ತುಪಡಿಸಿದ್ದು, ಆ ಪೈಕಿ ಬೆಂಗಳೂರಿನ ಎರಡು ಲ್ಯಾಬ್‌ಗಳು ಸೇರಿವೆ. ಈ ಲ್ಯಾಬ್‌ಗಳಲ್ಲಿ ಪರೀಕ್ಷೆ ಮಾಡಿದ ವರದಿಯನ್ನು ನೇರವಾಗಿ ಐಸಿಎಂಆರ್‌ಗೆ ಕಳುಹಿಸಲಾಗುತ್ತದೆ. ಏಕರೂಪದ ಮಾಹಿತಿ ವ್ಯವಸ್ಥೆಯಾಗಿರುವ ಕಾರಣ ಯಾವುದೇ ಗೊಂದಲಗಳಾಗುವುದಿಲ್ಲ ಎಂಬ ಸಮಜಾಯಿಷಿ ನೀಡಿದರು. ಬ್ರಿಟನ್‌ನಿಂದ ಮರಳಿದವರ ಪೈಕಿ ನೆಗೆಟಿವ್ ವರದಿ ಬಂದವರಿಗೆ ಮನೆಯಲ್ಲೇ ಪ್ರತ್ಯೇಕವಾಗಿರಲು ಸೂಚಿಸಲಾಗಿದೆ. ಕೇಂದ್ರದ ಸೂಚನೆಯಂತೆ 28 ದಿನ ಹೋಮ್ ಕ್ವಾರಂಟೈನ್‌ನಲ್ಲಿ ಇರಬೇಕಾಗುತ್ತದೆ ಎಂದು ಡಾ.ಸುಧಾಕರ್ ಹೇಳಿದರು.

## ಶಾಲೆ-ಕಾಲೇಜು ಆರಂಭಕ್ಕೆ ಸಕಲ ಸಿದ್ಧತೆ

**ಬೆಂಗಳೂರು:** ರಾಜ್ಯದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯು ಹಾಗೂ ವಿದ್ಯಾಗಮ ತರಗತಿಗಳು ಜ.1 ರಿಂದ (ಶುಕ್ರವಾರ) ಆರಂಭವಾಗಲಿದ್ದು, ಇದಕ್ಕೆ ಎಲ್ಲ ರೀತಿಯ ಸಿದ್ಧತೆಗಳು ನಡೆದಿವೆ. ಕಳೆದ ಹತ್ತು ತಿಂಗಳಿಂದ ಮುಚ್ಚಿದ್ದ ಶಾಲೆಗಳು ಜ.1ರಂದು ಆರಂಭವಾಗಲಿದೆ. ಈಗಾಗಲೇ ಶಾಲೆ ಆರಂಭಕ್ಕೆ ಬೇಕಾದ ಸಿದ್ಧತೆಯನ್ನು ಶಿಕ್ಷಣ ಇಲಾಖೆ ಮಾಡಿಕೊಂಡಿದ್ದು, ಸರಳ ರೀತಿಯಲ್ಲಿ ಶಾಲೆ ಆರಂಭೋತ್ಸವ ನಡೆಸಲು ನಿರ್ಧರಿಸಲಾಗಿದೆ. ಜ.1ರಂದು ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿ ತರಗತಿಗಳ ಜತೆಗೆ ಶಾಲಾ ಆವರಣದಲ್ಲೇ 6ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ವಿದ್ಯಾಗಮವೂ ನಡೆಯಲಿದೆ. ತರಗತಿ ಹಾಗೂ ವಿದ್ಯಾಗಮಕ್ಕೆ ಸಂಬಂಧಿಸಿದ ವೇಳಾಪಟ್ಟಿ, ವಿದ್ಯಾರ್ಥಿಗಳ ತಂಡ ರಚನೆ ಹಾಗೂ ಸಮಯದ ವಿಂಗಡನೆ ಸೇರಿ ಶೈಕ್ಷಣಿಕವಾಗಿ ಆಗಬೇಕಿರುವ ಎಲ್ಲ ಬಗೆಯ ಕಾರ್ಯದ ಬಗ್ಗೆ ಶಿಕ್ಷಣ ಇಲಾಖೆಯಿಂದ ಸಿದ್ಧತೆ ಮಾಡಿಕೊಳ್ಳಲಾಗಿದೆ.

» **ಕರೊನಾ ಮಾರ್ಗಸೂಚಿ ಪಾಲನೆ ಮಾಡುವಂತೆ ಸೂಚನೆ**

**ಶಾಲೆ ಆರಂಭೋತ್ಸವ:** ಕರೊನಾ ಸಂಕಷ್ಟದ ನಡುವೆ ಶಾಲೆಗೆ ಬರುವ ವಿದ್ಯಾರ್ಥಿಗಳಿಗೆ ಮೊದಲ ದಿನ ಸಕಾರಾತ್ಮಕ ಭಾವನೆ ಮೂಡಿಸುವ ಉದ್ದೇಶದಿಂದ ಸೂಕ್ತ ಮುನ್ನೆಚ್ಚರಿಕಾ ಕ್ರಮದ ಜತೆಗೆ ಶಾಲಾವರಣವನ್ನು ಶೃಂಗಾರಗೊಳಿಸಲು ಶಿಕ್ಷಣ ಇಲಾಖೆ ಜಿಲ್ಲಾ ಉಪನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಮುಖ್ಯ ಶಿಕ್ಷಕರಿಗೆ ಸೂಚಿಸಿದೆ. ಪ್ರತಿ ವರ್ಷ ಮೇ ತಿಂಗಳ ಅಂತ್ಯಕ್ಕೆ ಶಾಲಾರಂಭೋತ್ಸವ ನಡೆಯುತ್ತಿತ್ತು. ಆದರೆ, ಈ ಬಾರಿ ಕರೊನಾ ಭೀತಿ ಇರುವ ಹಿನ್ನೆಲೆಯಲ್ಲಿ ಸರಳವಾಗಿ ಶಾಲಾ ಪ್ರಾರಂಭೋತ್ಸವ ನಡೆಸಲು ಸೂಚಿಸಲಾಗಿದೆ. ಶಾಲಾರಂಭೋತ್ಸವದ ತಯಾರಿ ಪರಿಶೀಲಿಸಲು ಅಧಿಕಾರಿಗಳನ್ನೂ ನೇಮಿಸಲಾಗಿದೆ. ನೋಡಲ್ ಅಧಿಕಾರಿಗಳೇ ತಮ್ಮ ವ್ಯಾಪ್ತಿಯ ಶಾಲಾ ಹಂತದ ತಯಾರಿಯ ಬಗ್ಗೆ ಪರಿಶೀಲನೆ ನಡೆಸಿ ಇಲಾಖೆಗೆ ವರದಿ ಸಲ್ಲಿಸಬೇಕಿದೆ.

### ಗೊಂದಲ ಬೇಡ

ಹೊಸ ರೂಪದ ಕರೊನಾದಿಂದಾಗಿ ಮತ್ತೆ ಭಯದ ವಾತಾವರಣ ನಿರ್ಮಾಣವಾಗಿದ್ದು, ಶಾಲಾ-ಕಾಲೇಜು ಆರಂಭವಾಗುವ ಬಗ್ಗೆ ವಿದ್ಯಾರ್ಥಿಗಳು ಹಾಗೂ ಪಾಲಕರಲ್ಲಿ ಗೊಂದಲಗಳಿದ್ದವು. ಆದರೆ, ಜ.1 ರಿಂದ ತರಗತಿಗಳನ್ನು ಆರಂಭಿಸಲು ನಿರ್ಧರಿಸಿರುವ ಸರ್ಕಾರ, ಈ ಗೊಂದಲಕ್ಕೆ ತೆರೆ ಎಳೆದಿದೆ. ಕರೊನಾ ಮಾರ್ಗಸೂಚಿಗಳನ್ನು ಸೂಕ್ತ ರೀತಿಯಲ್ಲಿ ಪಾಲನೆ ಮಾಡುವಂತೆ ಎಲ್ಲ ಶಾಲಾ-ಕಾಲೇಜುಗಳಿಗೆ ಕಟ್ಟುನಿಟ್ಟಾಗಿ ಸೂಚನೆ ನೀಡಲಾಗಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

# ರಾಜ್ಯದಲ್ಲೂ ರೂಪಾಂತರಿ

**ಜಿನೋಮಿಕ್ ಟೆಸ್ಟ್‌ನಿಂದ ಪತ್ತೆ:** ರೂಪಾಂತರಿ ಕರೊನಾ ವೈರಸ್‌ನಿಂದ ಭಾರತದಲ್ಲಿ ಯಾವುದೇ ಗಂಭೀರ ಪರಿಣಾಮ ಆಗಿರುವುದು ಕಂಡುಬಂದಿಲ್ಲ. ಹಾಗಾಗಿ ಎಲ್ಲರಿಗೂ ಜಿನೋಮಿಕ್ ಪರೀಕ್ಷೆ ಅಗತ್ಯವಿಲ್ಲ. ಆದರೆ ಬ್ರಿಟನ್‌ನಿಂದ ಬಂದವರಲ್ಲಿ ಸೋಂಕು ಪತ್ತೆ ಆಗಿರುವುದರಿಂದ ಅವರ ಸಂಪರ್ಕಕ್ಕೆ ಬಂದವ (ಔಟ್‌ಬ್ರೇಕ್ ಆಗಿರುವ ಪ್ರದೇಶಗಳಲ್ಲಿ)ರಿಗೆ ಜಿನೋಮಿಕ್ ಪರೀಕ್ಷೆ ನಡೆಸಿ ರೂಪಾಂತರಿ ವೈರಸ್ ಸಮುದಾಯಕ್ಕೆ ಹರಡಿದೆಯೇ ಎಂದು ಖಾತ್ರಿ ಪಡಿಸಿಕೊಳ್ಳಬೇಕಿದೆ.

ಆರ್‌ಟಿಪಿಸಿಆರ್‌ನಲ್ಲಿ ವೈರಸ್ ಇರುವುದು ಪತ್ತೆ ಆಗುತ್ತದೆ. ಅದೇ ಜಿನೋಮಿಕ್ ಸೀಕ್ವೆನ್ಸಿಸ್ ಪರೀಕ್ಷೆಯಲ್ಲಿ ವೈರಸ್ ಯಾವ ತಳಿ ಎಂಬುದನ್ನು ತಿಳಿದುಕೊಂಡು ಪರಿಹಾರ ಕಂಡುಕೊಳ್ಳಬಹುದಾಗಿದೆ ಎನ್ನುತ್ತಾರೆ ವೈರಾಣು ತಜ್ಞ ಡಾ. ಗಿರಿಧರ್‌ಬಾಬು.

**ವಿಕ್ಟೋರಿಯಾದಲ್ಲಿ ಚಿಕಿತ್ಸೆ:** ಡಿ.1ರಿಂದ ಡಿ.21ರ ಅವಧಿಯಲ್ಲಿ ರಾಜಧಾನಿಗೆ ಬ್ರಿಟನ್‌ನಿಂದ ಒಟ್ಟು 1,594 ಮಂದಿ ವಾಪಸ್ ಬಂದಿದ್ದಾರೆ. 'ರೂಪಾಂತರಿ ಕರೊನಾ ವೈರಸ್' ಪತ್ತೆಯಾಗಿರುವ ತಾಯಿ, ಮಗಳು ಹಾಗೂ ವ್ಯಕ್ತಿಯನ್ನು ವಿಕ್ಟೋರಿಯಾ ಆಸ್ಪತ್ರೆಯ ವಿಶೇಷ ವಾರ್ಡ್‌ನಲ್ಲಿ ಪ್ರತ್ಯೇಕವಾಗಿರಿಸಿ ಚಿಕಿತ್ಸೆ ಕೊಡಲಾಗುತ್ತಿದೆ.

| ವಲಯವಾರು ಸೋಂಕಿತರು | |
|---|---|
| ಮಹದೇವಪುರ ವಲಯ | 5 |
| ಬೊಮ್ಮನಹಳ್ಳಿ | 4 |
| ಪಶ್ಚಿಮ ವಲಯ | 3 |
| ಪೂರ್ವ ವಲಯ | 2 |
| ದಾಸರಹಳ್ಳಿ ವಲಯ | 1 |
| ದಕ್ಷಿಣ ವಲಯ | 1 |

ರೂಪಾಂತರಿ ವೈರಸ್ ಕುರಿತು ಜನರಲ್ಲಿ ಇರುವ ಆತಂಕವನ್ನು ಸರ್ಕಾರ ದೂರಮಾಡಬೇಕು. ಬ್ರಿಟನ್‌ನಿಂದ ಬಂದ ಮೇಲೆ ಹುಡುಕುವುದಲ್ಲ. ಬರುವ ಮೊದಲೇ ಪರೀಕ್ಷೆ ಮಾಡಬೇಕಿತ್ತು. ನಿಲ್ದಾಣದಲ್ಲಿ ಪರೀಕ್ಷಿಸಿ ಕ್ವಾರಂಟೈನ್ ಮಾಡಬೇಕಿತ್ತು.

| ಸಿದ್ದರಾಮಯ್ಯ ಮಾಜಿ ಮುಖ್ಯಮಂತ್ರಿ

ಬ್ರಿಟನ್‌ನಿಂದ ಬೆಂಗಳೂರಿಗೆ ಬಂದವರಲ್ಲಿ ಕರೊನಾ ಸೋಂಕು ಕಾಣಿಸಿಕೊಂಡ 15 ಮಂದಿಯ ಮಾದರಿಯನ್ನು ಜಿನೋಮಿಕ್ ಪರೀಕ್ಷೆಗೆ ಕಳುಹಿಸ ಲಾಗಿದ್ದು, ಮೂವರಲ್ಲಿ ರೂಪಾಂತರಿ ವೈರಸ್ ಪತ್ತೆಯಾಗಿದೆ. ಇನ್ನೂ 11 ಮಂದಿಯ ಮಾದರಿ ಪರೀಕ್ಷೆ ಮಾಡಲಾಗುತ್ತಿದೆ. ಬುಧವಾರ ವರದಿ ಬರುವ ಸಾಧ್ಯತೆ ಇದೆ.

| ಡಾ. ವಿ. ರವಿ ನಿಮ್ಹಾನ್ಸ್‌ನ ವೈರಾಣುತಜ್ಞ

## ನಲವತ್ತೆಂಟು ಗಂಟೆ ಗಡುವು

ಬ್ರಿಟನ್‌ನಿಂದ ಬಂದ ಪ್ರಯಾಣಿಕರಲ್ಲಿ 212 ಮಂದಿ ಫೋನ್ ಸ್ವಿಚ್ ಆಫ್ ಮಾಡಿಕೊಂಡಿದ್ದು, ಸಂಪರ್ಕಕ್ಕೆ ಸಿಗುತ್ತಿಲ್ಲ. ಹೀಗಾಗಿ, ಪ್ರಯಾಣಿಕರ ಮೊಬೈಲ್ ಸಂಖ್ಯೆ, ವಿಳಾಸವನ್ನು ಪೊಲೀಸ್ ಇಲಾಖೆಗೆ ನೀಡಿ ಹುಡುಕಿ ಕೊಡುವಂತೆ ಬಿಬಿಎಂಪಿ ಮನವಿ ಮಾಡಿದೆ. ಪೊಲೀಸ್ ಇಲಾಖೆಯಿಂದ ಮುಂದಿನ 48 ಗಂಟೆ ಒಳಗಾಗಿ ಸಂಪರ್ಕಕ್ಕೆ ಸಿಗದ ಪ್ರಯಾಣಿಕರನ್ನು ಪತ್ತೆ ಮಾಡುವುದಾಗಿ ಭರವಸೆ ನೀಡಲಾಗಿದೆ. ಒಂದು ವೇಳೆ ಸಂಪರ್ಕಕ್ಕೆ ಸಿಗದಿದ್ದಲ್ಲಿ ತಪ್ಪಿಸಿಕೊಂಡವರ ವಿರುದ್ಧ ವಿಪತ್ತು ನಿರ್ವಹಣಾ ಕಾಯ್ದೆಯಡಿ ಪ್ರಕರಣ ದಾಖಲಿಸುವುದಾಗಿ ಪಾಲಿಕೆ ಆರೋಗ್ಯ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.

## ಆಸ್ಪತ್ರೆಗೆ ಹೋಗಲು ನಕಾರ

ರೂಪಾಂತರಿ ಕರೊನಾ ದೃಢಪಟ್ಟವರು ಪತ್ತೆಯಾದ ಅಪಾರ್ಟ್‌ಮೆಂಟ್‌ನ ನಿವಾಸಿಗಳನ್ನು ಮುಂಜಾಗ್ರತಾ ಕ್ರಮವಾಗಿ ಬಿಬಿಎಂಪಿ ಪ್ರತ್ಯೇಕ ಕ್ವಾರಂಟೈನ್ ಮಾಡಲು ಮುಂದಾಗಿತ್ತು. ಆದರೆ, ಎಲ್ಲ ನಿವಾಸಿಗಳು ಪಾಲಿಕೆ ಕ್ವಾರಂಟೈನ್ ಹೋಗಲೊಪ್ಪದೆ ಮನೆಯಲ್ಲಿರುವುದಾಗಿ ಹಠ ಹಿಡಿದರು. ನಿವಾಸಿಗಳ ಒತ್ತಡಕ್ಕೆ ಮಣಿದ ಪಾಲಿಕೆ ಅಪಾರ್ಟ್‌ಮೆಂಟ್‌ನಲ್ಲಿ 14 ದಿನಗಳವರೆಗೆ ಕ್ವಾರಂಟೈನ್‌ಗೆ ಒಳಪಡಿಸಿ, ಗೇಟ್‌ಗೆ ಸೀಲ್ ಮಾಡಿದೆ. ಜತೆಗೆ, 'ನಾವೀಗ ಗೃಹಬಂಧನದಲ್ಲಿದ್ದೇವೆ' ಎಂಬ ಭಿತ್ತಿಪತ್ರವನ್ನು ಗೋಡೆಗೆ ಅಂಟಿಸಲಾಗಿದೆ. ಇಲ್ಲಿನ ನಿವಾಸಿಗಳಿಗೆ ಅಗತ್ಯ ಸಾಮಗ್ರಿ ಬೇಕಾದಲ್ಲಿ ಬಿಬಿಎಂಪಿ ವತಿಯಿಂದ ಆನ್‌ಲೈನ್ ಸೇವೆ ಒದಗಿಸಲಾಗಿದೆ. ಹಣವನ್ನು ನಿವಾಸಿಗಳೇ ಪಾವತಿಸಬೇಕು.

ವಿಜಯವಾಣಿ
ಕನ್ನಡಿಗರ ಧ್ವನಿ

# ರಾಜ್ಯದಲ್ಲೂ ರೂಪಾಂತರಿ

## ಬ್ರಿಟನ್‌ನಿಂದ ಬಂದ ಮೂವರು ಬೆಂಗಳೂರಿಗರಿಗೆ ಸೋಂಕು ದೃಢ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬ್ರಿಟನ್‌ನಲ್ಲಿ ತಲ್ಲಣ ಮೂಡಿಸಿರುವ ರೂಪಾಂತರಿ ಕರೊನಾ ವೈರಸ್ ಕರ್ನಾಟಕಕ್ಕೂ ಕಾಲಿಟ್ಟಿದೆ. ಬ್ರಿಟನ್‌ನಿಂದ ಬೆಂಗಳೂರಿಗೆ ಆಗಮಿಸಿದ ಮೂವರಲ್ಲಿ ಸೋಂಕು ದೃಢಪಟ್ಟಿರುವುದಾಗಿ ಐಸಿಎಂಆರ್ ಘೋಷಿಸಿದೆ. ಇವರ ಜತೆಗೆ ಇನ್ನೂ ನಾಲ್ವರಲ್ಲಿ ಹೊಸ ಪ್ರಭೇದದ ಸೋಂಕು ಕಾಣಿಸಿಕೊಂಡಿರುವ ಶಂಕೆ ಇದ್ದು, ಇವರ ಪರೀಕ್ಷಾ ವರದಿ ಬುಧವಾರ ಬರುವ ಸಾಧ್ಯತೆ ಇದೆ.

» **ಸುಳಿವು ಸಿಗದವರಿಗೆ 48 ಗಂಟೆ ಗಡುವು**

ರಾಜ್ಯಕ್ಕೆ ಬ್ರಿಟನ್‌ನಿಂದ ಒಟ್ಟಾರೆ 2,127 ಮಂದಿ ಆಗಮಿಸಿದ್ದು, ಅವರಲ್ಲಿ 1,903 ಮಂದಿಗೆ ಕೋವಿಡ್ ಪರೀಕ್ಷೆ ನಡೆಸಲಾಗಿದೆ. 29 ಮಂದಿಯಲ್ಲಿ ಕರೊನಾ ಸೋಂಕು ದೃಢಪಟ್ಟಿದ್ದು, ಈ ಪೈಕಿ 17 ಮಂದಿ ಬೆಂಗಳೂರಿನವರಾಗಿದ್ದಾರೆ. ಈ ಸೋಂಕಿತರಲ್ಲಿ ರೂಪಾಂತರಿ ಕರೊನಾ ವೈರಸ್ ಪತ್ತೆಗಾಗಿ 15 ಮಂದಿಯ ರಕ್ತದ ಮಾದರಿಯನ್ನು ಜಿನೋಮಿಕ್ ಸೀಕ್ವೆನ್ಸಿಸ್ ಪರೀಕ್ಷೆಗಾಗಿ ನಿಮ್ಹಾನ್ಸ್‌ನ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಈ ಪೈಕಿ ನಾಲ್ವರ ಮಾದರಿಗಳ ಪರೀಕ್ಷೆ ನಡೆಸಲಾಗಿದ್ದು, ಮೂವರಲ್ಲಿ ರೂಪಾಂತರಿ ವೈರಸ್ ಸೋಂಕು ಇರುವುದು ಪತ್ತೆಯಾಗಿದೆ.

**ಅಪಾರ್ಟ್‌ಮೆಂಟ್ ಸೀಲ್‌ಡೌನ್:** ರೂಪಾಂತರಿ ವೈರಸ್ ತಗುಲಿರುವ ತಾಯಿ-ಮಗು ವಾಸವಿರುವ ವಸಂತಪುರದ ಖಾಸಗಿ ಅಪಾರ್ಟ್‌ಮೆಂಟ್‌ನಲ್ಲಿ 17 ಫ್ಲ್ಯಾಟ್‌ಗಳಿವೆ. ಇದರಲ್ಲಿ ಸೋಂಕಿತರ ಪ್ರಾಥಮಿಕ ಸಂಪರ್ಕಕ್ಕೆ ಇಬ್ಬರು ಹಾಗೂ 35 ಮಂದಿ ದ್ವಿತೀಯ ಸಂಪರ್ಕಕ್ಕೆ ಒಳಗಾಗಿದ್ದಾರೆ. ಸೋಂಕು ಹರಡುವ ಸಾಧ್ಯತೆ ಹಿನ್ನೆಲೆಯಲ್ಲಿ ವೃದ್ಧರನ್ನು ಅಪಾರ್ಟ್‌ಮೆಂಟ್‌ನಿಂದ ಓಲ್ಡ್ ಏರ್ ಪೋರ್ಟ್ ರಸ್ತೆಯ ಅಕ್ಷಯ ಆಸ್ಪತ್ರೆ ಹಾಗೂ ಈಸ್ಟ್ ಎಂಡ್ ಆಸ್ಪತ್ರೆಗೆ ವರ್ಗಾಯಿಸಲಾಗಿದೆ. ಉಳಿದ ನಿವಾಸಿಗಳನ್ನು ಅಪಾರ್ಟ್‌ಮೆಂಟ್‌ನಲ್ಲಿಯೇ ಕ್ವಾರಂಟೈನ್ ಮಾಡಿ ಸೀಲ್‌ಡೌನ್ ಮಾಡಲಾಗಿದೆ.

ಪುಟ 2A



ಬ್ರಿಟನ್‌ನಲ್ಲಿ ಕಾಣಿಸಿಕೊಂಡ ರೂಪಾಂತರಿ ಕರೊನಾ ರಾಜ್ಯದಲ್ಲಿ ಪತ್ತೆಯಾದ ಕಾರಣಕ್ಕೆ ಲಾಕ್‌ಡೌನ್ ಅಥವಾ ಇಡೀ ಪ್ರದೇಶ ಸೀಲ್‌ಡೌನ್ ಮಾಡುವುದು ಅನಗತ್ಯ. ಕೇಂದ್ರದ ಮಾರ್ಗಸೂಚಿಯಂತೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಾಗುವುದು.

| ಡಾ.ಕೆ.ಸುಧಾಕರ್
ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ



ವಿಜಯವಾಣಿ

ಸೋಂಕಿತರು ಪತ್ತೆಯಾದ ಅಪಾರ್ಟ್‌ಮೆಂಟ್ ಸೀಲ್‌ಡೌನ್ ಮಾಡುತ್ತಿರುವ ಪಾಲಿಕೆ ಸಿಬ್ಬಂದಿ.

### ಯಾರಿಗೆ ಸೋಂಕು

ಬೆಂಗಳೂರಿನ ಬೊಮ್ಮನಹಳ್ಳಿ ವಲಯದ ವಸಂತಪುರದ ಖಾಸಗಿ ಅಪಾರ್ಟ್‌ಮೆಂಟ್‌ನ ತಾಯಿ-ಮಗಳು ಮತ್ತು ಜೆ.ಪಿ. ನಗರದ 33 ವರ್ಷದ ವ್ಯಕ್ತಿಯಲ್ಲಿ 'ರೂಪಾಂತರಿ ಕರೊನಾ ವೈರಸ್' ಪತ್ತೆಯಾಗಿದೆ.

### ಸ್ವಯಂಚಿಕಿತ್ಸೆ ಬೇಡ

ರೂಪಾಂತರಿ ಕರೊನಾ ವೈರಸ್ ಸೇರಿದಂತೆ ಯಾವುದೇ ವೈರಸ್ ಇರಲಿ ಸ್ವಯಂಚಿಕಿತ್ಸೆ ಒಳಿತಲ್ಲ. ಬಹಳಷ್ಟು ಮಂದಿ ಸ್ವಯಂಚಿಕಿತ್ಸೆಯಿಂದ ರೋಗ ಗಂಭೀರ ಹಂತಕ್ಕೆ ತಲುಪಿದಾಗ ಆಸ್ಪತ್ರೆಗೆ ಬರುತ್ತಾರೆ. ಹಾಗೆ ಮಾಡದೆ ರೋಗ ಲಕ್ಷಣಗಳು ಕಂಡುಬಂದ ಕೂಡಲೇ ವೈದ್ಯರಲ್ಲಿ ಪರೀಕ್ಷೆ ಮಾಡಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆಯುವುದು ಸೂಕ್ತ ಎಂದು ವೈದ್ಯರು ಸಲಹೆ ನೀಡುತ್ತಾರೆ.

### ಚಿಕಿತ್ಸೆ ಹೇಗಿರುತ್ತದೆ?

ಬ್ರಿಟನ್‌ನಲ್ಲಿ ಕಾಣಿಸಿಕೊಂಡಿರುವ ರೂಪಾಂತರಿ ಕರೊನಾ ವೈರಸ್‌ನಿಂದ ಬರುವ ರೋಗದಲ್ಲಿ ತೀವ್ರತೆಯಿಲ್ಲ. ಇದಕ್ಕೆ



ಪ್ರತ್ಯೇಕ ಚಿಕಿತ್ಸೆಯ ಅಗತ್ಯವೂ ಇಲ್ಲ. ಕರೊನಾ ಸೋಂಕಿತರಿಗೆ ನೀಡಿದ ಚಿಕಿತ್ಸೆಯನ್ನೇ ರೂಪಾಂತರಿ ವೈರಸ್ ಹೊಂದಿದವರಿಗೂ ನೀಡಲಾಗುತ್ತದೆ. ಆದರೆ, ಇದು ಒಬ್ಬರಿಂದ ಒಬ್ಬರಿಗೆ ವೇಗವಾಗಿ ಹರಡುವ ಗುಣ ಹೊಂದಿದೆ. ಅದಕ್ಕೆ ಆತಂಕಪಡುವ ಅಗತ್ಯವಿಲ್ಲ. ಬದಲಿಗೆ ಜನರು ಜಾಗ್ರತೆಯಿಂದ ಇರಬೇಕು. ಸಾಮಾಜಿಕ ಅಂತರ, ಮಾಸ್ಕ್ ಧರಿಸುವುದು ಹಾಗೂ ಕೈಗಳ ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡಬೇಕು ಎಂದು ನಿಮ್ಹಾನ್ಸ್‌ನ ವೈರಾಣುತಜ್ಞ ಡಾ. ವಿ. ರವಿ ತಿಳಿಸಿದ್ದಾರೆ.

### ಭಾರತದಲ್ಲಿ ಆರು ಪಾಸಿಟಿವ್

**ನವದೆಹಲಿ:** ಬ್ರಿಟನ್‌ನಿಂದ ಭಾರತಕ್ಕೆ ವಾಪಸಾದವರ ಪೈಕಿ ಆರು ಮಂದಿಯಲ್ಲಿ ರೂಪಾಂತರಿ ಕರೊನಾ ವೈರಸ್ ಸೋಂಕು ಇರುವುದು ದೃಢಪಟ್ಟಿದೆ. ಆರು ಮಂದಿಯಲ್ಲಿ ಮೂವರು ಬೆಂಗಳೂರಿನವರು. ಉಳಿದ ಇಬ್ಬರು ಹೈದರಾಬಾದ್‌ನ ಸೆಲ್ಯುಲರ್ ಅಂಡ್ ಮಾಲೆಕ್ಯುಲರ್ ಬಯಾಲಜಿ ಸಂಸ್ಥೆ ಹಾಗೂ ಒಬ್ಬರು ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ. ಈ ಎಲ್ಲ ರೋಗಿಗಳನ್ನು 'ಏಕ ಕೊಠಡಿ ಐಸೋಲೇಶನ್'ಗೆ ಒಳಪಡಿಸಲಾಗಿದೆ. ಅವರ ಸಮೀಪ ಸಂಪರ್ಕಿತರನ್ನು ಕೂಡ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

# ನಾಳೆ ರಾತ್ರಿ 8 ರಿಂದ ಸಂಚಾರ ಮಾರ್ಗ ಮಾರ್ಪಾಡು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ವರ್ಷಾಚರಣೆ ವೇಳೆ ಅಹಿತಕರ ಘಟನೆ, ರಸ್ತೆ ಅಪಘಾತ ನಡೆಯದಂತೆ ಸುಗಮ ಸಂಚಾರಕ್ಕಾಗಿ ನಗರ ಪೊಲೀಸರು ಮೇಲ್ಸೇತುವೆಗಳಲ್ಲಿ ಸಂಚಾರ ಬಂದ್ ಹಾಗೂ ಕೆಲ ಮಾರ್ಗಗಳನ್ನು ಮಾರ್ಪಾಡು ಮಾಡಿದ್ದಾರೆ.

ಡಿ.31ರ ರಾತ್ರಿ ಪ್ರತಿವರ್ಷದಂತೆ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ರೆಸಿಡೆನ್ಸಿ ರಸ್ತೆ, ಸೆಂಟ್ ಮಾರ್ಕ್ಸ್ ರಸ್ತೆ ಮತ್ತು ಚರ್ಚ್ ಸ್ಟ್ರೀಟ್‌ಗಳಲ್ಲಿ ಜನರು ಗುಂಪು ಸೇರುವ ಸಾಧ್ಯತೆಗಳಿರುತ್ತವೆ. ಅದಕ್ಕಾಗಿ ಈ ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧ ವಿಧಿಸಿ ಪರ್ಯಾಯ ಮಾರ್ಗವನ್ನು ಕಲ್ಪಿಸಲಾಗಿದೆ.

» ವರ್ಷಾಚರಣೆ ಹಿನ್ನೆಲೆಯಲ್ಲಿ ಪೊಲೀಸರಿಂದ ಮುನ್ನೆಚ್ಚರಿಕೆ

ಡಿ.31ರ ರಾತ್ರಿ 8 ಗಂಟೆಯಿಂದ ತಡರಾತ್ರಿ 2 ಗಂಟೆ ವರೆಗೆ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಮ್ಯೂಸಿಯಂ ರಸ್ತೆ, ರೆಸ್ಟ್ ಹೌಸ್ ಪಾರ್ಕ್ ರಸ್ತೆ, ರೆಸಿಡೆನ್ಸಿ ರಸ್ತೆಯಲ್ಲಿ ಪೊಲೀಸ್ ವಾಹನ, ತುರ್ತು ಸೇವಾ ವಾಹನ ಹೊರತು ಪಡಿಸಿ ಉಳಿದ ಎಲ್ಲ ವಾಹನಗಳ ಸಂಚಾರ ನಿಷೇಧಿಸಲಾಗಿದೆ. ರಾತ್ರಿ 10 ಗಂಟೆಯಿಂದ ಜ.1ರ ಬೆಳಗ್ಗೆ 6 ಗಂಟೆ ವರೆಗೆ ನಗರದಲ್ಲಿ ಇರುವ 44 ಮೇಲುರಸ್ತೆಗಳಲ್ಲಿ ವಾಹನ ಸಂಚಾರ ಬಂದ್ ಮಾಡಲಾಗುತ್ತದೆ. ವ್ಹೀಲಿಂಗ್, ಡ್ರ್ಯಾಗ್‌ರೇಸ್, ಅತಿವೇಗದ ಚಾಲನೆ ಮಾಡುವುದನ್ನು ತಡೆಯಲು ಮೇಲುರಸ್ತೆಗಳಲ್ಲಿ ಸಂಚಾರ ಬಂದ್ ಮಾಡಲಾಗುತ್ತದೆ.

**ಕೆಲವೆಡೆ ಪಾರ್ಕಿಂಗ್ ನಿರ್ಬಂಧ**

**ಡಿ.31ರ ಸಂಜೆ 4 ರಿಂದ ತಡರಾತ್ರಿ 2 ಗಂಟೆವರೆಗೆ ಎಂ.ಜಿ. ರಸ್ತೆ, ಕಬ್ಬನ್ ರಸ್ತೆ, ರೆಸಿಡೆನ್ಸಿ ರಸ್ತೆ, ರಿಚ್‌ಮಂಡ್ ರಸ್ತೆ, ಇನ್‌ಫೆಂಟ್ರಿ ರಸ್ತೆ, ಬ್ರಿಗೇಡ್ ರಸ್ತೆ, ಅಶೋಕನಗರ ಜಂಕ್ಷನ್, ಚರ್ಚ್ ಸ್ಟ್ರೀಟ್, ಮ್ಯೂಸಿಯಂ ರಸ್ತೆ, ಸೆಂಟ್ ಮಾರ್ಕ್ಸ್ ರಸ್ತೆ, ಸುತ್ತುಮುತ್ತ ರಸ್ತೆಯಲ್ಲಿ ಪಾರ್ಕಿಂಗ್ ನಿರ್ಬಂಧಿಸಲಾಗಿದೆ.**

ವಿಶ್ವವಾಣಿ

# ರಾಜಧಾನಿಗೆ ಇದೀಗ ಕರೋನಾ ಕಂಟಕ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



ಹೆಮ್ಮಾರಿ ಕರೋನಾದಿಂದ ಕರ್ನಾಟಕದ ಜನತೆ ತತ್ತರಿಸಿ ಇನ್ನೇನು ಚೇತರಿಸಿಕೊಳ್ಳುತ್ತಿರುವಾಗಲೇ ರಾಜ್ಯಕ್ಕೆ ಬ್ರಿಟನ್ ರೂಪಾಂತರ ಕರೋನಾ ಮತ್ತೆ ಕಂಟಕವಾಗಿದೆ.

ಬ್ರಿಟನ್‌ನಿಂದ ಬೆಂಗಳೂರಿಗೆ ಬಂದ ಮೂವರಲ್ಲಿ ಬ್ರಿಟನ್ ರೂಪಾಂತರ ಕರೋನಾ ಸೋಂಕು ಇರುವುದು ಪತ್ತೆಯಾಗಿದೆ. ಉತ್ತರಹಳ್ಳಿಯ 6 ವರ್ಷದ ಮಗಳು, 34 ವರ್ಷದ ಮಹಿಳೆ ಹಾಗೂ ರಾಜಾಜಿನಗರದ 73 ವರ್ಷದ ಮಹಿಳೆಗೆ ಬ್ರಿಟನ್ ರೂಪಾಂತರ ಕರೋನಾ ದೃಢಪಟ್ಟಿದೆ. ಕೇಂದ್ರ ಆರೋಗ್ಯ ಇಲಾಖೆ ಸುದ್ದಿಗೋಷ್ಠಿ ನಡೆಸಿ ಅಧಿಕೃತವಾಗಿ ಘೋಷಣೆ ಮಾಡಿದೆ.

ಡಿಸೆಂಬರ್ 19ರಂದು ಬ್ರಿಟನ್‌ನಿಂದ ತಾಯಿ ಮಗಳು ಬಂದಿದ್ದರು. ಬೆಂಗಳೂರಿಗೆ ಬಂದ ನಂತರ ಉತ್ತರಹಳ್ಳಿಯಲ್ಲಿ ನೆಲೆಸಿದ್ದರು. ಬಂದ ಕೆಲ ದಿನಗಳಲ್ಲಿ ಶೀತ-ಜ್ವರ ಕಾಣಿಸಿಕೊಂಡ ಹಿನ್ನೆಲೆ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದರು. ಈ ವೇಳೆ ಅವರನ್ನು ಕರೋನಾ ಪರೀಕ್ಷೆಗೆ ಒಳಪಡಿಸಿದಾಗ ಕರೋನಾ ದೃಢಪಟ್ಟಿತ್ತು. ಇದೇ ವೇಳೆ ಬ್ರಿಟ್‌ನಿಂದ ಬಂದು ರಾಜಾಜಿನಗರದಲ್ಲಿ ನೆಲೆಸಿದ್ದ ಮಹಿಳೆಗೆ ರೂಪಾಂತರ ಕರೋನಾ ಕಾಡಿದೆ. ರಾಜಾಜಿನಗರದ ವೃದ್ಧೆ ಹಾಗೂ ಉತ್ತರಹಳ್ಳಿಯ ಇಬ್ಬರನ್ನೂ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ದಾಖಲು ಮಾಡಿ ಅವರ ಸ್ವ್ಯಾಬ್ ಮಾದರಿಯನ್ನು ತೆಗೆದು ಪುಣೆಯ ಲ್ಯಾಬೋರೇಟರಿಗೆ ಕಳಿಸಲಾಗಿತ್ತು. ಈಗ ಮೂವರಿಗೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದಾಖಲು ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ.

ಬ್ರಿಟನ್ ಕರೋನಾ ವೈರಸ್, ಕರೋನಾಗಿಂತ 70ರಷ್ಟು ವೇಗವಾಗಿ ಹರಡುತ್ತದೆ. ಈ ಕಾರಣಕ್ಕಾಗಿ ಹಳೆಯ ವೈರಸ್ ರೋಗಿಗಳ ಜತೆಗೆ ಹೊಸ ವೈರಸ್ ರೋಗಿಗಳನ್ನು ಸೇರಿಸಿ ಒಂದೇ ವಾರ್ಡ್‌ನಲ್ಲಿ ಚಿಕಿತ್ಸೆ ನೀಡುವುದು ಬೇಡ ಎಂದು ಆರೋಗ್ಯ ಇಲಾಖೆ ನಿರ್ಧರಿಸಿದ್ದು, ಹೊಸ ವೈರಸ್ ಸೋಂಕಿತರಿಗೆ ಪ್ರತ್ಯೇಕ ಕೊಠಡಿ ನಿರ್ಮಿಸಿ ಚಿಕಿತ್ಸೆ ನೀಡಿ ಎಂದು ವಿಕ್ಟೋರಿಯಾ ಆಸ್ಪತ್ರೆ ವೈದ್ಯರಿಗೆ ಅಧಿಕಾರಿಗಳು ಸೂಚಿಸಿದ್ದಾರೆ.

## ಮಕ್ಕಳಿಗೆ ಸೋಂಕು ತಗುಲಿದರೆ ಜೀವಕ್ಕೆ ಅಪಾಯ

ರಾಜ್ಯದಲ್ಲಿ ರೂಪಾಂತರ ಕರೋನಾ ಸೋಂಕು ಕಾಲಿಟ್ಟ ಬೆನ್ನಲ್ಲೆ ಆತಂಕ ಹೆಚ್ಚಿದೆ. ಚಿಕ್ಕಮಕ್ಕಳಲ್ಲಿ ಈ ಸೋಂಕು ಹೆಚ್ಚು ಅಪಾಯಕಾರಿಯಾಗಿದೆ ಎಂದು ತಿಳಿದು ಬಂದಿದೆ. ಬೆಂಗಳೂರಿನಲ್ಲಿ ತಾಯಿ ಮತ್ತು ಮಗುವಿನಲ್ಲಿ ಸೋಂಕು ಪತ್ತೆಯಾಗಿದ್ದು, ಮಕ್ಕಳಲ್ಲಿ ಈ ಸೋಂಕು ಹರಡುವಲ್ಲಿ ಅಪಾಯಕಾರಿ. ಈ ನಿಟ್ಟಿನಲ್ಲಿ ಅಗತ್ಯ ಮುಂಜಾಗ್ರತ ಕ್ರಮ ಕೈಗೊಳ್ಳುವುದು ಒಳಿತು. ಹೊಸ ಕರೋನಾ ಪ್ರಬೇಧ ಪತ್ತೆಯಾದವರಿಗೆ 28 ದಿನ ಆಸ್ಪತ್ರೆಯಲ್ಲೆ ಚಿಕಿತ್ಸೆ ಕಡ್ಡಾಯವಾಗಿ ನೀಡಬೇಕು. ಸೋಂಕಿತರ ಪ್ರಾಥಮಿಕ ಸಂಪರ್ಕದಲ್ಲಿದ್ದವರಿಗೆ 14 ದಿನ ಕ್ವಾರಂಟೈನ್‌ನಲ್ಲಿ ಚಿಕಿತ್ಸೆ ನೀಡಬೇಕು. ವಿಶೇಷವಾಗಿ ಮಕ್ಕಳಲ್ಲಿ ಸೋಂಕು ಪತ್ತೆಯಾದಲ್ಲಿ ಜೀವಕ್ಕೆ ಅಪಾಯ ಎಂದು ತಜ್ಞರು ಹೇಳಿದ್ದಾರೆ.

## ಅಪಾರ್ಟ್‌ಮೆಂಟ್ ಸೀಲ್‌ಡೌನ್

ಬೆಂಗಳೂರು: ನಗರದ ದಕ್ಷಿಣ ಭಾಗದ ವಸಂತಪುರದಲ್ಲಿ ಅಪಾರ್ಟ್‌ಮೆಂಟ್‌ನಲ್ಲಿ ವಾಸವಾಗಿದ್ದವರಲ್ಲಿ ರೂಪಾಂತರಿ ಕರೋನಾ ಸೋಂಕು ಪತ್ತೆಯಾದ ಬೆನ್ನಲ್ಲೇ, ಅಲ್ಲಿನ ನಿವಾಸಿಗಳನ್ನು ಕ್ವಾರಂಟೈನ್ ಮಾಡಲು ಹೋದ ಬಿಬಿಎಂಪಿ ಅಧಿಕಾರಿಗಳಿಗೆ ನಿವಾಸಿಗಳು ಶಾಕ್ ನೀಡಿದ್ದಾರೆ. ನಾವು ಯಾವ ಕಾರಣಕ್ಕೂ ಕ್ವಾರಂಟೈನ್ ಕೇಂದ್ರಕ್ಕೆ ಬರೋದಿಲ್ಲ ಎಂದು ಪಟ್ಟು ಹಿಡಿದಿದ್ದಾರೆ. ಇದು 25 ಫ್ಲಾಟ್‌ಗಳಿರುವ ಅಪಾರ್ಟ್‌ಮೆಂಟ್ ಆಗಿದ್ದು, ಇಲ್ಲಿನ ನಿವಾಸಿಗಳಲ್ಲಿ ಬಹುತೇಕರು ಐಟಿ-ಬಿಟಿ ಉದ್ಯೋಗಿಗಳು. ಸೋಂಕಿತರ ಪ್ರಾಥಮಿಕ ಸಂಪರ್ಕದಲ್ಲಿ ಇಬ್ಬರು, ದ್ವಿತೀಯ ಸಂಪರ್ಕದಲ್ಲಿ 35 ಮಂದಿ ಇರುವುದು ಗೊತ್ತಾಗಿದೆ. ಸುಮಾರು 40 ಮಂದಿಯನ್ನು ಅಪಾರ್ಟ್‌ಮೆಂಟ್‌ನಿಂದ ಶಿಫ್ಟ್ ಮಾಡಿ, ಸಾಂಸ್ಥಿಕ ಕ್ವಾರಂಟೈನ್ ಮಾಡುವ ಉದ್ದೇಶದಿಂದ ಇಲ್ಲಿಗೆ ಬಿಬಿಎಂಪಿ ಅಧಿಕಾರಿಗಳು ಆಗಮಿಸಿದ್ದರು. ಆದರೆ ನಿವಾಸಿಗಳು ಮಾತ್ರ ಯಾವುದೇ ಒತ್ತಾಯಕ್ಕೂ ಜಗ್ಗಲಿಲ್ಲ. ಕೆಲ ನಿಮಿಷಗಳ ಕಾಲ ಅಧಿಕಾರಿಗಳು ಮತ್ತು ನಿವಾಸಿಗಳ ನಡುವೆ ಮಾತಿನ ಸಮರದ ಬಳಿಕ ಕೊನೆಗೂ ಆರೋಗ್ಯ ಸಿಬ್ಬಂದಿಯೇ ಸೋಲಬೇಕಾಯಿತು. ಇಡೀ ಅಪಾರ್ಟ್‌ಮೆಂಟ್‌ನ್ನು ಸೀಲ್‌ಡೌನ್ ಮಾಡಿ, ನಿವಾಸಿಗಳು ಅಲ್ಲಿಯೇ ಉಳಿಯುವಂತೆ ಮಾಡಿದ್ದಾರೆ.

## ರಾಜ್ಯದಲ್ಲಿ 662 ಹೊಸ ಪ್ರಕರಣಗಳು

ಬೆಂಗಳೂರು: ರಾಜ್ಯದಲ್ಲಿ ಕಳೆದ 24 ಗಂಟೆಗಳಲ್ಲಿ ಕರೋನಾ ದೃಢಪಟ್ಟ 662 ಪ್ರಕರಣಗಳು ವರದಿಯಾಗಿವೆ. ಇದೇ ಅವಧಿಯಲ್ಲಿ ಸೋಂಕಿನಿಂದ 4 ಮಂದಿ ಮೃತಪಟ್ಟಿದ್ದಾರೆ. ಒಟ್ಟು ಪ್ರಕರಣಗಳ ಸಂಖ್ಯೆ 9.17 ಲಕ್ಷ ಮುಟ್ಟಿದ್ದು, ಈ ಪೈಕಿ 8,93,617 ಮಂದಿ ಗುಣಮುಖರಾಗಿದ್ದಾರೆ. 12,074 ಮಂದಿ ಸಾವಿಗೀಡಾಗಿದ್ದು, 11,861 ಪ್ರಕರಣಗಳು ಸಕ್ರಿಯವಾಗಿವೆ. ಬೆಂಗಳೂರಿನಲ್ಲಿ ಕರೋನಾ ದೃಢಪಟ್ಟ 370 ಪ್ರಕರಣಗಳು, ತುಮಕೂರಿನಲ್ಲಿ 38, ಕೋಲಾರದಲ್ಲಿ 31, ದಕ್ಷಿಣ ಕನ್ನಡದಲ್ಲಿ 35, ಹಾಸನದಲ್ಲಿ 25 ಹಾಗೂ ಮೈಸೂರಿನಲ್ಲಿ 23 ಮಂದಿ ಕರೋನಾ ಸೋಂಕಿತರಾಗಿದ್ದಾರೆ.

ವಿಶ್ವವಾಣಿ

# ದೇಶದಲ್ಲಿ ಆರು ಜನರಿಗೆ ರೂಪಾಂತರಿ ಕರೋನಾ

**ದೆಹಲಿ:** ಬ್ರಿಟನ್‌ನಿಂದ ಭಾರತಕ್ಕೆ ಹಿಂದಿರುಗಿದ ಆರು ಜನರಲ್ಲಿ ರೂಪಾಂತರಿ ಕರೋನಾ ವೈರಸ್ ಸೋಂಕು ದೃಢಪಟ್ಟಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.



ಸೋಂಕಿತರನ್ನು ಆಯಾ ರಾಜ್ಯ ಸರಕಾರಗಳು ಗೊತ್ತುಪಡಿಸಿದ ಆರೋಗ್ಯ ಕೇಂದ್ರಗಳಲ್ಲಿ ಕ್ವಾರಂಟೈನ್‌ನಲ್ಲಿ ಇರಿಸಲಾಗಿದ್ದು, ಅವರ ನಿಕಟ ಸಂಪರ್ಕಿತರನ್ನೂ ಕ್ವಾರಂಟೈನ್ ಮಾಡಲಾಗಿದೆ. ಸಹ ಪ್ರಯಾಣಿಕರು, ಕುಟುಂಬದ ಸಂಪರ್ಕಿತರ ಪತ್ತೆಗೆ ಕ್ರಮವಹಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ನವೆಂಬರ್ 25 ರಿಂದ ಡಿಸೆಂಬರ್ 23 ರ ಮಧ್ಯರಾತ್ರಿಯವರೆಗೆ ಸುಮಾರು 33 ಸಾವಿರ ಪ್ರಯಾಣಿಕರು ಬ್ರಿಟನ್‌ನಿಂದ ಭಾರತಕ್ಕೆ ಬಂದಿದ್ದಾರೆ ಎಂದು ಮಾಹಿತಿ ನೀಡಿದೆ.

**ಕೇರಳದಲ್ಲೇ ಅಧಿಕ:** ಬ್ರಿಟನ್‌ನಿಂದ ಆಗಮಿಸಿರುವವರಲ್ಲಿ ಇದುವರೆಗೂ 18 ಜನರಿಗೆ ರೂಪಾಂತರಿ ಕರೋನಾ ಸೋಂಕು ಇರುವುದು ಪತ್ತೆಯಾಗಿದ್ದು, ಅವರೆಲ್ಲರನ್ನೂ ಕ್ವಾರಂಟೈನ್‌ನಲ್ಲಿ ಇರಿಸಲಾಗಿದೆ.

**ವಿಮಾನ ಹಾರಾಟ ನಿಷೇಧ ವಿಸ್ತರಣೆ?:** ಬ್ರಿಟನ್‌ನಿಂದ ಬರುವ ಎಲ್ಲ ವಿಮಾನಗಳ ಹಾರಾಟವನ್ನು ನಿಷೇಧಿಸಿದ್ದ ಭಾರತ ಸರಕಾರ, ನಿಷೇಧವನ್ನು ವಿಸ್ತರಿಸುವ ಎಲ್ಲ ಸಾಧ್ಯತೆಗಳು ಹೆಚ್ಚಿವೆ ಎಂದು ಕೇಂದ್ರ ವಿಮಾನಯಾನ ಸಚಿವ ಹರದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.

**48 ಗಂಟೆಗಳಲ್ಲಿ ಪತ್ತೆ:** 'ಇಂಗ್ಲೆಂಡ್‌ನಿಂದ ಈ ವ್ಯಕ್ತಿಗಳ ಜತೆ ಬಂದ ಉಳಿದ ಪ್ರಯಾಣಿಕರ ವಿವರಗಳನ್ನೂ ನಾಗರಿಕ ವಿಮಾನಯಾನ ಸಚಿವಾಲಯದಿಂದ ಪಡೆದುಕೊಂಡಿದ್ದೇವೆ. ಭೇಟಿ ಮಾಡಿ ಅವರ ಆರೋಗ್ಯದ ಪರಿಸ್ಥಿತಿಯನ್ನೂ ತಿಳಿದುಕೊಳ್ಳಲಾಗಿದೆ. ಪರೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ. ನಾಪತ್ತೆಯಾದವರ ಬಗ್ಗೆ ಗೃಹಸಚಿವರೊಂದಿಗೆ ಮಾತನಾಡಿದ್ದೇವೆ. 48 ಗಂಟೆಗಳಲ್ಲಿ ಪತ್ತೆ ಮಾಡುತ್ತೇವೆ' ಎಂದು ಸಚಿವ ಡಾ. ಸುಧಾಕರ್ ಹೇಳಿದ್ದಾರೆ.

## ಬೆಂಗಳೂರಿನಲ್ಲಿ ಮೂವರಿಗೆ ಕರೋನಾ

**ಬ್ರಿಟನ್‌ನಿಂದ ಬೆಂಗಳೂರಿಗೆ ಬಂದಿದ್ದ 15 ಪ್ರಯಾಣಿಕರಲ್ಲಿ ಮೂವರಿಗೆ ರೂಪಾಂತರಿ ಕರೋನಾ ದೃಢಪಟ್ಟಿದೆ. ವಸಂತಪುರದ 35 ವರ್ಷದ ಮಹಿಳೆ (ತಾಯಿ) ಮತ್ತು ಆರು ವರ್ಷದ ಮಗು (ಮಗಳು) ಮತ್ತು ಜೆ.ಪಿ.ನಗರದ 33 ವರ್ಷದ ಯುವಕನಿಗೆ ರೂಪಾಂತರಿ ಕರೋನಾ ದೃಢಪಟ್ಟಿದೆ.**

## ಎಲ್ಲೆಲ್ಲಿ ಪತ್ತೆ?

ಬೆಂಗಳೂರಿನ ನಿಮ್ಹಾನ್ಸ್ - 3
ಹೈದರಾಬಾದ್ ಸಿಸಿಎಂಬಿ-2
ಪುಣೆಯ ಎನ್‌ಐವಿ-1

ವಿಶ್ವವಾಣಿ

# ಹೊಸ ವರ್ಷಾಚರಣೆ: 44 ಮೇಲ್ಸೇತುವೆ ಪ್ರವೇಶ ಬಂದ್

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು



ಹೊಸ ವರ್ಷಾಚರಣೆ ಹಿನ್ನೆಲೆ ಡಿಸೆಂಬರ್ 31ರಂದು ವಾಹನಗಳ ಸಂಚಾರ ಮತ್ತು ಪ್ರವೇಶ ವನ್ನು ನಿಷೇಧಿಸಿ ಬೆಂಗಳೂರು ಪೊಲೀಸ್ ಆಯುಕ್ತ ಕಮಲ್ ಪಂತ್ ಆದೇಶ ಹೊರಡಿಸಿದ್ದಾರೆ.

ಕರೋನಾ ಸೋಂಕಿನ ಅಟ್ಟಹಾಸದಿಂದ ಹೊಸ ವರ್ಷದ ಸಂಭ್ರಮಾಚರಣೆಗೆ ಅನಿವಾರ್ಯ ವಾಗಿ ನಿರ್ಬಂಧ ಹೇರಲಾಗಿದ್ದು, ಡಿಸೆಂಬರ್ 31ರ ರಾತ್ರಿ 8ರಿಂದ ಜನವರಿ 1ರ ಮುಂಜಾನೆ 2ರವರೆಗೆ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಮ್ಯೂಸಿಯಂ ರಸ್ತೆ, ರೆಸ್ಟ್ ಹೌಸ್ ಪಾರ್ಕ್ ರಸ್ತೆ, ರೆಸಿಡೆನ್ಸಿ ರಸ್ತೆಗಳಲ್ಲಿ ವಾಹನಗಳ ಸಂಚಾರ ಮತ್ತು ಪ್ರವೇಶವನ್ನು ನಿಷೇಧಿಸಲಾಗಿದೆ.

ಡಿಸೆಂಬರ್ 31ರ ರಾತ್ರಿ 10ರಿಂದ ಬೆಳಗ್ಗೆ 6ರವರೆಗೆ ಮಡಿವಾಳ, ಎಲೆಕ್ಟ್ರಾನಿಕ್ ಸಿಟಿ, ಮೈಕೋ ಲೇಔಟ್, ಏರ್‌ಪೋರ್ಟ್, ವೈಟ್ ಫೀಲ್ಡ್, ಎಚ್ ಎಸ್ಆರ್ ಲೇಔಟ್, ಹಲಸೂರು, ಕೆ.ಆರ್.ಪುರ, ಪುಲಿಕೇಶಿನಗರ, ಬಾಣಸವಾಡಿ, ಆಡುಗೋಡಿ, ಮೈಸೂರು ರಸ್ತೆ, ಬಸವನಗುಡಿ, ಜಯನಗರ, ಮಲ್ಲೇಶ್ವರಂ, ಬನಶಂಕರಿ, ಕೆಂಗೇರಿ, ಯಶವಂತಪುರ, ಹೆಬ್ಬಾಳ, ಹಾಗೂ ಪೀಣ್ಯ ಪ್ರದೇಶಗಳಲ್ಲಿರುವ ಮೇಲ್ಸೇತುವೆಗಳಲ್ಲಿ ವಾಹನ ಸಂಚಾರಕ್ಕೆ ನಿಷೇಧ ಹೇರಲಾಗಿದೆ.

**ಒಟ್ಟು 44 ಫ್ಲೈ ಓವರ್‌ಗಳು ಬಂದ್:** ೊಸ ವರ್ಷ ಸಂಭ್ರಮಾಚರಣೆ ನಿಷೇಧವಿದ್ದರೂ ಗುಂಪು ಸೇರುವುದು ಹಾಗೂ ಫ್ಲೈ ಓವರ್ ಮೇಲೆ ವೀಲಿಂಗ್ ಮತ್ತು ಡ್ರ್ಯಾಗ್ ರೇಸ್ ಮಾಡುವ ಸಾಧ್ಯತೆ ಹೆಚ್ಚಿದ್ದು ಡಿಸೆಂಬರ್ 31ರ ರಾತ್ರಿ 10 ರಿಂದ ಜನವರಿ 1 ಬೆಳಗ್ಗೆ 6 ಗಂಟೆ ವರೆಗೆ ನಗರದ ಒಟ್ಟು 44 ಫ್ಲೈ ಓವರ್‌ಗಳನ್ನು ಬಂದ್ ಮಾಡಲಾಗುತ್ತದೆ.

**ವಾಹನ ನಿಲುಗಡೆ ನಿಷೇಧ:** ಪೊಲೀಸ್ ವಾಹನ ಹಾಗೂ ಕರ್ತವ್ಯ ನಿರತ ತುರ್ತು ವಾಹನಗಳನ್ನು ಹೊರತುಪಡಿಸಿ ಎಂಜಿ ರಸ್ತೆ, ಚರ್ಚ್ ರಸ್ತೆ, ಮ್ಯುಜಿಯಮ್ ರಸ್ತೆ, ರೆಸ್ಟ್ ಹೌಸ್ ಪಾರ್ಕ್ ರೋಡ್ ಮತ್ತು ರೆಸಿಡೆನ್ಸಿ ರೋಡ್ ಸೇರಿದಂತೆ ಟ್ರಿನಿಟಿ ರಸ್ತೆ, ಇನ್ಫೆಂಟ್ರಿ ರಸ್ತೆ , ಬ್ರಿಗೆಡ್ ರಸ್ತೆಗಳಲ್ಲಿ ವಾಹನ ನಿಲುಗಡೆಗೆ ನಿಷೇಧ ಹೇರಲಾಗಿದೆ.

ಉದಯವಾಣಿ
ಜನಮನದ ಜೀವನಾಡಿ

# ಜನರ ಕೈನಲ್ಲೇ ಬ್ರೇಕ್

## ರಾಜ್ಯದ 3 ಸೇರಿ 6 ಮಂದಿಗೆ ಬ್ರಿಟನ್‌ನ ಹೊಸ ತಳಿ ವೈರಸ್

## ಆತಂಕ ಬೇಡ, ಮುನ್ನೆಚ್ಚರಿಕೆ ಇರಲಿ ಎಂದ ಆರೋಗ್ಯ ತಜ್ಞರು

**ಬೆಂಗಳೂರು/ನವದೆಹಲಿ:** ಕೆಲವೇ ಕೆಲವು ತಿಂಗಳಲ್ಲಿ ದೇಶವ್ಯಾಪಿ ತಲ್ಲಣ ಸೃಷ್ಟಿಸಿದ್ದ ಕೊರೊನಾ ವೈರಸ್ ಈಗ 'ರೂಪಾಂತರ'ಗೊಂಡು ಮತ್ತಷ್ಟು ತೀವ್ರ ಸೋಂಕಿನ ಸಾಮರ್ಥ್ಯದೊಂದಿಗೆ ದೇಶವನ್ನು ಪ್ರವೇಶಿಸಿದೆ. ದೃಢಪಟ್ಟ ಆರು ಪ್ರಕರಣಗಳಲ್ಲಿ ಮೂರು ರಾಜ್ಯದಲ್ಲಿದ್ದು, ಹೆಚ್ಚು ಆತಂಕ ಮನೆಮಾಡಿದೆ. ಆದರೆ, ಇದಕ್ಕೆ ಕಡಿವಾಣ ಹಾಕುವಲ್ಲಿ ತಕ್ಷಣಕ್ಕೆ ಲಸಿಕೆಗಿಂತ ಸಾರ್ವಜನಿಕರ ಪಾತ್ರ ದೊಡ್ಡದಿದೆ.

ರೂಪಾಂತರ ವೈರಸ್ ದೃಢಪಟ್ಟ ಬೆನ್ನಲ್ಲೇ ಸೋಂಕಿತರು ಮತ್ತು ಸಂಪರ್ಕಿತರನ್ನು ಪತ್ತೆಹಚ್ಚುವ ಕಾರ್ಯ ನಡೆದಿದೆ. ಮತ್ತೊಂದೆಡೆ ಹೊಸ ಮಾರ್ಗಸೂಚಿಗಳನ್ನೂ ಹೊರಡಿಸಬಹುದು. ಕ್ವಾರಂಟೈನ್ ಮತ್ತಿತರ ಕ್ರಮಗಳ ಜತೆಗೆ ಲಸಿಕೆಯನ್ನೂ ಕಂಡುಹಿಡಿಯಲಾಗಿದೆ. ಆದರೆ, ರೂಪಾಂತರಗೊಂಡ ವೈರಸ್‌ಗೆ ಅದು ಮದ್ದು ಆಗಬಹುದು ಎಂಬ ಸ್ಪಷ್ಟತೆಯೂ ಇಲ್ಲ. ಈ ಹಿನ್ನೆಲೆಯಲ್ಲಿ ಅದರ ಸೋಂಕಿನ ವೇಗಕ್ಕೆ 'ಬ್ರೇಕ್' ಹಾಕುವ ಸಾಮರ್ಥ್ಯ ಜನರ ಕೈಯಲ್ಲಿದೆ ಎನ್ನುತ್ತಾರೆ ತಜ್ಞರು.

ಮೊದಲ ಹಂತದ ಕೊರೊರಾ ವೈರಸ್ ಎದುರಿಸಿದ್ದೇವೆ. ಇದರಿಂದ ಸಾಮುದಾಯಿಕ ರೋಗ ನಿರೋಧಕ ಶಕ್ತಿ ಹೆಚ್ಚಿದೆ. ಇಂತಹ ಅನುಭವಗಳ ನಡುವೆ ರೂಪಾಂತರ ಕೊರೊನಾ ವೈರಸ್ ಬಂದಿದೆ. ಹಾಗಾಗಿ, ಸರ್ಕಾರದ ವೈಫಲ್ಯವನ್ನು ದೂರುವುದು ಅಥವಾ ಆತಂಕದಿಂದ ಬದುಕುವ ಬದಲಿಗೆ, 9 ತಿಂಗಳ ಅನುಭವವನ್ನು ಒರೆಗೆ ಹಚ್ಚಿ ಜವಾಬ್ದಾರಿ ಮೆರೆಯುವ ತುರ್ತು ಅಗತ್ಯ ಇದೆ ಎಂದು ತಜ್ಞರು ಹೇಳುತ್ತಾರೆ.



**ಬೆಂಗಳೂರಿನ ಮೂವರಿಗೆ ಹೊಸ ಸೋಂಕು:** ಸಾಕಷ್ಟು ಮುನ್ನೆಚ್ಚರಿಕೆಗಳ ನಡುವೆಯೂ ಕೊರೊನಾ ಮತ್ತೊಂದು ರೂಪದಲ್ಲಿ ರಾಜ್ಯಕ್ಕೆ ಕಾಲಿರಿಸಿದೆ. ಇಂಗ್ಲೆಂಡ್ ಸೇರಿದಂತೆ ಇಡೀ ಜಗತ್ತನ್ನೇ ಬೆಚ್ಚಿ ಬೀಳಿಸಿರುವ ಬ್ರಿಟನ್ ರೂಪಾಂತರ ಕೊರೊನಾ ವೈರಸ್ ಬೆಂಗಳೂರಿನ ಮೂವರಲ್ಲಿ ಕಾಣಿಸಿಕೊಂಡಿರುವುದು ಮಂಗಳವಾರ ದೃಢಪಟ್ಟಿದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದ್ದಾರೆ. ವಸಂತಪುರದ ತಾಯಿ ಮತ್ತು ಮಗು ಹಾಗೂ ಜೆ.ಪಿ.ನಗರದಲ್ಲಿ ವಯಸ್ಕ ಪುರುಷರೊಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ.

▸ 5ನೇ ಪುಟಕ್ಕೆ



ರೂಪಾಂತರಿ ವೈರಸ್ ಕಂಡು ಬಂದ ಹಿನ್ನೆಲೆಯಲ್ಲಿ ಬೆಂಗಳೂರಿನ ಅಪಾರ್ಟ್‌ಮೆಂಟ್ ಅನ್ನು ಸೀಲ್ ಮಾಡಲಾಯಿತು.

## ಬ್ರಿಟನ್ ಕೊರೊನಾಗೂ ಲಸಿಕೆ ಪರಿಣಾಮಕಾರಿ

ಬ್ರಿಟನ್‌ನಲ್ಲಿ ಪತ್ತೆಯಾಗಿರುವ ಹೊಸ ಮಾದರಿ ಕೊರೊನಾ ವೈರಸ್‌ಗೂ ಈಗ ಅಭಿವೃದ್ಧಿಪಡಿಸಲಾಗುತ್ತಿರುವ ಲಸಿಕೆಯೇ ಪರಿಣಾಮಕಾರಿಯಾಗಿರಲಿದೆ ಎಂದು ಭಾರತ್ ಬಯೋಟೆಕ್‌ನ ಎಂಡಿ ಕೃಷ್ಣ ಎಲ್ಲ ತಿಳಿಸಿದ್ದಾರೆ. ಈ ಸಂಸ್ಥೆ ದೇಶೀಯ ಲಸಿಕೆ ಕೋವ್ಯಾಕ್ಸಿನ್ ಅನ್ನು ಅಭಿವೃದ್ಧಿಗೊಳಿಸುತ್ತಿದೆ. ಇನ್ನು ಕೇಂದ್ರ ಸರ್ಕಾರವೂ ಹಾಲಿ ಇರುವ ಲಸಿಕೆಗಳೇ ಹೊಸ ಮಾದರಿಗೂ ಪರಿಣಾಮಕಾರಿಯಾಗಿ ಕೆಲಸ ಮಾಡಲಿವೆ ಎಂದು ಸ್ಪಷ್ಟಪಡಿಸಿದೆ.

## 6 ಮಂದಿಗೆ ರೂಪಾಂತರ ವೈರಸ್

ಬೆಂಗಳೂರಿನ ಮೂರು, ಆಂಧ್ರದ ಇಬ್ಬರು ಮತ್ತು ಪುಣೆಯ ಒಬ್ಬರಿಗೆ ಬ್ರಿಟನ್‌ನಲ್ಲಿ ಪತ್ತೆಯಾಗಿರುವ ಹೊಸ ಮಾದರಿಯ ಕೊರೊನಾ ವೈರಸ್ ತಗುಲಿರುವುದು ದೃಢಪಟ್ಟಿದೆ. ನವೆಂಬರ್ 25ರಿಂದ ಡಿಸೆಂಬರ್ 23ರ ಅವಧಿಯಲ್ಲಿ 33 ಸಾವಿರ ಮಂದಿ ಬ್ರಿಟನ್‌ನಿಂದ ವಾಪಸ್ ಬಂದಿದ್ದು, 114 ಮಂದಿಗಷ್ಟೇ ಕೊರೊನಾ ದೃಢಪಟ್ಟಿದೆ. ಸದ್ಯ 6 ಮಂದಿಗೆ ಮಾತ್ರ ಬ್ರಿಟನ್‌ನ ಹೊಸ ತಳಿಯ ವೈರಸ್ ಇರುವುದು ಪತ್ತೆಯಾಗಿದೆ. ಉಳಿದವರ ಮಾದರಿಯನ್ನೂ ಜೀನೋಂ ಸಿಕ್ವೆನ್ಸಿಂಗ್‌ಗೆ ಒಳಪಡಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ. ಈ ವೈರಸ್ ಬಗ್ಗೆ ಜನ ಜಾಗರೂಕತೆಯಿಂದ ಇರುವುದು ಅತ್ಯವಶ್ಯ ಎಂದು ಅದು ತಿಳಿಸಿದೆ.

ಬ್ರಿಟನ್ ರೂಪಾಂತರ ಕೊರೊನಾ ವೈರಸ್ ತುಂಬಾ ಭಿನ್ನವಾಗಿಲ್ಲ. ಹರಡುವಿಕೆಯ ತೀವ್ರತೆ ಈ ಹಿಂದಿನ ವೈರಸ್‌ಗಿಂತ ಹೆಚ್ಚಿರುತ್ತದೆ. ಆತಂಕಕ್ಕಿಂತ ಹೆಚ್ಚಾಗಿ ನಾವು ಇಲ್ಲಿ ಅನುಭವವನ್ನು ಒರೆಗೆ ಹಚ್ಚಬೇಕಿದೆ.

• **ಡಾ.ವಿ. ರವಿ,** ರೂಪಾಂತರ ಕೊರೊನಾ ವೈರಸ್ ಪರೀಕ್ಷೆಗಳ ಮುಖ್ಯಸ್ಥರು, ನಿಮ್ಹಾನ್ಸ್

ಸಂಪರ್ಕಿತರು ಯಾರು ಎಂಬುದು ತಿಳಿದಿದೆ. ಅವರು ಮಾತ್ರವಲ್ಲ; ಇತ್ತೀಚೆಗೆ ಯಾವುದೇ ದೇಶದಿಂದ ಬಂದವರೂ ಕೆಲ ದಿನಗಳ ಮಟ್ಟಿಗೆ ಮನೆಯಲ್ಲಿ ಕ್ವಾರಂಟೈನ್ ಇರುವುದು ಸೂಕ್ತ.

• **ಡಾ.ಸಿ. ನಾಗರಾಜ್,** ರಾಜೀವ್ ಗಾಂಧಿ ಆಸ್ಪತ್ರೆ ನಿರ್ದೇಶಕರು

ರೂಪಾಂತರಗೊಂಡ ಕೊರೊನಾ ತಡೆಗೂ ಮಾಸ್ಕ್ ಧರಿಸುವುದು, ಕೈತೊಳೆಯುವುದು, ಸಾಮಾಜಿಕ ಅಂತರವೇ ಮದ್ದು. ಸೋಂಕು ಹೆಚ್ಚಿದ್ದ, ಲಾಕ್‌ಡೌನ್ ಅವಧಿಯ ದಿನಗಳನ್ನು ನೆನೆಸಿಕೊಂಡು ಅದರಂತೆ ಸ್ವಯಂಪ್ರೇರಿತವಾಗಿ ಜನ ನಿಯಮ ಪಾಲಿಸಬೇಕು.

• **ಡಾ.ಮಂಜುನಾಥ್,** ಜಯದೇವ ಹೃದ್ರೋಗಗಳ ಆಸ್ಪತ್ರೆ ನಿರ್ದೇಶಕರು

ತಜ್ಞರ 3 ಸಲಹೆ» 5

## ಲಾಕ್‌ಡೌನ್ ಅಗತ್ಯವಿಲ್ಲ

ರೂಪಾಂತರ ಸೋಂಕು ತಡೆಯಲು ಎಲ್ಲಾ ಮುಂಜಾಗ್ರತೆ ಕೈಗೊಂಡಿದ್ದು, ಯಾವುದೇ ಸಮಸ್ಯೆಯಾಗುವುದಿಲ್ಲ. ಜತೆಗೆ ಸಮುದಾಯದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿದೆ. ರೂಪಾಂತರ ಹಿನ್ನೆಲೆ ಯಾವುದೇ ಲಾಕ್ ಡೌನ್, ಸೀಲ್ ಡೌನ್ ಆಗತ್ಯ ಇಲ್ಲ. ಶಾಲೆ, ಕಾಲೇಜು ಆರಂಭಕ್ಕೆ ಯಾವುದೇ ಸಮಸ್ಯೆ ಇಲ್ಲ ಎಂದು ಸಚಿವ ಸುಧಾಕರ್ ತಿಳಿಸಿದರು.

ಉದಯವಾಣಿ
ಜನಮನದ ಜೀವನಾಡಿ

### ರಾಜಧಾನಿಯ 45 ಮೇಲು ಸೇತುವೆಗಳ ಮೇಲೆ ಸಂಚಾರ ಬಂದ್

# ಹೊಸವರ್ಷ: ಕೆಲ ರಸ್ತೆಗಳಲ್ಲಿ ಸಂಚಾರ ನಿರ್ಬಂಧ

**ಬೆಂಗಳೂರು:** ಕೋವಿಡ್-19 ಹಿನ್ನೆಲೆಯಲ್ಲಿ ಹೊಸವರ್ಷಾಚರಣೆ ಸಂದರ್ಭದಲ್ಲಿ ಸಾರ್ವಜನಿಕ ಗುಂಪು ಸೇರುವುದನ್ನು ತಪ್ಪಿಸುವ ಸಲುವಾಗಿ ನಗರದ ಕೆಲ ರಸ್ತೆ ಮತ್ತು ಮೇಲುಸುತೇವೆಗಳಲ್ಲಿ ಸಂಚಾರ ನಿರ್ಬಂಧಿಸಿ ಬೆಂಗಳೂರು ಪೊಲೀಸ್ ಆಯುಕ್ತ ಕಮಲ್ ಪಂತ್ ಆದೇಶ ಹೊರಡಿಸಿದ್ದಾರೆ.

ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್, ಸೆಂಟ್ ಮಾರ್ಕ್ಸ್ ರಸ್ತೆ, ರೆಸ್ಟ್ ಹೌಸ್ ರಸ್ತೆ ಮತ್ತು ರೆಸಿಡೆನ್ಸಿ ರಸ್ತೆಗಳಲ್ಲಿ ಡಿ.31 ರಾತ್ರಿ 8 ಗಂಟೆಯಿಂದ ಮತ್ತು 2020 ಜ.1 ಬೆಳಗ್ಗೆ ಆರು ಗಂಟೆವರೆಗೆ ವಾಹನ ಸಂಚಾರ ನಿರ್ಬಂಧ ಹಾಗೂ ಇತರೆ ಸಂಚಾರ ಮಾರ್ಪಾಡುಗಳನ್ನು ಮಾಡಲಾಗಿದೆ.

- ಡಿ.31 ರಾತ್ರಿ 8 ಗಂಟೆಯಿಂದ ಮತ್ತು 2020 ಜ.1 ಬೆಳಗ್ಗೆ ಆರು ಗಂಟೆವರೆಗೆ ಸಂಚಾರ ಮಾರ್ಪಾಡು
- ವಾಹನ ಸವಾರರು ಪರ್ಯಾಯ ಮಾರ್ಗದಲ್ಲಿ ತೆರಳಲು ಸೂಚನೆ



**ತುರ್ತು ಸೇವಾ ವಾಹನಗಳಿಗೆ ಮಾತ್ರ ಪ್ರವೇಶ:** ಅನಿಲ್ ಕುಂಬ್ಳೆ ವೃತ್ತದಿಂದ ಮೆಯೋ ಹಾಲ್ ಬಳಿಯ ರೆಸಿಡೆನ್ಸಿ ರಸ್ತೆ ಜಂಕ್ಷನ್), ಬ್ರಿಗೇಡ್ ರಸ್ತೆ, ಚರ್ಚ್‌ಸ್ಟ್ರೀಟ್, ಮ್ಯೂಸಿಯಂ ರಸ್ತೆ, ರೆಸ್ಟ್ ಹೌಸ್ ಪಾರ್ಕ್ ರಸ್ತೆ, ರೆಸಿಡೆನ್ಸಿ ರಸ್ತೆಯಲ್ಲಿ ಪೊಲೀಸ್ ವಾಹನಗಳು, ಕರ್ತವ್ಯ ನಿರತ ತುರ್ತು ಸೇವಾ ವಾಹನಗಳನ್ನು ಹೊರತು ಪಡಿಸಿ ಇತರೆ ವಾಹನಗಳಿಗೆ ಪ್ರವೇಶ ಹಾಗೂ ಸಂಚಾರ ನಿಷೇಧಿಸಲಾಗಿದೆ. ಈ ಮಾರ್ಗದ ಮೂಲಕ ಬೇರೆಡೆ ಹೋಗುವ ವಾಹನ ಸವಾರರು ಸಂಚಾರ ಪೊಲೀಸರು ಸೂಚಿಸುವ ಪರ್ಯಾಯ ಮಾರ್ಗದ ಕಡೆಯಿಂದ ಸಂಚರಿಸಬೇಕು ಎಂದು ಸಂಚಾರ ಪೊಲೀಸರು ಮನವಿ ಮಾಡಿದ್ದಾರೆ.

**ಮೇಲು ಸೇತುವೆ ಬಂದ್:** ಮಡಿವಾಳ, ಎಲೆಕ್ಟ್ರಾನಿಕ್ ಸಿಟಿ, ಮೈಕೋ ಲೇಔಟ್, ವಿಮಾನ ನಿಲ್ದಾಣ, ವೈಟ್‌ಫೀಲ್ಡ್, ಎಚ್‌ಎಸ್‌ಆರ್, ಹಲಸೂರು, ಕೆ.ಆರ್.ಪುರ, ಪುಲಕೇಶಿನಗರ, ಬಾಣಸವಾಡಿ, ಅಶೋಕನಗರ, ವಿಲ್ಸನ್‌ಗಾರ್ಡನ್, ಆಡುಗೋಡಿ, ಉಪ್ಪಾರಪೇಟೆ, ಚಿಕ್ಕಪೇಟೆ, ಬ್ಯಾಟರಾಯನಪುರ, ಕಾಮಾಕ್ಷಿಪಾಳ್ಯ, ಬ್ಯಾಟರಾಯನಪುರ, ವಿ.ವಿ.ಪುರ, ಬಸವನಗುಡಿ, ಜಯನಗರ, ಬನಶಂಕರಿ, ರಾಜಾಜಿನಗರ, ಮಲ್ಲೇಶ್ವರಂ, ಯಶವಂತಪುರ, ಪೀಣ್ಯಾ, ಕೆಂಗೇರಿ, ಆರ್.ಟಿ.ನಗರ, ಹೆಬ್ಬಾಳ, ಚಿಕ್ಕಜಾಲ ಸಂಚಾರ ಠಾಣಾ ವ್ಯಾಪ್ತಿಯಲ್ಲಿರುವ 45 ಮೇಲು ಸೇತುವೆಗಳ ಮೇಲೆ ಸಂಚಾರ ನಿರ್ಬಂಧ ಹೇರಲಾಗಿದೆ. ವಾಹನ ಸವಾರರು ಪರ್ಯಾಯ ಮಾರ್ಗದಲ್ಲಿ ತೆರಳಲು ಸೂಚಿಸಲಾಗಿದೆ.

## ವಾಹನ ನಿಲುಗಡೆ

ಎಂ.ಜಿ.ರಸ್ತೆ,(ಕ್ವೀನ್ಸ್ ವೃತ್ತ)ದಿಂದ ಟ್ರಿನಿಟಿ ವೃತ್ತದವರೆಗೆ, ಕಬ್ಬನ್ ರಸ್ತೆ, ರೆಸಿಡೆನ್ಸಿ ರಸ್ತೆ,ರಿಚ್‌ಮಂಡ್ ರಸ್ತೆ, ಇನ್‌ಫೆಂಟ್ರಿ ರಸ್ತೆ, ಬ್ರಿಗೇಡ್ ರಸ್ತೆ, ಅಶೋಕನಗರ ಹಳೇಪಿಎಸ್ ಜಂಕ್ಷನ್‌ವರೆಗೆ, ಚರ್ಚ್‌ಸ್ಟ್ರೀಟ್, ಮ್ಯೂಸಿಯಂ, ರೆಸ್ಟ್‌ಹೌಸ್ ರಸ್ತೆ, ಸೆಂಟ್ ಮಾರ್ಕ್ಸ್ ರಸ್ತೆ, ಮಗರತ್ ರಸ್ತೆ, ಕಮಿಷನರೇಟ್ ರಸ್ತೆ, ಮಾರ್ಕನ್ ರಸ್ತೆ, ಮೈನ್ ಗಾರ್ಡ್ ಕ್ರಾಸ್ ರಸ್ತೆ ಮತ್ತು ಡಿಸ್ಪೆನ್ಸರಿ ರಸ್ತೆ, ಇಂದಿರಾಗನರ 100 ಅಡಿ ರಸ್ತೆಯಲ್ಲಿ ವಾಹನ ನಿಲುಗಡೆ ನಿಷೇಧಿಸಲಾಗಿದೆ.

ಸಂಯುಕ್ತ ಕರ್ನಾಟಕ

## ರಾತ್ರಿ ಕರ್ಫ್ಯೂ ಜಾರಿಗೆ ರಾಜ್ಯಗಳಿಗೆ ಶಿಫಾರಸು

# ಬೆಂಗಳೂರಿಗೆ ಬ್ರಿಟನ್ ಬ್ರಹ್ಮರಾಕ್ಷಸ ಪ್ರವೇಶ

**ನವದೆಹಲಿ/ಬೆಂಗಳೂರು:** ದೇಶದಲ್ಲಿ ಕೊರೊನಾ ವೈರಾಣುವಿನ ಹೊಸ ಬ್ರಿಟನ್ ತಳಿಯ ಆರು ಸೋಂಕು ಪ್ರಕರಣಗಳು ಪತ್ತೆಯಾಗಿದೆ. ಈ ಪೈಕಿ ಬೆಂಗಳೂರಿನ ಮೂವರಲ್ಲಿ ರೂಪಾಂತರಿ ಕೊರೊನಾ ಪ್ರಭೇದದ ಸೋಂಕು ದೃಢಪಟ್ಟಿದೆ. ಹಿನ್ನೆಲೆಯಲ್ಲಿ ಡಿ.9ರಿಂದ ಡಿ.22ರವರೆಗೆ ಹದಿನಾಲ್ಕು ದಿನಗಳ ಕಾಲ ಆಗಮಿಸಿರುವ ಎಲ್ಲ ಅಂತಾರಾಷ್ಟ್ರೀಯ ಪ್ರಯಾಣಿಕರಲ್ಲೂ ಸೋಂಕು ಪತ್ತೆ ಪರೀಕ್ಷೆ ನಡೆಸಲು ಕೇಂದ್ರ ಸರ್ಕಾರ ಮುಂದಾಗಿದೆ. ನೂತನ ಪ್ರಭೇದದ ವೈರಾಣುವಿನಿಂದ ಸೋಂಕಿಗೆ ತುತ್ತಾದವರನ್ನು ಐಸೋಲೇಷನ್‌ಗೆ ಒಳಪಡಿಸಲಾಗಿದೆ. ಆಂಧ್ರಪ್ರದೇಶದಲ್ಲೂ ಮೂವರಲ್ಲಿ ಬ್ರಿಟನ್ ಪ್ರಬೇಧದ ಸೋಂಕು ಪತ್ತೆಯಾಗಿದೆ.




ಸೋಂಕು ದೃಢಪಟ್ಟವರ ಮಾದರಿಗಳನ್ನು ಜಿನೋಮ್ ಸೀಕ್ವೆನ್ಸಿಂಗ್ ಪರೀಕ್ಷೆಗೆ ಒಳಪಡಿಸಲಾಗುವುದು. ಸಹಪ್ರಯಾಣಿಕರಿಗೂ ಕೂಡ ಸೋಂಕು ಪತ್ತೆ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ. ಸೋಂಕು ಹರಡದಂತೆ ನೈಟ್ ಕರ್ಫ್ಯೂ ಸೇರಿದಂತೆ ಹಲವು ಕ್ರಮಗಳನ್ನು ರಾಜ್ಯ ಸರ್ಕಾರಗಳೇ ಕೈಗೊಳ್ಳಬಹುದಾಗಿದೆ. ಮುಂದಿನ ದಿನಗಳಲ್ಲಿ ವಿದೇಶ ಪ್ರಯಾಣಿಕರು ಮಾತ್ರವಲ್ಲದೆ, ಇತರ ಸೋಂಕಿತರ ಪೈಕಿ ಶೇ.5ರಷ್ಟು ಜನರನ್ನೂ ಈ ಪರೀಕ್ಷೆಗೆ ಒಳಪಡಿಸಲಾಗುತ್ತದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಬೆಂಗಳೂರಿನ ನಿಮ್ಹಾನ್ಸ್, ಹೈದರಾಬಾದ್‌ನ ಕೋಶ ಮತ್ತು ಕಣ ಜೀವಶಾಸ್ತ್ರ ಕೇಂದ್ರ (ಸಿಸಿಎಂಬಿ), ಚೆನ್ನೈನ ರೋಗತಡೆ ಔಷಧಿ ಮತ್ತು ಸಂಶೋಧನಾ ಕೇಂದ್ರ ಹಾಗೂ ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆ (ಎನ್‌ಐವಿ)ಗಳಲ್ಲಿ ನಡೆದ ಜಿನೋಮ್ ಸೀಕ್ವೆನ್ಸಿಂಗ್ ಪರೀಕ್ಷೆಗಳಲ್ಲಿ ರೂಪಾಂತರಿತ ಪ್ರಭೇದದ ಸೋಂಕು ಖಚಿತವಾಗಿದೆ.

- ಅಂತಾರಾಷ್ಟ್ರೀಯ ಪ್ರಯಾಣ ಮಾಡಿರುವವರ ಸೋಂಕು ಪತ್ತೆ ಪರೀಕ್ಷೆ
- ಸೋಂಕು ದೃಢಪಟ್ಟಲ್ಲಿ ಆ ಮಾದರಿಗಳ ಜಿನೋಮ್ ಸೀಕ್ವೆನ್ಸಿಂಗ್ ಪರೀಕ್ಷೆ
- ಬ್ರಿಟನ್‌ನ ರೂಪಾಂತರಿತ ತಳಿಯ ಸೋಂಕು ಆರು ಜನರಲ್ಲಿ ದೃಢ
- ಬೆಂಗಳೂರಿನ ಮೂವರಿಗೆ ಬ್ರಿಟನ್ ಪ್ರಭೇದದ ವೈರಾಣು ಸೋಂಕು
- ಬ್ರಿಟನ್ ವೈರಾಣು ಸೋಂಕು ಪತ್ತೆಯಾದವರಿಗೆ ಏಕಾಂತವಾಸ

ಮೊದಲಿನ ಪ್ರಭೇದಕ್ಕಿಂತ ನೂತನ ಪ್ರಭೇದದ ವೈರಾಣು ಶೇ.70ರಷ್ಟು ತ್ವರಿತವಾಗಿ ಹರಡಬಲ್ಲದು. ಈಗಾಗಲೇ ಡೆನ್ಮಾರ್ಕ್, ನೆದರ್‌ಲ್ಯಾಂಡ್ಸ್, ಆಸ್ಟ್ರೇಲಿಯಾ, ಇಟಲಿ, ಸ್ವೀಡನ್, ಫ್ರಾನ್ಸ್, ಸ್ಪೇನ್, ಸ್ವಿಜರ್‌ಲ್ಯಾಂಡ್, ಜರ್ಮನಿ, ಕೆನಡಾ, ಜಪಾನ್, ಲೆಬನಾನ್ ಮತ್ತು ಸಿಂಗಪೂರ್‌ಗಳಲ್ಲಿ ನೂತನ ಪ್ರಭೇದದ ವೈರಾಣು ಸೋಂಕಿತರು ಪತ್ತೆಯಾಗಿದ್ದಾರೆ.

ಪ್ರಾರಂಭದಲ್ಲಿಯೇ ಸೂಕ್ತ ಕ್ರಮ ಕೈಗೊಂಡಲ್ಲಿ ಸೋಂಕು ತಡೆಯುವುದು ಸುಲಭ. ಒಮ್ಮೆ ಸೋಂಕು ವ್ಯಾಪಕವಾಗಿ ಹರಡಿಕೊಂಡಲ್ಲಿ ತಡೆಯುವುದು ಕಷ್ಟ ಎಂದು ಸರ್ಕಾರದ ಸಲಹೆಗಾರ ಪ್ರೊ. ಕೆ.ವಿಜಯರಾಘವನ್ ತಿಳಿಸಿದ್ದಾರೆ.

ಭಾರತದಲ್ಲಿ ಸೋಂಕು ಕಡಿಮೆಯಾಗುತ್ತಿದ್ದರೂ ಶೀತ ಹವಾಮಾನದಲ್ಲಿ ಇನ್ನೂ ಬಹಳಷ್ಟು ಜನ ಸುಲಭವಾಗಿ ಸೋಂಕಿಗೆ ತುತ್ತಾಗುವ ಸಾಧ್ಯತೆಗಳಿವೆ. ಅದರ ಜೊತೆಗೆ ಬ್ರಿಟನ್ನಿನ ಪ್ರಭೇದದ ವೈರಾಣುವೂ ಭಾರತ ಸೇರಿದಂತೆ ಹಲವಾರು ದೇಶಗಳಲ್ಲಿ ಕಂಡುಬಂದಿದೆ. ಈ ನಿಟ್ಟಿನಲ್ಲಿ ಜಾಗರೂಕತೆಯಿಂದ ಇರುವುದು ಮುಖ್ಯ ಎಂದು ನೀತಿ ಆಯೋಗದ ಡಾ.ವಿ.ಕೆ.ಪಾಲ್ ಹೇಳಿದ್ದಾರೆ.

**3** ಬೆಂಗಳೂರಿನಲ್ಲಿ ನೂತನ ತಳಿ ಸೋಂಕಿತರು

**3** ಜನರಿಗೆ ಆಂಧ್ರಪ್ರದೇಶದಲ್ಲಿ ನೂತನ ಪ್ರಭೇದ ಸೋಂಕು

**10** ಬ್ರಿಟನ್ ತಳಿ ಪತ್ತೆಗೆ ಕೇಂದ್ರಗಳು

**14** ದೇಶಗಳಲ್ಲಿ ಬ್ರಿಟನ್ ಪ್ರಭೇದದ ಸೋಂಕಿತರು ಪತ್ತೆ

ರೂಪಾಂತರಿತ ಮಾದರಿಯ ವೈರಾಣು ಪತ್ತೆ ಪರೀಕ್ಷೆಯನ್ನು ಹತ್ತು ಇನ್‌ಸಾಕಾಗ್ ಪ್ರಯೋಗಗಳಲ್ಲಿ ನಡೆಸಲಾಗುವುದು. ಬೆಂಗಳೂರಿನ ನಿಮ್ಹಾನ್ಸ್ ಮತ್ತು ಇನ್‌ಸ್ಟೆಂ, ಕೊಲ್ಕತಾದ ಎನ್‌ಐಬಿಎಂಜಿ, ಭುವನೇಶ್ವರದ ಐಎಲ್‌ಎಸ್, ಪುಣೆಯ ಎನ್‌ಐವಿ ಮತ್ತು ಸಿಸಿಎಸ್, ಹೈದರಾಬಾದ್‌ನ ಸಿಸಿಎಂಬಿ ಮತ್ತು ಸಿಡಿಎಫ್‌ಡಿ, ದೆಹಲಿಯ ಐಜಿಐಬಿ ಹಾಗೂ ಎಸ್‌ಸಿಡಿಸಿ ಪ್ರಯೋಗಾಲಯಗಳಲ್ಲಿ ಇದಕ್ಕೆ ಸೂಕ್ತ ಅವಕಾಶ ಕಲ್ಪಿಸಲಾಗಿದೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಒಟ್ಟು ಕೊರೊನಾ ಸೋಂಕಿತರ ಪೈಕಿ ಶೇ.63ರಷ್ಟು ಗಂಡಸರು ಮತ್ತು ಶೇ.37ರಷ್ಟು ಮಹಿಳೆಯರಿದ್ದಾರೆ. ಹದಿನೇಳು ವರ್ಷಕ್ಕಿಂತ ಕಡಿಮೆ ಇರುವವರ ಪ್ರಮಾಣ ಶೇ.8ರಷ್ಟು ಮಾತ್ರ. 18–25ರ ವಯೋಮಾನದವರು ಪ್ರಮಾಣ ಶೇ.39ರಷ್ಟು 26ರಿಂದ 44ರ ವಯೋಮಿತಿಯವರು ಶೇ.26ರಷ್ಟು ಹಾಗೂ 45–60ರ ವಯಸ್ಸಿನವರು ಶೇ.14ರಷ್ಟಿದ್ದಾರೆ.

42 ಮಂದಿಗೆ 14 ದಿನ ಕ್ವಾರಂಟೈನ್ । ಮೂವರು ಸೋಂಕಿತರು ಆಸ್ಪತ್ರೆಗೆ । ಸಿಸಿಟಿವಿ ಕ್ಯಾಮೆರಾ ಅಳವಡಿಕೆ

# ಬ್ರಿಟನ್ ರೂಪಾಂತರ ನಂಜು ಅಪಾರ್ಟ್‌ಮೆಂಟ್ ಸೀಲ್‌ಡೌನ್

**ಸಂ.ಕ.ಸಮಾಚಾರ ಬೆಂಗಳೂರು**

ಬ್ರಿಟನ್‌ನಿಂದ ಬೆಂಗಳೂರಿಗೆ ಬಂದಿದ್ದವರ ಪೈಕಿ ಮೂವರಿಗೆ ರೂಪಾಂತರದ ಸೋಂಕು ಕಾಣಿಸಿಕೊಂಡಿರುವುದರಿಂದ ಅವರು ವಾಸ ಮಾಡುತ್ತಿದ್ದ ಅಪಾರ್ಟ್‌ಮೆಂಟ್ ಅನ್ನು ಸೀಲ್‌ಡೌನ್ ಮಾಡಲಾಗಿದೆ.

ಮೂವರಲ್ಲಿ ರೂಪಾಂತರಗೊಂಡ ವೈರಾಣು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಸೋಂಕು ದೃಢಪಟ್ಟವರೊಂದಿಗೆ ಸಂಪರ್ಕದಲ್ಲಿದ್ದ ಒಟ್ಟು 42 ಮಂದಿಯನ್ನು 14 ದಿನದ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ ಹಾಗೂ ಇಡೀ ಅಪಾರ್ಟ್‌ಮೆಂಟ್ ಅನ್ನು ಸೀಲ್‌ಡೌನ್ ಮಾಡಲಾಗಿದೆ.

ಡಿಸೆಂಬರ್ 19ರಂದು ಒಂದೇ ವಿಮಾನದಲ್ಲಿ ಹಲವಾರು ಮಂದಿ ಬೆಂಗಳೂರಿಗೆ ಆಗಮಿಸಿದ್ದರು. ಇವರಲ್ಲಿ ಮೂವರಲ್ಲಿ ಕೊರೊನಾ ಪಾಸಿಟಿವ್ ವರದಿ ಬಂದಿತ್ತು. ಮೂವರಲ್ಲಿ 35 ವರ್ಷ ಮಹಿಳೆ ಹಾಗೂ ಆರು ವರ್ಷ ಹೆಣ್ಣು ಮಗು ಬೊಮ್ಮನಹಳ್ಳಿ ವಲಯದ ವಸಂತಪುರದ ಸಿರಿ ಎಂಬೆಸಿ ಎಂಬ ಅಪಾರ್ಟ್‌ಮೆಂಟ್‌ನಲ್ಲಿ ವಾಸವಿದ್ದರು. ಈ ಮೂವರನ್ನು ಕೂಡಲೇ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಅವರ ಜೊತೆ ಸಂಪರ್ಕದಲ್ಲಿದ್ದವರನ್ನು ಹೋಂ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ.

ಅಪಾರ್ಟ್‌ಮೆಂಟ್‌ಗೆ ಬಂದಿದ್ದವರಿಗೆ ಸೋಂಕು ಕಾಣಿಸಿಕೊಂಡಿದ್ದರಿಂದ ಅಪಾರ್ಟ್‌ಮೆಂಟ್‌ನಲ್ಲಿದ್ದವರನ್ನು ಖಾಸಗಿ ಹೋಟೆಲ್‌ನಲ್ಲಿ ಕ್ವಾರಂಟೈನ್‌ಗೆ ಒಳಪಡಿಸಲು ಬಿಬಿಎಂಪಿ ಆರೋಗ್ಯ ಸಿಬ್ಬಂದಿ ತೆರಳಿ ಅಲ್ಲಿನ ನಿವಾಸಿಗಳಿಗೆ ಮನವರಿಕೆ ಮಾಡಿಕೊಂಡರೂ ಅವರು ಕ್ವಾರಂಟೈನ್‌ಗೆ ಹೋಗಲು ನಿರಾಕರಿಸಿ, ತಾವು ಅಪಾರ್ಟ್‌ಮೆಂಟ್‌ನಲ್ಲೇ ಕ್ವಾರಂಟೈನ್‌ಗೆ ಒಳಗಾಗುತ್ತೇವೆ. ಹೊರಗೆ ಬರುವುದಿಲ್ಲ ಎಂದು ಪಟ್ಟುಹಿಡಿದ ಪರಿಣಾಮ ಕೆಲ ಕಾಲ ಸ್ಥಳದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಕೊನೆಗೆ ಸಂಪರ್ಕಿತರೆಲ್ಲರೂ ಒಂದೇ ಅಪಾರ್ಟ್‌ಮೆಂಟ್‌ನವರಾದ್ದರಿಂದ ಅವರಿಗೆ ಅಲ್ಲೇ ಕ್ವಾರಂಟೈನ್‌ಗೆ ಒಳಗಾಗಲು ಬಿಬಿಎಂಪಿ ಆರೋಗ್ಯಾಧಿಕಾರಿಗಳು ಅನುಮತಿ ನೀಡಿ ಈ ಅಪಾರ್ಟ್‌ಮೆಂಟ್ ಅನ್ನು ಸಾಂಸ್ಥಿಕ ಕ್ವಾರಂಟೈನ್ ಆಗಿ ಮಾರ್ಪಾಟು ಮಾಡಲಾಗಿದೆ.

ಅಪಾರ್ಟ್‌ಮೆಂಟ್‌ನಲ್ಲಿರುವವರು ಅಪಾರ್ಟ್‌ಮೆಂಟ್‌ಗೆ ಸಿಸಿಟಿವಿ ಕ್ಯಾಮೆರಾ ಅಳವಡಿಕೆ, ಗೇಟ್‌ಗೆ ಬೀಗ ಹಾಕಲಾಗಿದೆ. ನಿಗಾ ವಹಿಸುವುದಕ್ಕೆ ಆರೋಗ್ಯ ಸಿಬ್ಬಂದಿ ನಿಯೋಜಿಸಲಾಗಿದೆ. ಒಂದು ಮನೆ ಅವರು ಮತ್ತೊಂದು ಮನೆಗೆ ಹೋಗದೆ ತಮ್ಮ ಮನೆಯಲ್ಲಿ ಇರುವಂತೆ ಸೂಚಿಸಲಾಗಿದೆ. ಇಡೀ ಅಪಾರ್ಟ್‌ಮೆಂಟ್‌ಗೆ ಸ್ಯಾನಿಟೈಸ್ ಮಾಡಲಾಗಿದೆ. ಭದ್ರತೆಗೆ ಬ್ಯಾರಿಕೇಟ್ ಅಳವಡಿಸಿ ಮೂರು ಪಾಳಿಯಲ್ಲಿ ಕರ್ತವ್ಯ ನಿರ್ವಹಣೆ ಮಾಡಲು ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ.




## ಹಾಲು ಹಣ್ಣು, ತರಕಾರಿಗೆ ವ್ಯವಸ್ಥೆ

ಅಪಾರ್ಟ್‌ಮೆಂಟ್ ನಿವಾಸಿಗಳು ಕ್ವಾರಂಟೈನ್ ಅವಧಿ ಮುಕ್ತಾಗೊಳ್ಳುವವರಿಗೆ ಅವರಿಗೆ ದಿನ ಬಳಕೆಗೆ ಬೇಕಾದ ದಿನಸಿ, ಹಣ್ಣು, ತರಕಾರಿ, ಹಾಲು ಪೂರೈಕೆಗೆ ಬಿಬಿಎಂಪಿ ಸ್ವಯಂ ಸೇವಕರನ್ನು ನಿಯೋಜಿಸಿದೆ. ಹಣ ಕೊಟ್ಟು ತಮಗೆ ಬೇಕಾದ ವಸ್ತುಗಳನ್ನು ಪಡೆದುಕೊಳ್ಳಬಹುದಾಗಿದೆ.

## ಆತಂಕದ ವಾತಾವರಣ

**ಬೆಂಗಳೂರು:** ನಗರದಲ್ಲಿ ಕೊರೊನಾ ರೂಪಾಂತರ ಸೋಂಕು ದೃಢಪಟ್ಟಿರುವ ಪ್ರದೇಶದಲ್ಲಿ ಮಂಗಳವಾರ ವಸಂತಪುರ ಹಾಗೂ ಜೆಪಿ ನಗರ ಸುತ್ತಮುತ್ತ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಬ್ರಿಟನ್ ವೈರಾಣು ಪತ್ತೆಯಾದ ಸೋಂಕಿತನ ಜೆ.ಪಿ.ನಗರದ ನಿವಾಸದ ಬಳಿಕ ಬಿಬಿಎಂಪಿ ಅಧಿಕಾರಿಗಳು ಯಾವುದೇ ಸ್ಯಾನಿಟೈಸ್ ಮಾಡಿಲ್ಲ. ಸೋಂಕಿತರೊಂದಿಗೆ ಸಂಪರ್ಕಿತರು ಕ್ವಾರಂಟೈನ್‌ನಲ್ಲಿದ್ದಾರೆಂಬ ಫಲಕವನ್ನೂ ಅಳವಡಿಸಿಲ್ಲ. ಈ ಮೂಲಕ ಪ್ರಕರಣ ಮುಚ್ಚಿಡುವ ಪ್ರಯತ್ನ ಮಾಡುತ್ತಿದ್ದಾರಾ ಎಂಬ ವ್ಯಕ್ತವಾಗುತ್ತಿದೆ.

ವರದಿ ಮಾಡುವುದಕ್ಕೆ ಸೋಂಕಿತ ವ್ಯಕ್ತಿಯ ಮನೆ ಬಳಿ ತೆರಳಿದ ಖಾಸಗಿ ವಿದ್ಯುನ್ಮಾನದ ವರದಿಗಾರನ ಮೊಬೈಲ್ ಅನ್ನು ಸೋಂಕಿತ ವ್ಯಕ್ತಿಯೊಂದಿಗೆ ಸಂಪರ್ಕದಲ್ಲಿದ್ದ ಮಹಿಳೆ ಕಿತ್ತುಕೊಳ್ಳುವ ಮೂಲಕ ಉದ್ದಟತನ ತೋರಿದ ಘಟನೆ ನಡೆದಿದೆ. ಈ ವೇಳೆ ಅಲ್ಲಿದ್ದ ಬಿಬಿಎಂಪಿ ಸಿಬ್ಬಂದಿ ಮೌನವಹಿಸಿದ್ದು ಕಂಡುಬಂತು.

ಸಂಯುಕ್ತ ಕರ್ನಾಟಕ

# ಮತ್ತೆ ರಾಜ್ಯದಲ್ಲಿ ಲಾಕ್‌ಡೌನ್ ನೆರಳು

**ಸಂ.ಕ. ಸಮಾಚಾರ ಬೆಂಗಳೂರು**

ಬ್ರಿಟನ್‌ನಿಂದ ಬಂದವರಲ್ಲಿ ರೂಪಾಂತರಗೊಂಡ ಸೋಂಕು ಕಾಣಿಸಿಕೊಂಡಿರುವುದರಿಂದ ರಾಜ್ಯದಲ್ಲಿ ಮತ್ತೆ ಲಾಕ್‌ಡೌನ್ ಮಾಡುವಂತಹ ಸಾಧ್ಯತೆಗಳು ಕಂಡುಬಂದಿವೆ.

ಈ ಹಿಂದೆ ಸೋಂಕು ಕಾಣಿಸಿಕೊಂಡ ಕೂಡಲೇ ರಾಜ್ಯದಲ್ಲಿ ಲಾಕ್‌ಡೌನ್ ಘೋಷಣೆ ಮಾಡಿ ಸೋಂಕು ಹರಡುವುದನ್ನು ತಡೆಯುವ ಕಾರ್ಯವಾಗಿತ್ತು. ಈಗ ಬಂದಿರುವ ಹೊಸ ಸೋಂಕು ವೇಗವಾಗಿ ಹರಡುವ ಸಾಧ್ಯತೆಗಳನ್ನು ಮನಗಂಡಿರುವ ಸರ್ಕಾರ ಲಾಕ್‌ಡೌನ್ ಹೇರುವ ಬಗ್ಗೆ ಚಿಂತನೆ ನಡೆಸಿದೆ.

ಮಾರ್ಚ್ ತಿಂಗಳಲ್ಲಿ ಮಾಡಿದಂತೆ ಈ ಬಾರಿ ಲಾಕ್‌ಡೌನ್ ಮಾಡುವ ಅಲೋಚನೆ ಸರ್ಕಾರದ ಮುಂದಿಲ್ಲ ಎಂದು ಆರೋಗ್ಯ ಸಚಿವರು ತಿಳಿಸಿದ್ದರೂ ಒಂದು ವೇಳೆ ಸೋಂಕು ವೇಗವಾಗಿ ಹರಡಿದಲ್ಲಿ ಅದಕ್ಕೆ ಕಡಿವಾಣ ಹಾಕಲು ಲಾಕ್‌ಡೌನ್, ಸೀಲ್‌ಡೌನ್‌ನಂತಹ ವ್ಯವಸ್ಥೆಯನ್ನು ಮತ್ತೆ ಜಾರಿಗೆ ತರುವ ಕುರಿತಂತೆಯೂ ಸರ್ಕಾರದ ಮಟ್ಟದಲ್ಲಿ ಚಿಂತನೆ ನಡೆದಿದೆ.

ಬ್ರಿಟನ್‌ನಿಂದ ಬಂದಿರುವವರಲ್ಲಿ ಮೂವರಿಗೆ ರೂಪಾಂತರದ ಸೋಂಕು ಕಾಣಿಸಿಕೊಂಡಿರುವುದರಿಂದ ಈ ಮೂವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಇವರ ಜೊತೆ ಸಂಪರ್ಕದಲ್ಲಿದ್ದವರನ್ನು ಕ್ವಾರಂಟೈನ್‌ಗೆ ಒಳಪಡಿಸಲು ತೀರ್ಮಾನಿಸಲಾಗಿತ್ತು. ಆದರೆ, ಸಂಪರ್ಕಿತರೆಲ್ಲರೂ ಒಂದೇ ಅಪಾರ್ಟ್‌ಮೆಂಟ್‌ನವರೇ ಆಗಿರುವುದರಿಂದ ಇಡೀ ಅಪಾರ್ಟ್‌ಮೆಂಟ್ ಅನ್ನು ಸೀಲ್‌ಡೌನ್ ಮಾಡಲಾಗಿದೆ.

- **ಬೆಂಗಳೂರಿನ ಅಪಾರ್ಟ್‌ಮೆಂಟ್ ಸೀಲ್‌ಡೌನ್**
- **ಸೋಂಕು ಹರಡುವುದಕ್ಕೆ ಕಡಿವಾಣ ಹಾಕಲು ಸಿದ್ಧತೆ**
- **ಹೊಸ ವರ್ಷದ ವೇಳೆ ಕಠಿಣ ನಿರ್ಬಂಧ ಸಾಧ್ಯತೆ**

ಹೊಸ ದಿಗಂತ

ಹೊಸ ದಿಗಂತ 1
30 Dec 2020

# ದೇಶದಲ್ಲಿ 6 ಮಂದಿಗೆ ನವ ಕೊರೋನಾ ಪತ್ತೆ

**ಹೊಸದಿಲ್ಲಿ/ಬೆಂಗಳೂರು:** ಬ್ರಿಟನ್‌ನಲ್ಲಿ ಪತ್ತೆಯಾಗಿರುವ ರೂಪಾಂತರಗೊಂಡಿರುವ ಸೋಂಕು ಜಿನೊಮ್ ಸಾರ್ಸ್ ಕೋವ್ 2 ಭಾರತ ಪ್ರವೇಶಿಸಿದೆ. ಬ್ರಿಟನ್‌ನಿಂದ ಭಾರತಕ್ಕೆ ಹಿಂದಿರುಗಿದ ಮೂವರು ಬೆಂಗಳೂರಿನವರು ಸೇರಿ ದೇಶಾದ್ಯಂತ ಆರು ಮಂದಿಯಲ್ಲಿ ಹೊಸ ರೂಪಾಂತರ ಪತ್ತೆಯಾಗಿದೆ ಎಂದು ತಿಳಿದುಬಂದಿದೆ.

**ಇವರಲ್ಲಿ ಮೂವರು ಬೆಂಗಳೂರಿನವರೇ**

ಜೆನೆಟಿಕ್ ಸೀಕ್ವೆನ್ಸಿ ವರದಿಯಲ್ಲಿ ಬೆಂಗಳೂರಿನ ಮೂವರಿಗೆ ರೂಪಾಂತರಿ ಸೋಂಕು ಪತ್ತೆಯಾಗಿರುವ ವಿಚಾರ ತಿಳಿದು ಬಂದಿದ್ದು, ಮೂವರೂ ಬೆಂಗಳೂರಿನ ಜೆ.ಪಿ.ನಗರದ ಮೂರನೇ ಹಂತದ 34 ವರ್ಷದ ವ್ಯಕ್ತಿ ಹಾಗೂ 35 ವರ್ಷ ಮಹಿಳೆ ಹಾಗೂ ಆರು ವರ್ಷ ಹೆಣ್ಣು ಮಗು ಬೊಮ್ಮನಹಳ್ಳಿ ವಲಯದ ವಸಂತಪುರದವರಾಗಿದ್ದಾರೆ. ಇವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು ,ಸಂಪರ್ಕಿತ ಮಂದಿಯನ್ನು ಪತ್ತೆ ಹಚ್ಚಲಾಗುತ್ತಿದೆ. ➘೨

## 6 ಮಂದಿಗೆ ನವ ಕೊರೋನಾ ಪತ್ತೆ

೧➘ ಅಲ್ಲದೇ ಈಗಾಗಲೇ ಪತ್ತೆ ಹಚ್ಚಿದವರನ್ನು ಕ್ವಾರಂಟೈನ್ ಗೊಳಪಡಿಸಲಾಗಿದೆ.

ಜಿನೊಮಿಕ್ ಕನ್ಸಾರ್ಟಿಯಂ (ಇನ್ಸಾಕಾಗ್) ಲ್ಯಾಬ್ಸ್ ನಡೆಸಿದ ಜಿನೋಮ್ ಸೀಕ್ವೆನ್ಸಿಂಗ್ ಪರೀಕ್ಷೆಯಲ್ಲಿ ಒಟ್ಟು 6 ಮಂದಿಯಲ್ಲಿ ರೂಪಾಂತರಿತ ಸೋಂಕು ದೃಢವಾಗಿದ್ದು, 3 ಬೆಂಗಳೂರಿನವರು, ಇಬ್ಬರು ಹೈದರಾಬಾದ್ ನಿವಾಸಿಗಳು ಹಾಗೂ 1 ಪುಣೆ ಮೂಲದವರಲ್ಲಿ ಪತ್ತೆಯಾಗಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ತಿಳಿಸಿದೆ. 6 ಸೋಂಕಿತರನ್ನು ಪ್ರತ್ಯೇಕವಾಗಿ ಐಸೋಲೇಷನ್ ನಲ್ಲಿ ಕೊಠಡಿಯಲ್ಲಿ ಇರಿಸಲಾಗಿದ್ದು, ರಾಜ್ಯ ಸರ್ಕಾರಗಳು ಅಗತ್ಯ ಆರೋಗ್ಯ ಸೌಲಭ್ಯ ಒದಗಿಸಿವೆ. ಅಲ್ಲದೇ ಇವರ ಸಂಪರ್ಕದಲ್ಲಿದ್ದವರನ್ನು ಕೂಡ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ ಎಂದು ಸಚಿವಾಲಯ ಮಾಹಿತಿ ನೀಡಿದೆ. ಇನ್ನು ಸೋಂಕಿತರ ಸಹ ಪ್ರಯಾಣಿಕರನ್ನು, ಸ್ನೇಹಿತರನ್ನು ಪತ್ತೆಹಚ್ಚುವ ಕಾರ್ಯ ಜಾರಿಯಲ್ಲಿದೆ. ಮುಖ್ಯವಾಗಿ ಎಲ್ಲ ಕೊರೋನಾ ಸ್ಯಾಂಪಲ್‌ಗಳನ್ನು ಜಿನೋಮ್ ಸೀಕ್ವೆನ್ಸಿಂಗ್ ಪರೀಕ್ಷೆಗೆ ಒಳಪಡಿಸುವ ಪ್ರಕ್ರಿಯೆಯೂ ನಡೆಯುತ್ತಿದೆ ಎಂದು ತಿಳಿಸಿದೆ.



ಈಗಾಗಲೇ ಸ್ವಿಟ್ಜರ್‌ಲ್ಯಾಂಡ್, ಡೆನ್‌ಮಾರ್ಕ್, ನೆದರ್ ಲ್ಯಾಂಡ್ಸ್, ಆಸ್ಟ್ರೇಲಿಯಾ, ಸ್ಪೇನ್,ಇಟಲಿ, ಸ್ವೀಡನ್, ಫ್ರಾನ್ಸ್ ಸೇರಿ ಮುಂತಾದ ರಾಷ್ಟ್ರಗಳಲ್ಲಿ ಹೊಸ ರೂಪಾಂತರ ಪತ್ತೆಯಾಗಿದೆ.

**ಬ್ರಿಟನ್‌ನಿಂದ ಭಾರತಕ್ಕೆ 33,000 ಮಂದಿ:** ನವೆಂಬರ್ 25ರ ಮಧ್ಯರಾತ್ರಿಯಿಂದ ಡಿಸೆಂಬರ್ 23ರ ಅವಧಿಯಲ್ಲಿ ಒಟ್ಟು 33 ಸಾವಿರ ಮಂದಿ ಬ್ರಿಟನ್‌ನಿಂದ ಭಾರತಕ್ಕೆ ಬಂದಿದ್ದಾರೆ. ಇವರೆಲ್ಲರನ್ನೂ ಪತ್ತೆಹಚ್ಚಿ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಪಡಿಸುವ ಕಾರ್ಯ ನಡೆಯುತ್ತಿದೆ. ಸದ್ಯ ಇದುವರೆಗೂ ನಡೆಸಿರುವ ಪರೀಕ್ಷೆಯಲ್ಲಿ ಒಟ್ಟು 114 ಪ್ರಯಾಣಿಕರಲ್ಲಿ ಕೊರೋನಾ ಪತ್ತೆಯಾಗಿದೆ. ಆದರೆ ಇದು ಹೊಸ ರೂಪಾಂತರವೋ ಇಲ್ಲವೋ ಎಂಬುದನ್ನು 10 ಇನ್ಸಾಕಾಗ್ ಲ್ಯಾಬ್‌ಗಳಲ್ಲಿ ಪರೀಕ್ಷಿಸಲಾಗುತ್ತಿದೆ.

ಹೊಸ ದಿಗಂತ

# ಕೊರೋನಾ ಸೋಂಕಿಗೆ ಇಬ್ಬರ ಸಾವು



**ಬೆಂಗಳೂರು:** ನಗರದಲ್ಲಿ ಮಂಗಳವಾರ 370 ಜನರಿಗೆ ಕೊರೋನಾ ಸೋಂಕು ದೃಢಪಟ್ಟಿದೆ. 843 ಸೋಂಕಿತರು ಆಸ್ಪತ್ರೆಯಿಂದ ಮನೆಗೆ ತೆರಳಿದ್ದು, 2 ಜನರು ಮೃತರಾಗಿದ್ದಾರೆ. ನಗರದಲ್ಲಿ ಒಟ್ಟು 3,87,278 ಸೋಂಕಿತರು ದೃಢಪಟ್ಟಿದ್ದು, ಒಟ್ಟು 4,306 ಜನರು ಸೋಂಕಿಗೆ ಬಲಿಯಾಗಿದ್ದಾರೆ. ಇಲ್ಲಿಯವರೆಗೆ 3,75,221 ಜನರು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ಕೋವಿಡ್-19ಕ್ಕೆ ಮೀಸಲಾದ ಆಸ್ಪತ್ರೆಗಳು, ಆರೋಗ್ಯ ಕೇಂದ್ರಗಳು ಹಾಗೂ ಆರೈಕೆ ಕೇಂದ್ರಗಳು ಒಳಗೊಂಡಂತೆ 7,750 ಜನ ಸಕ್ರಿಯ ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ.

ಹೊಸ ದಿಗಂತ

ಹೊಸ ದಿಗಂತ

30 Dec 20

ರೂಪಾಂತರ ಕೊರೋನಾ | ಅಪಾರ್ಟ್‌ಮೆಂಟ್ ಸೀಲ್‌ಡೌನ್‌ಗೆ ನಿವಾಸಿಗಳ ಆಕ್ಷೇಪ

# 42 ಮಂದಿ ಕ್ವಾರಂಟೈನ್

**ಬೆಂಗಳೂರು:** ನಗರದಲ್ಲಿ ಮೂವರಿಗೆ ಬ್ರಿಟನ್‌ನ ರೂಪಾಂತರ ಕೊರೋನಾ ಸೋಂಕು ಧೃಢಪಟ್ಟಿರುವ ಹಿನ್ನೆಲೆಯಲ್ಲಿ ಸೋಂಕಿತರ ಸಂಪರ್ಕದಲ್ಲಿದ್ದ ಒಟ್ಟು 42 ಮಂದಿಯನ್ನು 14 ದಿನದ ಕ್ವಾರಂಟೈನ್ ಮಾಡಲಾಗಿದೆ. ಡಿ.19ರಂದು ವಿಮಾನದಲ್ಲಿ ಬಂದಿರುವ ಈ ಮೂವರಲ್ಲಿ 35 ವರ್ಷ ಮಹಿಳೆ ಹಾಗೂ ಆರು ವರ್ಷ ಹೆಣ್ಣು ಮಗು ಬೊಮ್ಮನಹಳ್ಳಿ ವಲಯದ ವಸಂತಪುರದ ಸಿರಿ ಎಂಬೆಸಿ ಎಂಬ ಅಪಾರ್ಟ್‌ಮೆಂಟ್‌ನಲ್ಲಿ ವಾಸವಿದ್ದರು. ಹೀಗಾಗಿ, ಈ ಅಪಾರ್ಟ್‌ಮೆಂಟ್ ಅನ್ನು ಸೀಲ್‌ಡೌನ್ ಮಾಡಿ, ಒಟ್ಟು 17 ಫ್ಲಾಟ್‌ನಲ್ಲಿರುವ 35 ಮಂದಿಯನ್ನು ಹೋಂ ಕ್ವಾರಂಟೈನ್ ಮಾಡಲಾಗಿದೆ. ಸೋಂಕಿತ ತಾಯಿ-ಮಗಳೊಂದಿಗೆ 33 ಮಂದಿ ಪ್ರಾಥಮಿಕ ಹಾಗೂ ಪರೋಕ್ಷ ಸಂಪರ್ಕ ಹೊಂದಿದ್ದು, ಈ ಎಲ್ಲರನ್ನು ಮಂಗಳವಾರ ಆರೋಗ್ಯ ತಪಾಸಣೆ ನಡೆಸಿ ಕೋವಿಡ್ ಸೋಂಕು ಪರೀಕ್ಷೆಗೆ ಗಂಟಲ ದ್ರವವನ್ನು ಸಂಗ್ರಹಿಸಲಾಗಿದೆ. ಬ್ರಿಟನ್‌ನಿಂದ ಆಗಮಿಸಿದ ಜೆ.ಪಿ.ನಗರದ ಮೂರನೇ ಹಂತದ 34 ವರ್ಷದ ವ್ಯಕ್ತಿಯೊಬ್ಬರಿಗೆ ಸೋಂಕು ಕಾಣಿಸಿಕೊಂಡಿದ್ದು, ಸೋಂಕಿತ ವ್ಯಕ್ತಿಯೊಂದಿಗೆ ಆಗಮಿಸಿದ ಪತ್ನಿ ಹಾಗೂ ಮಗ ಸೇರಿದಂತೆ ಒಟ್ಟು ಏಳು ಮಂದಿ ಪ್ರಾಥಮಿಕ ಸಂಪರ್ಕಿತರನ್ನು ಗುರುತಿಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

- ಒಟ್ಟು 17 ಫ್ಲಾಟ್‌ನಲ್ಲಿ 35 ಮಂದಿ ಹೋಂ ಕ್ವಾರಂಟೈನ್
- ಕೋವಿಡ್ ಸೋಂಕು ಪರೀಕ್ಷೆಗೆ ಗಂಟಲ ದ್ರವ ಸಂಗ್ರಹ



ದೇಶದ 10 ಪ್ರಯೋಗಾಲಯಗಳಲ್ಲಿ ರೂಪಾಂತರಿ ವೈರಸ್ ಬಗ್ಗೆ ತಪಾಸಣೆ ನಡೆಸಲಾಗುತ್ತಿದೆ. ನಾಪತ್ತೆಯಾದವರನ್ನು ಗೃಹ ಇಲಾಖೆಯವರೊಂದಿಗೆ ಚರ್ಚಿಸಿ ಪತ್ತೆ ಮಾಡುವ ಕುರಿತು ತಿಳಿಸಲಾಗಿದ್ದು 280 ಮಂದಿ ಮೊಬೈಲ್ ಸ್ವಿಚ್‌ಆಫ್ ಮಾಡಿಕೊಂಡಿದ್ದಾರೆ.

■ ಡಾ.ಕೆ.ಸುಧಾಕರ್, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ

ಸರ್ಕಾರ ಜನರಲ್ಲಿ ಇರುವ ಆತಂಕ ದೂರ ಮಾಡಬೇಕು. ಬ್ರಿಟನ್‌ನಿಂದ ಬಂದ ಮೇಲೆ ಹುಡುಕುವ ಬದಲು ಬರುವ ಮೊದಲೇ ವಿಮಾನ ನಿಲ್ದಾಣದಲ್ಲಿ ಪರೀಕ್ಷೆ ಮಾಡಿ ಕ್ವಾರಂಟೈನ್ ಮಾಡಬೇಕಿತ್ತು. ಎಲ್ಲರ ರಕ್ಷಣೆ ಸರ್ಕಾರದ ಮೊದಲ ಆದ್ಯತೆ ಆಗಲಿ.

■ ಸಿದ್ದರಾಮಯ್ಯ, ವಿರೋಧಪಕ್ಷದ ನಾಯಕ




## ಕ್ವಾರಂಟೈನ್ ಕೇಂದ್ರವಾಗಿ ಅಪಾರ್ಟ್‌ಮೆಂಟ್

ಬೊಮ್ಮನಹಳ್ಳಿ ವಲಯದ ವಸಂತಪುರ ಸಿರಿ ಎಂಬೆಸಿ ಅಪಾರ್ಟ್‌ಮೆಂಟ್‌ನ ತಾಯಿ ಮಗಳಿಗೆ ಬ್ರಿಟನ್ ರೂಪಾಂತರ ಕೊರೋನಾ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಮಂಗಳವಾರ ಬಿಬಿಎಂಪಿ ಹಾಗೂ ಆರೋಗ್ಯ ಇಲಾಖೆಯ ವೈದ್ಯಾಧಿಕಾರಿಗಳ ತಂಡ ಅಪಾರ್ಟ್‌ಮೆಂಟ್‌ಗೆ ಭೇಟಿ ನೀಡಿ ಅಪಾರ್ಟ್‌ಮೆಂಟ್ ನಿವಾಸಿಗಳ ಆರೋಗ್ಯ ತಪಾಸಣೆ ನಡೆಸಿ ಸಾಂಸ್ಥಿಕ ಕ್ವಾರಂಟೈನ್‌ಗೆ ಹೋಟೆಲ್‌ಗೆ ಕರೆದುಕೊಂಡು ಹೋಗಲು ಮುಂದಾದರು. ಈ ವೇಳೆ ನಿವಾಸಿಗಳು ನಾವು ನಮ್ಮ ನಮ್ಮ ಮನೆಗಳಲ್ಲಿ ಹೋಂ ಕ್ವಾರಂಟೈನ್‌ನಲ್ಲಿ ಇರುವುದಾಗಿ ಪಟ್ಟುಹಿಡಿದು ಕುಳಿತುಕೊಂಡರು. ಈ ವೇಳೆ ಅಪಾರ್ಟ್‌ಮೆಂಟ್ ಬಳಿ ಆತಂಕದ ವಾತಾವರಣ ನಿರ್ಮಾಣಗೊಂಡಿತ್ತು. ಸೋಂಕಿತರೊಂದಿಗೆ ಸಂಪರ್ಕ ಹೊಂದಿದ್ದ ಎಲ್ಲರೂ ಒಂದೇ ಅಪಾರ್ಟ್‌ಮೆಂಟ್ ನಿವಾಸಿಗಳಾದ ಹಿನ್ನೆಲೆಯಲ್ಲಿ ಅಧಿಕಾರಿಗಳು ಅಪಾರ್ಟ್‌ಮೆಂಟ್‌ನಲ್ಲಿ ಕ್ವಾರಂಟೈನ್‌ಗೆ ಮಾಡಿದರು. ಅಪಾರ್ಟ್‌ಮೆಂಟ್‌ಗೆ ಸಿಸಿಟಿವಿ ಕ್ಯಾಮರಾ ಅಳವಡಿಕೆ, ಗೇಟ್‌ಗೆ ಬೀಗ ಹಾಕಲಾಗಿದೆ. ನಿಗಾ ವಹಿಸುವುದಕ್ಕೆ ಆರೋಗ್ಯ ಸಿಬ್ಬಂದಿ ನಿಯೋಜಿಸಲಾಗಿದೆ. ಒಂದು ಮನೆ ಅವರು ಮತ್ತೊಂದು ಮನೆಗೆ ಹೋಗದೆ ತಮ್ಮ ಮನೆಯಲ್ಲಿ ಇರುವಂತೆ ಸೂಚಿಸಲಾಗಿದೆ.

ಜನದನಿಯ ಸಾರಥಿ
ವಾರ್ತಾ ಭಾರತಿ

ಜನದನಿಯ ಸಾರಥಿ
ವಾರ್ತಾ ಭಾರತಿ

# ದೇಶದಲ್ಲಿ ಆರು ಮಂದಿಗೆ ರೂಪಾಂತರಿತ ಕೊರೋನ

## ಬೆಂಗಳೂರಿನಲ್ಲಿ 3, ಹೈದರಾಬಾದ್‌ನಲ್ಲಿ 2, ಪುಣೆಯಲ್ಲಿ 1 ಪ್ರಕರಣ ವರದಿ

**ಹೊಸದಿಲ್ಲಿ, ಡಿ. 29:** ಬ್ರಿಟನ್‌ನಿಂದ ಆಗಮಿಸಿದ 6 ಮಂದಿಯಲ್ಲಿ ರೂಪಾಂತರಿತ ಕೊರೋನ ವೈರಸ್ ಸೋಂಕು ಇರುವುದು ದೃಢಪಟ್ಟಿದೆ. ಬ್ರಿಟನ್‌ನಲ್ಲಿ ಮೊದಲು ಪತ್ತೆಯಾದ ಈ ರೂಪಾಂತರಿತ ಕೊರೋನ ವೈರಸ್ ಭಾರತದಲ್ಲಿ ಪತ್ತೆಯಾಗುತ್ತಿರುವುದು ಇದೇ ಮೊದಲು.

ರೂಪಾಂತರಿತ ಕೊರೋನ ವೈರಸ್ ಸೋಂಕಿತ ಮೂವರನ್ನು ಬೆಂಗಳೂರಿನ ನಿಮ್ಹಾನ್ಸ್, ಇಬ್ಬರನ್ನು ಹೈದರಾಬಾದ್‌ನ ಸೆಂಟರ್ ಫಾರ್ ಸೆಲ್ಯುಲಾರ್ ಆ್ಯಂಡ್ ಮಾಲೆಕ್ಯುಲರ್ ಬಯಾಲಜಿ ಹಾಗೂ ಒಬ್ಬರನ್ನು ಪುಣೆಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿಯಲ್ಲಿ ಇರಿಸಲಾಗಿದೆ.

ಹೊಸ ರೂಪಾಂತರಿತ ಕೊರೋನ ವೈರಸ್ ಈಗಿರುವ ಕೊರೋನ ವೈರಸ್‌ಗಿಂತ ಶೇಕಡ 70ರಷ್ಟು ಹೆಚ್ಚು ಸಾಂಕ್ರಾಮಿಕಗೊಳ್ಳುವ ಶಕ್ತಿ ಹೊಂದಿದೆ. ಆದರೆ, ಇದು ಹೆಚ್ಚು ಅಪಾಯಕಾರಿ ಅಥವಾ ಲಸಿಕೆಯಿಂದ ನಿಯಂತ್ರಣವಾಗದು ಎಂದು ಹೇಳುವುದಕ್ಕೆ ಇದುವರೆಗೆ ಯಾವುದೇ ಬಲವಾದ ಪುರಾವೆ ದೊರಕಿಲ್ಲ ಎಂದು ವೈದ್ಯರೊಬ್ಬರು ಹೇಳಿದ್ದಾರೆ.

ರಾಜ್ಯ ಸರಕಾರಗಳು ಎಲ್ಲಾ ರೋಗಿಗಳನ್ನು ನಿಯೋಜಿತ ಆರೋಗ್ಯ ಕೇಂದ್ರದಲ್ಲಿರುವ 'ಏಕ ಕೊಠಡಿಯ ಐಸೋಲೇಶನ್'ನಲ್ಲಿ ಇರಿಸಿದೆ. ಅವರ ಸಂಪರ್ಕ ಹೊಂದಿದವರನ್ನು ಕ್ವಾರಂಟೈನ್‌ನಲ್ಲಿ ಇರಿಸಿದೆ. ಸಹ ಪ್ರಯಾಣಿಕರು, ಅವರ ಕುಟುಂಬದ ಸದಸ್ಯರು ಹಾಗೂ ಇತರರ ಸಮಗ್ರ ಸಂಪರ್ಕ ಪತ್ತೆ ಕಾರ್ಯ ಆರಂಭಿಸಿದೆ.

6ನೇ ಪುಟಕ್ಕೆ



### ಕೊರೋನ ಸೋಂಕು

## ಬ್ರಿಟನ್ ವಿಮಾನಯಾನ ನಿಷೇಧ ವಿಸ್ತರಣೆ?

**ಹೊಸದಿಲ್ಲಿ, ಡಿ.29:** ಬ್ರಿಟನ್‌ನಲ್ಲಿ ರೂಪಾಂತರಿತ ಕೊರೋನ ಸೋಂಕು ಪತ್ತೆಯಾದ ಹಿನ್ನೆಲೆಯಲ್ಲಿ, ಆ ದೇಶದಿಂದ ಬರುವ ಮತ್ತು ತೆರಳುವ ವಿಮಾನಗಳ ಸಂಚಾರ ನಿಷೇಧವನ್ನು ಡಿಸೆಂಬರ್ 31ರ ಬಳಿಕವೂ ವಿಸ್ತರಿಸುವ ಸಾಧ್ಯತೆಯಿದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಹರ್ದೀಪ್ ಸಿಂಗ್ ಪುರಿ ಮಂಗಳವಾರ ಹೇಳಿದ್ದಾರೆ.

ಡಿಸೆಂಬರ್ 31ರವರೆಗೆ ಇರುವ ನಿಷೇಧವನ್ನು ವಿಸ್ತರಿಸುವುದೇ ಬೇಡವೇ ಎಂಬ ಬಗ್ಗೆ ಶೀಘ್ರ ನಿರ್ಧರಿಸಲಾಗುವುದು. ಆದರೆ ನನ್ನ ಪ್ರಕಾರ, ಅನಿರ್ದಿಷ್ಟಾವಧಿಯವರೆಗೆ ಅಥವಾ ದೀರ್ಘಾವಧಿಗೆ ವಿಸ್ತರಿಸುವ ಅಗತ್ಯವಿಲ್ಲ. ತಾತ್ಕಾಲಿಕ ನಿಷೇಧವನ್ನು ಸ್ವಲ್ಪ ದಿನದವರೆಗೆ ವಿಸ್ತರಿಸುವುದು ಒಳಿತು ಎಂದವರು ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ. ದೇಶದಲ್ಲಿ ರೂಪಾಂತರಿತ ಕೊರೋನ ಸೋಂಕಿನ 6 ಹೊಸ ಪ್ರಕರಣ ಪತ್ತೆಯಾಗಿರುವುದಾಗಿ ಕೇಂದ್ರ ಆರೋಗ್ಯ ಇಲಾಖೆ ಹೇಳಿದೆ.

6ನೇ ಪುಟಕ್ಕೆ

ಜನದನಿಯ ಸಾರಥಿ
ವಾರ್ತಾ ಭಾರತಿ

# ರೂಪಾಂತರಿತ ಕೊರೋನ

ನವೆಂಬರ್ 25ರಿಂದ ಡಿಸೆಂಬರ್ 23ರ ವರೆಗೆ ಬ್ರಿಟನ್‌ನಿಂದ ಸುಮಾರು 33,000 ಪ್ರಯಾಣಿಕರು ಆಗಮಿಸಿದ್ದಾರೆ. ಇವರಲ್ಲಿ 114 ಮಂದಿ ಮಾದರಿಯ ವರದಿಯಲ್ಲಿ ಕೊರೋನ ಸೋಂಕು ದೃಢಪಟ್ಟಿದೆ. ಇತರ ಮಾದರಿಗಳ ಜಿನೋಮ್ ಪರೀಕ್ಷೆ ಪ್ರಗತಿಯಲ್ಲಿದೆ ಎಂದು ಸರಕಾರದ ಹೇಳಿಕೆ ಹೇಳಿದೆ. “ಪರಿಸ್ಥಿತಿಯನ್ನು ಎಚ್ಚರಿಕೆಯಿಂದ ಗಮನಿಸಲಾಗುತ್ತಿದೆ. ಕಣ್ಗಾವಲು, ಕಂಟೈನ್ಮೆಂಟ್, ಪರೀಕ್ಷೆ ಹಾಗೂ ಮಾದರಿಗಳನ್ನು ಐಎನ್‌ಎಸ್‌ಎಸಿಒಜಿ ಲ್ಯಾಬ್‌ಗಳಿಗೆ ರವಾನಿಸಲು ನಿಯಮಿತ ಸಲಹೆಗಳನ್ನು ನೀಡಲಾಗುತ್ತಿದೆ” ಎಂದು ಸರಕಾರ ತಿಳಿಸಿದೆ.

# ನಿಷೇಧ ವಿಸ್ತರಣೆ?

ಬ್ರಿಟನ್‌ನಲ್ಲಿ ರೂಪಾಂತರಿತ ಕೊರೋನದ ಬಗ್ಗೆ ಅಲ್ಲಿನ ಆರೋಗ್ಯ ಸಚಿವರು ಹೇಳಿಕೆ ನೀಡಿದ ಹಿನ್ನೆಲೆಯಲ್ಲಿ, ಬ್ರಿಟನ್ ವಿಮಾನಗಳ ಪ್ರಯಾಣವನ್ನು ಡಿಸೆಂಬರ್ 31ರವರೆಗೆ ರದ್ದುಗೊಳಿಸಿರುವುದಾಗಿ ಕೇಂದ್ರ ನಾಗರಿಕ ವಿಮಾನಯಾನ ಇಲಾಖೆ ಡಿಸೆಂಬರ್ 21ರಂದು ಹೇಳಿಕೆ ನೀಡಿತ್ತು. 50ಕ್ಕೂ ಅಧಿಕ ರಾಷ್ಟ್ರಗಳು ಬ್ರಿಟನ್‌ಗೆ ಪ್ರಯಾಣ ನಿರ್ಬಂಧ ವಿಧಿಸಿವೆ.

ಸಂಜೆವಾಣಿ
1982

# 6 ಮಂದಿಗೆ ಬ್ರಿಟನ್ ಸೋಂಕು

ಬೆಂಗಳೂರು,/ನವದೆಹಲಿ ಡಿ.29– ಇಂಗ್ಲೆಂಡ್ ನಲ್ಲಿ ಕಾಣಿಸಿಕೊಂಡು ಆತಂಕ ಮತ್ತು ತಲ್ಲಣ ಮೂಡಿಸಿರುವ ರೂಪಾಂತರ ಕೊರೋನಾ ಸೋಂಕು ರಾಜ್ಯದಲ್ಲಿ ಮೂರು ಮಂದಿ ಸೇರಿದಂತೆ ದೇಶದಲ್ಲಿ 6 ಮಂದಿಗೆ ರೂಪಾಂತರ ಸೋಂಕು ಕಾಣಿಸಿಕೊಂಡಿರುವುದು ಮತ್ತಷ್ಟು ಆತಂಕ ಸೃಷ್ಟಿಸಿದೆ.

ಮೂರು ಮಂದಿಯನ್ನು ಬೆಂಗಳೂರಿನ ನಿಮಾನ್ಸ್ ನಲ್ಲಿ ಇಬ್ಬರು ಹೈದರಾಬಾದ್‌ನ ಮೈಕ್ರೋಬಯೋಲಜಿ ಸೆಲ್ಯುಲರ್ ಕೇಂದ್ರ ಹಾಗೂ ಮತ್ತೋರ್ವನನ್ನು ಪುಣೆಯಲ್ಲಿನ ಭಾರತೀಯ ವೈರಾಣು ಸಂಸ್ಥೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ತಿಳಿಸಿದೆ.

ಎಲ್ಲ ಆರು ಮಂದಿ ರೂಪಾಂತರ ಕೊರೊನಾ ಸೋಂಕು ಕಾಣಿಸಿಕೊಂಡವರಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದೆ.

ನವಂಬರ್ 23 ರಿಂದ ಡಿಸೆಂಬರ್ 23 ತನಕ ದೇಶದ ವಿವಿಧ ರಾಜ್ಯಗಳಿಗೆ 33000 ಇಂಗ್ಲೆಂಡ್‌ನಿಂದ ಆಗಮಿಸಿದ್ದಾರೆ. ಇಂಗ್ಲೆಂಡ್ ನಿಂದ ಬಂದ ಎಲ್ಲರನ್ನೂ ವಿಮಾನನಿಲ್ದಾಣದಲ್ಲಿ ಅವರ ಗುರುತು ಪತ್ತೆ ಮಾಡಲಾಗಿದೆ ಜೊತೆಗೆ ಪರೀಕ್ಷೆಯನ್ನು ಮಾಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

**114 ಮಂದಿಗೆ ಕೊರೋನಾ**

ಆಯಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಇಂಗ್ಲೆಂಡ್ ನಿಂದ ಬಂದ ಎಲ್ಲ



ಮಂದಿಗೆ ಆರ್‌ಟಿ ಪಿಸಿಆರ್ ಪರೀಕ್ಷೆ ಮಾಡಲಾಗಿದ್ದು ಇದುವರೆಗೂ 114 ಮಂದಿಗೆ ಕೊರೋನಾ ಸೋಂಕು ಕೊಂಡಿದೆ. ಅದರಲ್ಲಿ 6 ಮಂದಿಗೆ ರೂಪಾಂತರ ಕೊರೊನಾ ಸೋಂಕು ಕಾಣಿಸಿಕೊಂಡಿದೆ ಎಂದು ಸಚಿವಾಲಯ ತಿಳಿಸಿದೆ.

ರೂಪಾಂತರ ಕೊರೊನಾ ಸೋಂಕು ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಅಗತ್ಯ ಮುನ್ನೆಚ್ಚರಿಕೆ ಮತ್ತು ಕಟ್ಟುನಿಟ್ಟಿನ ಕ್ರಮ ವಹಿಸುವಂತೆ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತನ್ನ ಮಾಹಿತಿಯಲ್ಲಿ ತಿಳಿಸಿದೆ

**ರಾಜ್ಯದಲ್ಲಿ 3 ಮಂದಿಗೆ ದೃಢ:**

ಇಂಗ್ಲೆಂಡ್‌ನಿಂದ ರಾಜ್ಯಕ್ಕೆ ಆಗಮಿಸಿದ್ದ ಜನರಲ್ಲಿ ರೂಪಾಂತರವನ್ನು ಸೋಂಕಿನ ಪ್ರಭೇದ ಪತ್ತೆ ಮಾಡಲು ಪರೀಕ್ಷೆ ನಡೆಸಲಾಗಿತ್ತು. ಅದರಲ್ಲಿ ಮೂರು ಮಂದಿಗೆ ರೂಪಾಂತರ ಕೊರೋನೋ ಸೋಂಕು ಪಟ್ಟಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಸಚಿವ ಡಾ. ಕೆ.ಸುಧಾಕರ್ ಖಚಿತಪಡಿಸಿದ್ದಾರೆ

ಕೊರೊನಾ ವೈರಾಣುವಿನ ರೂಪಾಂತರಗೊಂಡ ಪ್ರಬೇಧವನ್ನು ಪತ್ತೆ ಮಾಡಲು ಇಂಗ್ಲೆಂಡ್ ನಿಂದ ರಾಜ್ಯಕ್ಕೆ ಮರಳಿದ್ದ ವ್ಯಕ್ತಿಗಳನ್ನು ನಿಮ್ಹಾನ್ಸ್ ನಲ್ಲಿ ಪರೀಕ್ಷೆಗೊಳಪಡಿಸಲಾಗಿತ್ತು. ಈ ಪೈಕಿ ಮೂವರಲ್ಲಿ ಹೊಸ ಪ್ರಬೇಧದ ಸೋಂಕು ದೃಢಪಟ್ಟಿದ್ದು. ಹೊಸ ಪ್ರಬೇಧದ ವೈರಸ್ ಹರಡದಂತೆ ತಡೆಯಲು ತಜ್ಞರೊಂದಿಗೆ ಚರ್ಚಿಸಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದ್ದಾರೆ.

ಸಂಜೆವಾಣಿ
1982

# ಬಿಬಿಎಂಪಿ ವಾರ್ಡ್ ನೋಡಲ್ ಅಧಿಕಾರಿಗಳು ನಾಪತ್ತೆ!

■ -ಮಹಮ್ಮದ್

ಬೆಂಗಳೂರು, ಡಿ.29- ಬಿಬಿಎಂಪಿ ಸದಸ್ಯರ ಆಡಳಿತ ಅವಧಿ ಮುಕ್ತಾಯ ಹಿನ್ನೆಲೆಯಲ್ಲಿ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ ಅಗತ್ಯ ಸೇವೆಗಳನ್ನು ಒದಗಿಸಲು ವಾರ್ಡ್‌ವಾರು ನೋಡಲ್ ಅಧಿಕಾರಿಗಳನ್ನು ನೇಮಿಸಿದ್ದರೂ, ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸದೆ, ನಾಪತ್ತೆಯಾಗಿದ್ದಾರೆಯೇ ಎನ್ನುವ ಕೂಗು ಎದ್ದಿದೆ.




ಪಾಲಿಕೆ ವ್ಯಾಪ್ತಿಯ ಪ್ರತಿ ವಾರ್ಡಿಗೆ ಒಬ್ಬರಂತೆ ನೋಡಲ್ ಅಧಿಕಾರಿ ಇದ್ದರೂ, ಕಸ, ರಸ್ತೆ ಗುಂಡಿಗಳು, ನೀರಿನ ಬವಣೆ ಹೀಗೆ ಹತ್ತಾರು ಸಮಸ್ಯೆಗಳು ದಿನನಿತ್ಯ ಕೇಳಿಬರುತ್ತಿದೆ.

ಆದರೆ, ಬೆರಳೆಣಿಕೆಯಷ್ಟು ವಾರ್ಡ್ ಗಳಲ್ಲಿ ಪಾತ್ರ ಪರಿಹಾರ ದಕ್ಕಿದರೆ, ಬಹುತೇಕ ಕಡೆ, ಸಾರ್ವಜನಿಕ ಸಮಸ್ಯೆ ಕೇಳುವಂತಿಲ್ಲ ಎನ್ನುವ ಮಾತುಗಳು ಕೇಳಿಬಂದಿವೆ.

ರಾಜಧಾನಿ ಬೆಂಗಳೂರಿನಲ್ಲಿ ಕಸದ ಸಮಸ್ಯೆ ಅಧಿಕವಾಗಿದೆ. ಜತೆಗೆ ರಸ್ತೆ ಗುಂಡಿಗಳು, ವಿವಿಧೆಡೆ ಕಾಮಗಾರಿ ನಡೆಯುತ್ತಿರುವ ಪ್ರದೇಶದಲ್ಲಿ ಸಂಚಾರ ದಟ್ಟಣೆ, ಧೂಳು ಹಾಗೂ ಸ್ಥಳೀಯ ಬಿಬಿಎಂಪಿ ಆಸ್ಪತ್ರೆಗಳ ಬಗೆಗಿನ ಸಮಸ್ಯೆಗಳನ್ನು ಹೇಳಿಕೊಳ್ಳಲು ಅಧಿಕಾರಿಯೇ ಸಿಗುವುದಿಲ್ಲ ಎಂದು ಸಾರ್ವಜನಿಕರು ಆರೋಪಿಸಿದರು.

ಅಲ್ಲದೆ, ಚುನಾಯಿತ ಸದಸ್ಯರ ಅಧಿಕಾರಾವಧಿಯು ಇದೇ ವರ್ಷದ ಸೆ.10ಕ್ಕೆ ಮುಕ್ತಾಯವಾಗಿತ್ತು. ಇದರಿಂದ ಪಾಲಿಕೆ ಮತ್ತು ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸಲು ಕಷ್ಟಕರವಾಗಿದ್ದ ಕಾರಣದಿಂದ ಮಾಡಲಾಗಿದೆ. ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ ಅಗತ್ಯ ಸೇವೆಗಳನ್ನು ಒದಗಿಸಲು ವಾರ್ಡ್‌ವಾರು ಸಮಿತಿಗಳನ್ನು ರಚಿಸಿ, ಪ್ರತಿ ವಾರ್ಡ್‌ಗೆ ನೋಡಲ್ ಅಧಿಕಾರಿಗಳನ್ನು ನಿಯೋಜಿಸಲಾಗಿದೆ.

ವಾರ್ಡ್ ವ್ಯಾಪ್ತಿ ಮತ್ತು ಸಮೀಪದಲ್ಲೇ ವಾಸವಿರುವ ಅಧಿಕಾರಿಗಳನ್ನು ನೇಮಕ ಮಾಡಿಯೂ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಆದೇಶ ಹೊರಡಿಸಿದ್ದರು.ಆದರೆ, ಅನೇಕ ವಾರ್ಡ್ ಗಳಲ್ಲಿ ಅಧಿಕಾರಿಯೂ ಜನರ ಕೈಗೆ ಸಿಗುವುದು ಕನಸಿನ ಮಾತಾಗಿದೆ.

### ಎಲ್ಲಾ ಬಗೆಹರಿಸಲು ಕಷ್ಟಕರ..!

■ **ಜನಪ್ರತಿನಿಧಿಗಳಷ್ಟು ವೇಗವಾಗಿ ನಾವು ಕಾರ್ಯನಿರ್ವಹಿಸಲು ಸಾಧ್ಯವಿಲ್ಲ. ಉದಾಹರಣೆಗೆ ನಾವು ಪರಿಹಾರ ನೀಡಬೇಕಾದರೆ, ಸಾಕಷ್ಟು ಸಮಯ ಕಾಯಬೇಕು.ಆದರೆ, ಜನಪ್ರತಿನಿಧಿಗಳು ತಮ್ಮ ಕೈಯಿಂದಲೇ ಕ್ಷಣಮಾತ್ರದಲ್ಲಿ ಹಣ ಖರ್ಚು ಮಾಡುತ್ತಾರೆ ಎಂದು ಹೆಸರು ಹೇಳಲು ಇಚ್ಛಿಸದ ನೋಡಲ್ ಅಧಿಕಾರಿಯೊಬ್ಬರು ನುಡಿದರು.**

### ಸಮಿತಿ ಹೇಗೆ?:

ಸಾರ್ವಜನಿಕರ ಕುಂದು-ಕೊರತೆಗಳ ನಿವಾರಣೆಗಾಗಿ ವಾರ್ಡ್‌ನ ನೋಡಲ್ ಅಧಿಕಾರಿ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ರಚಿಸಲಾಗಿದೆ. ಆಯಾ ವಾರ್ಡ್‌ನ ಸಹಾಯಕ, ಕಿರಿಯ ಇಂಜಿನಿಯರ್ ಸದಸ್ಯ ಕಾರ್ಯದರ್ಶಿಯಾಗಿದ್ದು, ಹಿರಿಯ ಅಥವಾ ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಸ್ಥಳೀಯ ನಾಗರಿಕ ಕಲ್ಯಾಣ ಸಂಘದ ಪದಾಧಿಕಾರಿಗಳು ಸದಸ್ಯರಾಗಿರುತ್ತಾರೆ.

ಈ ಸಮಿತಿಯು ಪ್ರತಿ ತಿಂಗಳು ಒಂದನೇ ಮತ್ತು ಮೂರನೇ ಶನಿವಾರ ಸಭೆ ಸೇರಿ ವಾರ್ಡ್‌ನ ಸಮಸ್ಯೆಗಳ ಕುರಿತು ಚರ್ಚಿಸಿ, ನಡವಳಿಗಳನ್ನು ವಲಯ ವಿಶೇಷ ಆಯುಕ್ತರ ಮೂಲಕ ಆಯುಕ್ತರಿಗೆ ಸಲ್ಲಿಸಲಿಬೇಕು.

ಆದರೆ, ನಿರೀಕ್ಷೆ ಮಟ್ಟದಲ್ಲಿ ಇದು ನಡೆಯುತ್ತಿಲ್ಲ ಎನ್ನುವುದು ಸಾರ್ವಜನಿಕರ ಅಳಲು.

### ಸಮಿತಿ ಕೆಲಸಗಳೇನು?:

- ■ ಸಮರ್ಪಕ ಕಸ ವಿಲೇವಾರಿಗೆ ಕ್ರಮ ಕೈಗೊಳ್ಳಬೇಕು.
- ■ ಮನೆಗಳು ಮತ್ತು ವಾಣಿಜ್ಯ ಸಂಕೀರ್ಣಗಳು ಹಸಿ, ಒಣ ಮತ್ತು ನೈರ್ಮಲ್ಯ ತ್ಯಾಜ್ಯ ನೀಡುತ್ತಿವೆಯೇ ಎಂಬುದನ್ನು ಪರಿಶೀಲಿಸಬೇಕು.
- ■ ಕಸ ವಿಂಗಡಿಸಿಕೊಡದ ಮನೆಗಳು, ವಾಣಿಜ್ಯ ಮಳಿಗೆಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸಬೇಕು. ಆ ಬಳಿಕವೂ ವಿಂಗಡಿಸಿಕೊಡದಿದ್ದರೆ ದಂಡ ವಿಧಿಸಲು ಕ್ರಮ ವಹಿಸಬೇಕು.
- ■ ಕಸ ಸಂಗ್ರಹಿಸಲು ಅಗತ್ಯ ಪೌರ ಕಾರ್ಮಿಕರು, ತಳ್ಳುವ ಗಾಡಿ ಮತ್ತು ಆಟೊ ಟಿಪ್ಪರ್‌ಗಳನ್ನು ಗುತ್ತಿಗೆದಾರರು ಒದಗಿಸಿರುವ ಬಗ್ಗೆ ಪರಿಶೀಲಿಸಬೇಕು.
- ■ ಒಣ ತ್ಯಾಜ್ಯ ಸಂಗ್ರಹಕ್ಕೆ ಭೇಟಿ ನೀಡಿ ಕಸ ಸಾಗಣೆಯಾಗುತ್ತಿರುವ ಕುರಿತು ಮತ್ತು ಖಾಲಿ ನಿವೇಶನಗಳಲ್ಲಿ ಕಸ ಇಲ್ಲದಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು.
- ■ ರಸ್ತೆಗಳಲ್ಲಿ ಗುಂಡಿಗಳು ಬಿದ್ದಿದ್ದರೆ ಮುಚ್ಚಿಸಬೇಕು.
- ■ ಓಎಫ್‌ಸಿ ಕಂಪನಿಗಳು ಅಥವಾ ಇತರರು ಅನಧಿಕೃತವಾಗಿ ರಸ್ತೆಗಳನ್ನು ಅಗೆದಿದ್ದರೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಸಂಬಂಧಪಟ್ಟ ಎಂಜಿನಿಯರ್‌ಗೆ ಸೂಚಿಸಬೇಕು.
- ■ ವಾರ್ಡ್‌ಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳ ಗುಣಮಟ್ಟ ಪರಿಶೀಲಿಸಬೇಕು.
- ■ ಅನಧಿಕೃತ ಫ್ಲೆಕ್ಸ್, ಬ್ಯಾನರ್‌ಗಳು ಅಳವಡಿಸಿದ್ದರೆ ತೆರವು ಮಾಡಿಸಬೇಕು
- ■ ತಿಂಗಳಿಗೊಮ್ಮೆ ಪಾಲಿಕೆ ಆಸ್ಪತ್ರೆಗಳಿಗೆ ಭೇಟಿ ನೀಡಿ, ಕಾರ್ಯನಿರ್ವಹಣೆ ಬಗ್ಗೆ ಪರಿಶೀಲನೆ ನಡೆಸಬೇಕು.
- ■ ಆಸ್ತಿತೆರಿಗೆ ವಸೂಲಾತಿ ಕುರಿತು ಪರಿಶೀಲಿಸಬೇಕು.
- ■ ಮಳೆಯಿಂದ ಪ್ರವಾಹ ಉಂಟಾಗಿರುವ ಸ್ಥಳಗಳಿಗೆ ಭೇಟಿ ನೀಡಬೇಕು.
- ■ ರಸ್ತೆಗಳಲ್ಲಿ ನೀರು ನಿಲ್ಲದಂತೆ ಮತ್ತು ಚರಂಡಿಗಳಲ್ಲಿ ಸರಾಗವಾಗಿ ನೀರು ಹರಿದು ಹೋಗುವಂತೆ ನೋಡಿಕೊಳ್ಳಬೇಕು.
- ■ ಜನಪ್ರತಿನಿಧಿಗಳನ್ನು ಭೇಟಿ ಮಾಡಿ ವಾರ್ಡ್‌ನ ಕುಂದು-ಕೊರತೆಗಳ ಬಗ್ಗೆ ಚರ್ಚಿಸಿ, ನಿವಾರಣೆಗೆ ಕ್ರಮ ಕೈಗೊಳ್ಳಬೇಕು.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

## ಬ್ರಿಟನ್‌ನಿಂದ ಬೆಂಗಳೂರಿಗೆ ಬಂದಿದ್ದ

# ಮೂವರಿಗೆ ರೂಪಾಂತರ ಕೊರೊನಾ

### ಭಾರತದಲ್ಲಿ ಒಟ್ಟು 6 ಪ್ರಕರಣಗಳು ಪತ್ತೆ

**ನವದೆಹಲಿ,ಡಿ.29-** ಬ್ರಿಟನ್‌ನಲ್ಲಿ ರೂಪಾಂತರಗೊಂಡ ಹೊಸ ಮಾದರಿಯ ಕೋವಿಡ್ ಭಾರತಕ್ಕೆ ಅಧಿಕೃತವಾಗಿ ಕಾಲಿಟ್ಟಿದ್ದು, 6 ಮಂದಿಗೆ ಸೋಂಕು ದೃಢಪಟ್ಟಿದೆ ಎಂಬ ಆತಂಕಕಾರಿ ಸುದ್ದಿ ಹೊರಬಿದ್ದಿದೆ.

ಇನ್ನೊಂದು ಆಘಾತಕಾರಿ ವಿಷಯವೆಂದರೆ ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ಬ್ರಿಟನ್‌ನಿಂದ ಆಗಮಿಸಿದ ಮೂವರು, ಹೈದರಾಬಾದ್‌ನಲ್ಲಿ ಇಬ್ಬರು ಹಾಗೂ ಪುಣೆಯಲ್ಲಿ ಒಬ್ಬರಿಗೆ ಈ ಸೋಂಕು ...ಪುಟ 2

### ಚಿರಂಜೀವಿ ಪುತ್ರ ರಾಮ್‌ಚರಣ್‌ಗೆ ಕೊರೊನಾ

**ಚೆನ್ನೈ, ಡಿ.29-** ತೆಲುಗು ಚಿತ್ರರಂಗದ ಸೂಪರ್ ಸ್ಟಾರ್ ಚಿರಂಜೀವಿ ಅವರ ಪುತ್ರ, ನಟ ರಾಮ್‌ಚರಣ್ ತೇಜ್ ಅವರಿಗೆ ಕೊರೊನಾ ಸೋಂಕು ತಗುಲಿದೆ. ...ಪುಟ 2

### ಲಾಕ್‌ಡೌನ್ ಯೋಚಿಸಿಲ್ಲ

**ಬೆಂಗಳೂರು,ಡಿ.29-** ಬ್ರಿಟನ್‌ನ ರೂಪಾಂತರಗೊಂಡ ಸೋಂಕು ರಾಜ್ಯದಲ್ಲಿ ಕಾಣಿಸಿಕೊಂಡಿದ್ದರೂ ಮತ್ತೆ ಲಾಕ್‌ಡೌನ್ ಅಥವಾ ಸೀಲ್‌ಡೌನ್ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಕೆ. ಸುಧಾಕರ್ ಸ್ಪಷ್ಟಪಡಿಸಿದ್ದಾರೆ... ಪುಟ 2

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

# ರೂಪಾಂತರ ಕೊರೊನಾ

ಕಾಣಿಸಿಕೊಂಡಿದೆ ಎಂದು ಕೇಂದ್ರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಬಹಿರಂಗಪಡಿಸಿದೆ.

ಬ್ರಿಟ್‌ನ್‌ನಿಂದ ಹಿಂದಿರುಗಿದವರ ಪೈಕಿ ಮೂವರ ಕೋವಿಡ್ -19 ಟೆಸ್ಟ್ ರಿಪೋರ್ಟ್ ಪಾಸಿಟಿವ್ ಬಂದಿತ್ತು. ಅವರ ಸ್ಯಾಂಪಲ್‌ನ್ನು ಬೆಂಗಳೂರಿನ ನಿಮ್ಹಾನ್ಸ್‌ಗೆ ಕಳುಹಿಸಲಾಗಿತ್ತು. ರೂಪಾಂತರಿ ಕೊರೊನಾ ಸೋಂಕು ಇರುವುದನ್ನು ಆಸ್ಪತ್ರೆ ದೃಢೀಕರಿಸಿದೆ.

ಇನ್ನಿಬ್ಬರ ಮಾದರಿಯನ್ನು ಹೈದರಾಬಾದ್‌ನ ಸೆಲ್ಯುಲಾರ್ ಅಂಡ್ ಮಾಲಿಕ್ಯುಲರ್ ಬಯಾಲಜಿ ಸೆಂಟರ್‌ಗೆ ಕಳಹಿಸಲಾಗಿತ್ತು . ಅವರಿಗೂ ರೂಪಾಂತರಿ ವೈರಸ್ ಸೋಂಕು ದೃಢಪಟ್ಟಿದೆ. ಇದೇ ರೀತಿ ಇನ್ನೊಂದು ಪ್ರಕರಣ ಪುಣೆಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿಯಲ್ಲಿ ದೃಢಪಟ್ಟಿದೆ.

ಒಟ್ಟು ಕೊರೊನಾ ಸೋಂಕಿತರ ಪೈಕಿ ಮೂವರು ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ, ಇಬ್ಬರು ಹೈದರಾಬಾದ್‌ನ ಸಿಸಿಎಂಬಿಯಲ್ಲಿದ್ದಾರೆ, ಒಬ್ಬರು ಎನ್‌ಐವಿ ಪುಣೆಯಲ್ಲಿದ್ದಾರೆ.

ಈ ಎಲ್ಲಾ ರೋಗಿಗಳು ಇತ್ತೀಚೆಗಷ್ಟೇ ಬ್ರಿಟನ್‌ನಿಂದ ಭಾರತಕ್ಕೆ ವಾಪಸ್ಸಾಗಿದ್ದರು. ದೇಶದಲ್ಲಿ ಸಕ್ರಿಯ ಕೊರೊನಾ ಪ್ರಕರಣಗಳ ಸಂಖ್ಯೆ ನಿರಂತರವಾಗಿ ಇಳಿಕೆಯಾಗುತ್ತಿದ್ದರೂ ಜಾಗತಿಕವಾಗಿ ಪ್ರಕರಣಗಳ ಸಂಖ್ಯೆ ಹೆಚ್ಚಳ ಮತ್ತು ಬ್ರಿಟನ್‌ನಲ್ಲಿ ರೂಪಾಂತರಿ ಕೊರೊನಾ ಪತ್ತೆಯಾಗಿದ್ದು , ಇದನ್ನು ಗಮನದಲ್ಲಿರಿಸಿಕೊಂಡು ಕಣ್ಗಾವಲು, ನಿಯಂತ್ರಣ ಮತ್ತು ಎಚ್ಚರಿಕೆ ವಹಿಸುವ ಅವಶ್ಯಕತೆಯಿದೆ ಎಂದು ಕೇಂದ್ರ ಸರ್ಕಾರ ಸೂಚಿಸಿದೆ.

ರೂಪಾಂತರಿ ಕೊರೋನಾ ಕಣ್ಗಾವಲುಗಾಗಿ ಕೇಂದ್ರ ಗೃಹ ಸಚಿವಾಲಯ ಇಂದು ಬಿಡುಗಡೆ ಮಾಡಿರುವ ಹೊಸ ಮಾರ್ಗಸೂಚಿಗಳು ಜನವರಿ 31ರವರೆಗೆ ಜಾರಿಯಲ್ಲಿರುತ್ತವೆ ಎಂದು ತಿಳಿಸಿದೆ. ಅಂತೆಯೇ ಕಂಟೇನ್ಮೆಂಟ್ ಜೋನ್‌ಗಳಲ್ಲಿ ನಿಯಮವನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತದೆ ಮತ್ತು ವಿವಿಧ ಅನುಮತಿ ನೀಡಿದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸೂಚಿಸಲಾದ ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸಿಜರ್ಸ್ (ಎಸ್‌ಒಪಿಗಳು) ಪಾಲಿಸಬೇಕು ಎಂದು ಹೇಳಿದೆ.

ಕಳೆದ ಒಂದು ವಾರದ ಹಿಂದೆ ಬ್ರಿಟನ್‌ನಿಂದ ಸ್ವದೇಶಕ್ಕೆ ಆಗಮಿಸಿದ್ದವರನ್ನು ಕೋವಿಡ್ ಟೆಸ್ಟ್‌ಗೆ ಒಳಪಡಿಸಲಾಗಿತ್ತು. ಈಗ ಬೆಂಗಳೂರಿನ ಮೂವರಿಗೆ ಹೊಸ ಕೋವಿಡ್ ಖಚಿತವಾಗಿರುವುದರಿಂದ ಈ ಮೂವರು ಎಲ್ಲಿಯವರು? ಇವರ ಹೆಸರು, ವಿಳಾಸ ಯಾವುದೇ ವಿವರಗಳನ್ನು ಗೃಹ ಇಲಾಖೆ ಇನ್ನು ಬಿಡುಗಡೆ ಮಾಡಿಲ್ಲ.

ಮೂಲಗಳ ಪ್ರಕಾರ ಈ ಮೂವರಲ್ಲಿ ಓರ್ವ ಮಹಿಳೆ ರಾಜಾಜಿನಗರ ನಿವಾಸಿ ಎನ್ನಲಾಗಿದ್ದು , 6 ವರ್ಷದ ಮಗು ಸದ್ಯಕ್ಕೆ ಇವರೆಲ್ಲರನ್ನೂ ಆಸ್ಪತ್ರೆಯಲ್ಲಿ ಚಿಕಿತ್ಸೆಗೊಳಪಡಿಸಲಾಗಿದೆ.

**ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಿ :**

ಭಾರತದಲ್ಲಿ ಬ್ರಿಟನ್‌ನ ರೂಪಾಂತರಿ ಸೋಂಕು ಕಾಣಿಸಿಕೊಂಡ ಕಾರಣ ಕೂಡಲೇ ಎಲ್ಲಾ ರಾಜ್ಯ ಸರ್ಕಾರಗಳು ಬಿಗಿ ಕ್ರಮ ಕೈಗೊಳ್ಳುವಂತೆ ಕೇಂದ್ರ ಗೃಹ ಇಲಾಖೆ ಕಟ್ಟುನಿಟ್ಟಿನ ಸೂಚನೆ ಹೊರಡಿಸಿದೆ. ಯಾವುದೇ ಕಾರಣಕ್ಕೂ ಹೊಸ ವರ್ಷಾಚರಣೆಗೆ ಅವಕಾಶ ನೀಡದೆ ಸಾಧ್ಯವಾದಷ್ಟು ಇದನ್ನು ತಡೆಯಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು. ಉದಾಸೀನ ವಹಿಸಬಾರದೆಂದು ನಿರ್ದೇಶನ ನೀಡಿದೆ.

ಬ್ರಿಟನ್ ಸೇರಿದಂತೆ ವಿದೇಶದಿಂದ ಬರುವವರ ಚಲನವಲನಗಳ ಮೇಲೆ ಹದ್ದಿನ ಕಣ್ಣಿಡಬೇಕು, ವಿಮಾನ ನಿಲ್ದಾಣದಲ್ಲೇ ಪ್ರತಿಯೊಬ್ಬರಿಗೂ ಕೋವಿಡ್ ಟೆಸ್ಟ್‌ಗೆ ಒಳಪಡಿಸಬೇಕು, ಕೋವಿಡ್ ನೆಗೆಟಿವ್ ಪ್ರಮಾಣಪತ್ರ ಇದ್ದರೂ ಕೂಡ ಅವರನ್ನು ಕಡ್ಡಾಯವಾಗಿ ಹೋಂ ಕ್ವಾರಂಟೇನ್‌ಗೆ ಒಳಪಡಿಸುವಂತೆ ಸೂಚನೆ ಕೊಟ್ಟಿದೆ.

ಒಂದು ಮೂಲದ ಪ್ರಕಾರ ಕಳೆದ ನವೆಂಬರ್ 25ರಿಂದ ಡಿಸೆಂಬರ್ 23ರವರೆಗೆ ಬ್ರಿಟನ್‌ನಿಂದ ಭಾರತಕ್ಕೆ ಬಂದ ಸುಮಾರು 33 ಸಾವಿರ ಜನರಲ್ಲಿ 114 ಮಂದಿಗೆ ಪಾಸಿಟಿವ್ ಬಂದಿದೆ.

ಯಾರಿಗೆ ಸೋಂಕು ಕಾಣಿಸಿಕೊಂಡಿತ್ತೋ ಅವರನ್ನು ಅಲ್ಲಿನ ಸರ್ಕಾರಗಳೇ ಚಿಕಿತ್ಸೆಗೊಳಪಡಿಸಿ ಕೇಂದ್ರ ಸರ್ಕಾರಕ್ಕೆ ಮಾಹಿತಿ ನೀಡಿದ್ದರು. ಬ್ರಿಟನ್‌ನಿಂದ ಬಂದವರಿಗೆ ಸೋಂಕು ಕಾಣಿಸಿಕೊಂಡರೆ ಸ್ಥಳೀಯ ಸರ್ಕಾರಗಳು ಮಾಧ್ಯಮಗಳಿಗೆ ಮಾಹಿತಿ ನೀಡಬಾರದು. ಕೇಂದ್ರ ಸರ್ಕಾರವೇ ಇದನ್ನು ಬಹಿರಂಗಪಡಿಸಲಿದೆ ಎಂದು ಸೂಚನೆ ಕೊಟ್ಟಿತ್ತು .

ಕಳೆದ ಹತ್ತು ದಿನಗಳಿಂದ ಬ್ರಿಟನ್‌ನಲ್ಲಿ ಹೊಸ ಮಾದರಿಯ ರೂಪಾಂತರಿ ಸೋಂಕು ಕಾಣಿಸಿಕೊಂಡಿರುವುದು ವಿಶ್ವವನ್ನೇ ಬೆಚ್ಚಿಬೀಳಿಸಿದೆ. ಈಗಾಗಲೇ ಕೋವಿಡ್-19 ನಿಯಂತ್ರಣಕ್ಕೆ ಬರುತ್ತಿರುವಾಗಲೇ ಹೊಸದಾಗಿ ಸೋಂಕು ಕಾಣಿಸುತ್ತಿರುವುದು ಮತ್ತಷ್ಟು ಆತಂಕ ಸೃಷ್ಟಿಸಿದೆ.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

# ಯೋಚಿಸಿಲ್ಲ

ಜನವರಿ ತಿಂಗಳಿಗೆ ಕೋವಿಡ್-19ಕ್ಕೆ ಲಸಿಕೆ ಲಭ್ಯವಾಗುವುದರಿಂದ ಜನರು ಆತಂಕಪಡುವ ಅಗತ್ಯವಿಲ್ಲ. ಇದು 2ನೇ ರೂಪಾಂತರಗೊಂಡ ಸೋಂಕು ಆಗಿರುವುದರಿಂದ ಅಷ್ಟೊಂದು ಪರಿಣಾಮ ಬೀರುವುದಿಲ್ಲ. ಹೀಗಾಗಿ ರಾಜ್ಯದಲ್ಲಿ ಪುನಃ ಲಾಕ್‌ಡೌನ್ ಅಥವಾ ಸೀಲ್‌ಡೌನ್ ಮಾಡುವುದಿಲ್ಲ ಎಂದು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ನಾವು ಸೋಂಕು ಒಬ್ಬರಿಂದ ಒಬ್ಬರಿಗೆ ಹರಡುವುದನ್ನು ತಡೆಗಟ್ಟಲು ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದೇವೆ. ಸಾರ್ವಜನಿಕರು ಅನಗತ್ಯವಾಗಿ ವದಂತಿಗಳಿಗೆ ಕಿವಿಗೊಡಬಾರದು. ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕೆಂದು ಮನವಿ ಮಾಡಿದರು.

ಈಗಾಗಲೇ ನಿಗದಿಯಾಗಿರುವಂತೆ ಜ.1ರಿಂದ 10ನೇ ಮತ್ತು ದ್ವಿತೀಯ ಪಿಯುಸಿ ತರಗತಿಗಳು ಆರಂಭವಾಗಲಿವೆ. 6 ಮತ್ತು 9ನೇ ತರಗತಿಗೆ ವಿದ್ಯಾಗಮ ತರಗತಿಗಳು ಕೂಡ ಪ್ರಾರಂಭವಾಗಲಿವೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಸ್ಪಷ್ಟಪಡಿಸಿದರು.

ಕಠಿಣ ಕ್ರಮದ ಎಚ್ಚರಿಕೆ: ಬ್ರಿಟನ್‌ನಿಂದ ಕರ್ನಾಟಕಕ್ಕೆ ಆಗಮಿಸಿ ಕೋವಿಡ್ ಟೆಸ್ಟ್‌ಗೆ ಒಳಗಾಗದೆ ತಲೆಮರೆಸಿಕೊಂಡಿರುವವರು ಎಲ್ಲೇ ಇದ್ದರೂ ತಕ್ಷಣವೇ ಚಿಕಿತ್ಸೆಗೆ ಒಳಪಡಬೇಕು. ನೀವು ಈ ರೀತಿಯಾಗಿ ಮೊಬೈಲ್‌ಗಳನ್ನು ಸ್ವಿಚ್ ಆಫ್ ಮಾಡಿಕೊಂಡು ಕಣ್ಮರೆಯಾದರೆ ಒಬ್ಬರಿಂದ ಒಬ್ಬರಿಗೆ ಸೋಂಕು ಹರಡಬಹುದು. ತಕ್ಷಣವೇ ಪರೀಕ್ಷೆಗೊಳಪಡಿ ಎಂದು ಮನವಿ ಮಾಡಿದರು. ಈಗಾಗಲೇ ಗೃಹ ಇಲಾಖೆ ಅಧಿಕಾರಿಗಳ ಜೊತೆ ನಾನು ಮಾತುಕತೆ ನಡೆಸಿದ್ದೇನೆ. 48 ಗಂಟೆಗಳ ಒಳಗೆ ಪತ್ತೆ ಮಾಡುವುದಾಗಿ ಹೇಳಿದ್ದಾರೆ. ನಿಮಗೆ ಎಲ್ಲಿ ಬೇಕೊ ಅಲ್ಲಿ ಚಿಕಿತ್ಸೆ ಕೊಡಿಸುತ್ತೇವೆ. ಒಂದು ವೇಳೆ ಯಥಾಸ್ಥಿತಿ ಮುಂದುವರಿಸಿದರೆ ಕಾನೂನು ಕ್ರಮ ಕೈಗೊಳ್ಳುವುದು ಅನಿವಾರ್ಯ ಎಂದು ಸ್ಪಷ್ಟಪಡಿಸಿದರು.

ಬ್ರಿಟನ್‌ನಿಂದ ಬಂದ 1614 ಮಂದಿಗೂ ಕೋವಿಡ್ ಟೆಸ್ಟ್‌ಗೊಳಪಡಿಸಲಾಗಿತ್ತು. ಇವರಲ್ಲಿ 26 ಜನರಿಗೆ ಪಾಸಿಟಿವ್ ಕಾಣಿಸಿಕೊಂಡಿದೆ. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂದು ಬಿಡುಗಡೆ ಮಾಡಿರುವ ವರದಿಯಲ್ಲಿ ಬ್ರಿಟನ್ ಮಾದರಿಯ ಸೋಂಕು ರಾಜ್ಯದ ಮೂವರಿಗೆ ಕಾಣಿಸಿಕೊಂಡಿದೆ ಎಂದು ಮಾಹಿತಿ ನೀಡಿದರು.

26 ಮಂದಿಯನ್ನು ಈಗಾಗಲೇ ಐಸೋಲೇಟ್ ಮಾಡಲಾಗಿದ್ದು, ಅವರಿಗೆ ಚಿಕಿತ್ಸೆ ಮುಂದುವರೆದಿದೆ.ವಿಮಾನದಲ್ಲಿ ಬಂದಿರುವ ಸಹ ಪ್ರಯಾಣಿಕರಾಗಿ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕದಲ್ಲಿರುವವರನ್ನು ಸಹ ಪತ್ತೆಹಚ್ಚಬೇಕಾಗುತ್ತದೆ. ಪ್ರಯಾಣಿಕರ ವಿವರಗಳನ್ನು ನೀಡಬೇಕೆಂದು ನಾಗರಿಕ ವಿಮಾನಯಾನ ಇಲಾಖೆಗೂ ಮನವಿ ಮಾಡಿದ್ದೇವೆ. ಸದ್ಯಕ್ಕೆ ಯಾರೊಬ್ಬರೂ ಆತಂಕಪಡುವ ಅಗತ್ಯವಿಲ್ಲ. ಎಲ್ಲವೂ ನಿಯಂತ್ರಣದಲ್ಲಿದ್ದು, ಸೋಂಕು ಹರಡದಂತೆ ಏನು ಕ್ರಮ ಕೈಗೊಳ್ಳಬೇಕೋ ಎಲ್ಲವನ್ನೂ ತೆಗೆದುಕೊಂಡಿದ್ದೇವೆ.

ಇಂದು ಅಧಿಕಾರಿಗಳು, ತಜ್ಞರು ಮತ್ತು ಕೋವಿಡ್ ಸಲಹಾ ಸಮಿತಿ ಜತೆ ಮತ್ತೊಮ್ಮೆ ಸಭೆ ನಡೆಸಲಿದ್ದೇವೆ ಎಂದು ಹೇಳಿದರು.

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

# ಬೆಂಗಳೂರು ಜನರೇ ಹುಷಾರ್..

**ಬೆಂಗಳೂರು,ಡಿ.29-** ಬೆಂಗಳೂರು ನಗರದಲ್ಲಿ ಮೂವರಿಗೆ ಬ್ರಿಟನ್‌ನ ರೂಪಾಂತರಗೊಂಡಿರುವ ಕೊರೊನಾ ಸೋಂಕು ದೃಢಪಟ್ಟಿರುವ ಹಿನ್ನೆಲೆಯಲ್ಲಿ ತೀವ್ರ ಆತಂಕ ಉಂಟಾಗಿದೆ.

ಬೊಮ್ಮನಹಳ್ಳಿ ವಲಯದ ವಸಂತಪುರದ ತಾಯಿ-ಮಗಳು ಹಾಗೂ ಜೆಪಿನಗರದ 34 ವರ್ಷದ ವ್ಯಕ್ತಿಗೆ ಬ್ರಿಟನ್ ಕೊರೊನಾ ಇರುವುದು ಜೆನಿಟಿಕ್ ವರದಿಯಲ್ಲಿ ಸಾಬೀತಾಗಿದೆ. ಈ ಮೂವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಿ 28 ದಿನಗಳ ಕಾಲ ಅಗತ್ಯ ಚಿಕಿತ್ಸೆ ನೀಡಲಾಗುತ್ತದೆ. ...ಪುಟ 2

## ಜನರೇ ಹುಷಾರ್..

ತಾಯಿ-ಮಗಳ ಜೊತೆ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕ ಹೊಂದಿದ್ದ ವಸಂತಪುರದ ಅಪಾರ್ಟ್‌ಮೆಂಟ್‌ನ 37 ನಿವಾಸಿಗಳನ್ನು ನಗರದ ಎರಡು ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಅಲ್ಲದೆ ಇಡೀ ಅಪಾರ್ಟ್‌ಮೆಂಟ್ ಸೀಲ್‌ಡೌನ್ ಮಾಡಲಾಗಿದೆ.

ಎರಡು ವಾರಗಳ ಕಾಲ ಇವರ ಮೇಲೆ ಆರೋಗ್ಯ ಇಲಾಖೆ ನಿಗಾ ವಹಿಸಲಿದೆ. ಅಪಾರ್ಟ್‌ಮೆಂಟ್‌ನ್ನು ಸಂಪೂರ್ಣ ಸ್ಯಾನಿಟೈಸ್ ಮಾಡಿ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ.

ಈ ಎಲ್ಲರ ಗಂಟಲು ದ್ರವ ಪರೀಕ್ಷೆ ಮಾಡಿದ್ದು, ಎಲ್ಲರ ವರದಿ ನೆಗೆಟಿವ್ ಬಂದಿದೆ. ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲರನ್ನೂ ಖಾಸಗಿ ಆಸ್ಪತ್ರೆಯಲ್ಲಿಟ್ಟು 14 ದಿನಗಳ ಕಾಲ ಚಿಕಿತ್ಸೆ ನೀಡಲಾಗುತ್ತದೆ.

ಈ ಅವಧಿಯಲ್ಲಿ ಮತ್ತೆ ಸೋಂಕು ಕಾಣಿಸಿಕೊಂಡರೆ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಿ 28 ದಿನಗಳ ಕಾಲ ಚಿಕಿತ್ಸೆ ನೀಡಲಾಗುವುದು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಜೆಪಿನಗರದ 34 ವರ್ಷದ ವ್ಯಕ್ತಿಗೆ ಬ್ರಿಟನ್ ಕೊರೊನಾ ಇರುವುದು ಕಂಡುಬಂದಿದ್ದು, ಇವರನ್ನು ಕೂಡ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಇವರ ಜೊತೆ ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕದಲ್ಲಿದ್ದವರನ್ನು ಪತ್ತೆಹಚ್ಚುವ ಕಾರ್ಯ ನಡೆಯುತ್ತಿದ್ದು, ಸಂಪರ್ಕಿತರಲ್ಲಿ ಸೋಂಕು ಕಂಡುಬಂದರೆ ಅವರನ್ನು ಕೂಡ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಒಟ್ಟಾರೆ ಬ್ರಿಟನ್ ಕೊರೊನಾ ಬೆಂಗಳೂರಿನಲ್ಲಿ ಮೂವರಿಗೆ ಇರುವುದು ದೃಢಪಡುತ್ತಿದ್ದಂತೆ ಆತಂಕ ಹೆಚ್ಚಾಗಿದೆ. ವಸಂತಪುರದ ಅಪಾರ್ಟ್‌ಮೆಂಟ್‌ನ್ನು ಸಂಪೂರ್ಣ ಸೀಲ್‌ಡೌನ್ ಮಾಡಲಾಗಿದೆ. ಸೋಂಕಿತ ತಾಯಿ-ಮಗಳು ಜೊತೆ ಸಂಪರ್ಕದಲ್ಲಿದ್ದ ಅಪಾರ್ಟ್‌ಮೆಂಟ್ 37 ಮಂದಿಯನ್ನು ವಿವಿಧ ಆಸ್ಪತ್ರೆಗೆ ಕಳುಹಿಸಲಾಗಿದೆ.

ಬ್ರಿಟನ್ ಕೊರೊನಾ ಸೋಂಕು ಕಾಣಿಸಿಕೊಂಡಿರುವುದು ದೃಢಪಡುತ್ತಿದ್ದಂತೆ ಅಪಾರ್ಟ್‌ಮೆಂಟ್‌ನ ನಿವಾಸಿಗಳಲ್ಲಿ ಆತಂಕ ಹೆಚ್ಚಾಗಿತ್ತು . ಕೆಲವರು ಆಸ್ಪತ್ರೆಗೆ ತೆರಳಲು ಹಿಂದೇಟು ಹಾಕುತ್ತಿದ್ದರು. ಸಂಪೂರ್ಣ ಸೀಲ್‌ಡೌನ್ ಮಾಡಿ ಅಲ್ಲಿಯೇ ಕ್ವಾರಂಟೇನ್ ಮಾಡಲು ಬಿಬಿಂಪಿ ಕ್ರಮ ಕೈಗೊಂಡಿದೆ.

ರೂಪಾಂತರಗೊಂಡ ಕೊರೊನಾ ಸೋಂಕಿತರಿಗೆ 28 ದಿನಗಳ ಕಾಲ ಚಿಕಿತ್ಸೆ ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಸಾಮಾನ್ಯ ಕೊರೊನಾ ಸೋಂಕಿತರ ಜೊತೆಗೆ ಚಿಕಿತ್ಸೆ ನೀಡದೆ ಅವರನ್ನು ಪ್ರತ್ಯೇಕವಾಗಿರಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಬ್ರಿಟನ್‌ನಿಂದ ಬಂದವರಲ್ಲಿ ಸಾಮಾನ್ಯ ಕೊರೊನಾ ಕಾಣಿಸಿಕೊಂಡರೆ 14 ದಿನಗಳ ಕಾಲ ಚಿಕಿತ್ಸೆ ನೀಡಲು ನಿರ್ಧಾರ ಮಾಡಲಾಗಿದೆ. ಡಿ.1ರಿಂದ 21ರವರೆಗೆ ಬ್ರಿಟನ್‌ನಿಂದ ಒಟ್ಟು 1594 ಮಂದಿ ಬೆಂಗಳೂರಿಗೆ ವಾಪಸ್ಸಾಗಿದ್ದಾರೆ. ಈ ಪೈಕಿ ಬಿಬಿಎಂಪಿ 1380 ಮಂದಿಯನ್ನು ಪತ್ತೆಹಚ್ಚಿ 1234 ಮಂದಿಯನ್ನು ಕೋವಿಡ್ ಪರೀಕ್ಷೆಗೊಳಪಡಿಸಿದೆ.

915 ಮಂದಿಗೆ ಕೋವಿಡ್ ಪರೀಕ್ಷಾ ವರದಿ ನೆಗೆಟಿವ್ ಎಂದು ದೃಢಪಟ್ಟಿದೆ. ಇನ್ನು 303 ಮಂದಿಯ ವರದಿ ಬರಬೇಕಿದೆ.

# ರಾಜಕಾಲುವೆ ಕಾಮಗಾರಿ ಪರಿಶೀಲಿಸಿದ ಜೆಪಿ



**ಕೆಆರ್ ಪುರ, ಡಿ.29-** ನೀರು ಸರಾಗವಾಗಿ ಹರಿಯುವಂತೆ ಕಾಮಗಾರಿ ಮಾಡಿ ಎಂದು ಪಾಲಿಕೆ ಮಾಜಿ ಸದಸ್ಯ ಜಯಪ್ರಕಾಶ್ ತಿಳಿಸಿದರು.

ಕೆಆರ್ ಪುರ ಕ್ಷೇತ್ರದ ಬಸವನಪುರ ವಾರ್ಡ್‌ನಲ್ಲಿ ನಡೆಯುತ್ತಿರುವ ರಾಜಕಾಲುವೆ ಕಾಮಗಾರಿಯನ್ನು ಪರಿಶೀಲನೆ ನಡೆಸಿ ಅವರು ಮಾತನಾಡಿದರು.

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜರವರು ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸಮನಾಗಿ ಅನುದಾನ ನೀಡಿದ್ದು ಗುಣಮಟ್ಟದ ಕಾಮಗಾರಿ ಮಾಡಿ ಎಂದು ಗುತ್ತಿಗೆದಾರರಿಗೆ ಸೂಚಿಸಿದರು.

ಕೊರೊನಾ ಸಂದರ್ಭದಲ್ಲಿ ಸಾರ್ವಜನಿಕರು ನಿರ್ಲಕ್ಷ್ಯ ವಹಿಸದೆ ಸಾಮಾಜಿಕ ಅಂತರ ಕಾಯ್ದುಕೊಂಡು ಮಾಸ್ಕ್ ಅನ್ನು ಕಡ್ಡಾಯವಾಗಿ ಧರಿಸಿ ಎಂದು ಹೇಳಿದರು.

ಸ್ಥಳೀಯರು ಸಹಕರಿಸಿ ಗುಣಮಟ್ಟದ ಕಾಮಗಾರಿ ನಡೆಯುವಂತೆ ಸ್ಥಳೀಯರು ನೋಡಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಧಿಕಾರಿಗಳು,

ಸಮಸ್ತ ಕನ್ನಡಿಗರ ನಂ.1 ಸಂಜೆ ದಿನಪತ್ರಿಕೆ
ಈ ಸಂಜೆ

## ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ

## ಎಂಜಿ ರಸ್ತೆ ಹಾಗೂ ಮೇಲ್ಸೇತುವೆಗಳ ಮೇಲೆ

# ಸಂಚಾರ ನಿಷೇಧ

**ಬೆಂಗಳೂರು, ಡಿ.29-** ಎಂಜಿ ರಸ್ತೆ ಹಾಗೂ ಸುತ್ತಮುತ್ತಲ ಪ್ರಮುಖ ರಸ್ತೆಗಳಲ್ಲಿ ಹೊಸ ವರ್ಷಾಚರಣೆ ನಡೆಯುವ ಸಾಧ್ಯತೆ ಇರುವುದರಿಂದ ಅದನ್ನು ತಡೆಯಲು ಸಂಚಾರ ನಿಷೇಧ ಮಾಡಲಾಗಿದ್ದು, ಜತೆಗೆ ನಗರದಾದ್ಯಂತ ಇರುವ ಎಲ್ಲ ಮೇಲ್ಸೇತುವೆಗಳ ಮೇಲೂ ಸಂಚಾರವನ್ನು ನಿರ್ಬಂಧಿಸಿ ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ಆದೇಶ ಹೊರಡಿಸಿದ್ದಾರೆ.

ಎಂಜಿ ರಸ್ತೆ, ಬ್ರಿಗೇಡ್ ರಸ್ತೆ, ರೆಸಿಡೆನ್ಸಿ ರಸ್ತೆ, ಸೆಂಟ್ ಮಾರ್ಕ್ಸ್ ರಸ್ತೆ, ಚರ್ಚ್‌ಸ್ಟ್ರೀಟ್‌ಗಳಲ್ಲಿ ಜನರು ಗುಂಪು ಸೇರುವ ಸಾಧ್ಯತೆಗಳಿವೆ. ಹಾಗಾಗಿ ಅನಿಲ್‌ಕುಂಬ್ಳೆ ವೃತ್ತದಿಂದ ಮೆಯೋಹಾಲ್ ಬಳಿಯ ರೆಸಿಡೆನ್ಸಿ ರಸ್ತೆ ಜಂಕ್ಷನ್‌ವರೆಗೆ ರಸ್ತೆಯ ಎರಡೂ ಕಡೆ ಕಾವೇರಿ ಎಂಪೋರಿಯಂನಿಂದ ಅಪೇರಾ ಜಂಕ್ಷನ್‌ವರೆಗೆ, ಬ್ರಿಗೇಡ್ ರಸ್ತೆ ಜಂಕ್ಷನ್‌ನಿಂದ ಮ್ಯೂಜಿಯಂ ರಸ್ತೆ ಜಂಕ್ಷನ್‌ವರೆಗೆ, ಎಂಜಿ ರಸ್ತೆ ಜಂಕ್ಷನ್‌ನಿಂದ ಹಳೆ ಪೋಸ್ಟ್ ಆಫೀಸ್ ಜಂಕ್ಷನ್‌ವರೆಗೆ, ರೆಸ್ಟ್‌ಹೌಸ್ ಪಾರ್ಕ್ ರಸ್ತೆಯ ಮ್ಯೂಜಿಯಂ ರಸ್ತೆ ಜಂಕ್ಷನ್‌ನಿಂದ ಬ್ರಿಗೇಡ್ ರಸ್ತೆ ಜಂಕ್ಷನ್‌ವರೆಗೆ ಮತ್ತು ಚರ್ಚ್‌ಸ್ಟ್ರೀಟ್ ರಸ್ತೆವರೆಗೆ, ರೆಸಿಡೆನ್ಸಿ ರಸ್ತೆಯ ಆಶೀರ್ವಾದಂ ಜಂಕ್ಷನ್‌ನಿಂದ ಮೇಯೋಹಾಲ್ ಜಂಕ್ಷನ್ ವರೆಗೆ ತುರ್ತು ವಾಹನ ಹಾಗೂ ಕರ್ತವ್ಯನಿರತ ವಾಹನಗಳನ್ನು ಹೊರತುಪಡಿಸಿ ಉಳಿದ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿದೆ ಮತ್ತು ಈ ಭಾಗದಲ್ಲಿ ವಾಹನಗಳ ಪಾರ್ಕಿಂಗ್ ಕೂಡ ನಿಷೇಧಿಸಲಾಗಿದೆ.

ನಿಷೇಧಿತ ಮಾರ್ಗಗಳಿಗೆ ಪರ್ಯಾಯವಾಗಿ ಸುಗಮ ಸಂಚಾರಕ್ಕೆ ಕೆಲವು ರಸ್ತೆಗಳನ್ನು ನಗರ ಪೊಲೀಸರು ಗುರುತಿಸಿದ್ದಾರೆ. ಗುರುತಿಸಿದ ಮಾರ್ಗಗಳಲ್ಲಿ ಡಿ.31ರ ರಾತ್ರಿ 10 ಗಂಟೆಯಿಂದ ಜನವರಿ 1ರವರೆಗೂ ಪರ್ಯಾಯ ರಸ್ತೆಗಳನ್ನು ಬಳಸಬಹುದಾಗಿದೆ.

ಕ್ವೀನ್ಸ್ ರಸ್ತೆಯಿಂದ ಹಲಸೂರು ಹಾಗೂ ಇನ್ನು ಮುಂದಕ್ಕೆ ಹೋಗುವ ವಾಹನಗಳ ಚಾಲಕರು ಅನಿಲ್‌ಕುಂಬ್ಳೆ ವೃತ್ತದಲ್ಲಿ ಎಡ ತಿರುವು ಪಡೆದು ಸೆಂಟ್ರಲ್ ಸ್ಟ್ರೀಟ್ ಬಿಆರ್‌ವಿ ಜಂಕ್ಷನ್ ಬಲ ತಿರುವು ಪಡೆದು ಕಬ್ಬನ್ ರಸ್ತೆ ಮೂಲಕ ವೆಬ್ಸ್ ಜಂಕ್ಷನ್ ಬಳಿ ಎಂಜಿ ರಸ್ತೆ ಸೇರಿ ಮುಂದೆ ಸಂಚರಿಸಬಹುದು.

ಟ್ರಿನಿಟಿ ವೃತ್ತದ ಕಡೆಯಿಂದ ಬರುವ ವಾಹನಗಳು ವೆಬ್‌ಜಂಕ್ಷನ್ ಬಳಿ ಬಲ ತಿರುವು ಪಡೆದು ಮಣಿಪಾಲ್ ಸೆಂಟರ್ ಬಳಿ ಎಡ ತಿರುವು ಪಡೆದು ಕಬ್ಬನ್ ರಸ್ತೆಯಲ್ಲಿ ಮುಂದೆ ಸಾಗಬಹುದು. ಹಲಸೂರು ಕಡೆಯಿಂದ ಕಂಟೋನ್ಮೆಂಟ್ ಕಡೆಗಳಿಗೆ ಹೋಗುವ ವಾಹನಗಳು ಟ್ರಿನಿಟಿ ವೃತ್ತದಲ್ಲಿ ಬಲ ತಿರುವು ಪಡೆದು ಹಲಸೂರು ರಸ್ತೆ ಡಿಕಂಕ್ಷನ್ ರಸ್ತೆ ಮಾರ್ಗವಾಗಿ ಕಬ್ಬನ್ ರಸ್ತೆ ಸೇರಿ ಮುಂದೆ ಸಾಗಬಹುದು.

ಕ್ಯಾಷ್ ಫಾರ್ಮಸಿ ಹಾಗೂ ಹಳೆ ಪಿಎಸ್ ಜಂಕ್ಷನ್ ಕಡೆಯಿಂದ ಬರುವ ವಾಹನಗಳು ಆಶೀರ್ವಾದಂ ವೃತ್ತದ ಮೂಲಕ ಹಲಸೂರು ಮತ್ತು ಹೊಸೂರು ರಸ್ತೆ ಕಡೆ ಹೋಗುವ ವಾಹನಗಳನ್ನು ಆಶೀರ್ವಾದಂ ವೃತ್ತದ ಬಳಿ ನಿರ್ಬಂಧಿಸಿದ್ದು, ಸದರಿ ವಾಹನಗಳು ಮ್ಯೂಜಿಯಂ ರಸ್ತೆ, ಎಸ್‌ಬಿಐ ಜಂಕ್ಷನ್, ಸೆಂಟ್‌ಮಾರ್ಕ್ ರಸ್ತೆ, ಅನಿಲ್ ಕುಂಬ್ಳೆ ವೃತ್ತ, ಬಿಆರ್‌ವಿ ಜಂಕ್ಷನ್, ಕಬ್ಬನ್ ರಸ್ತೆ ಮೂಲಕ ಮುಂದೆ ಸಾಗಬಹುದು ಎಂದು ನಗರ ಪೊಲೀಸ್ ಆಯುಕ್ತ ಕಮಲ್‌ಪಂಥ್ ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಜತೆಗೆ ಮಡಿವಾಳ, ಎಲೆಕ್ಟ್ರಾನಿಕ್ ಸಿಟಿ, ಮೈಕೊ ಲೇಔಟ್‌ನ ಜಯದೇವ, ಬೆಂಗಳೂರು ಡೈರಿ ಮೇಲ್ಸೇತುವೆಗಳು, ವಿಮಾನ ನಿಲ್ದಾಣದ ದೇವರ ಬೀಸನಹಳ್ಳಿ ಮೇಲ್ಸೇತುವೆ, ವೈಟ್‌ಫೀಲ್ಡ್‌ನ ಕಾಡುಗೋಡಿ, ಬೆಳತ್ತೂರು ಸರ್ಜಾಪುರ ಮೇಲ್ಸೇತುವೆಗಳು, ಎಚ್‌ಎಸ್‌ಆರ್ ಲೇಔಟ್‌ನ ಅಗರ, ಇಬ್ಬಲೂರು, ಬೆಳಂದೂರು, 14ನೆ ಮುಖ್ಯರಸ್ತೆ ಮೇಲ್ಸೇತುವೆಗಳು, ಹಲಸೂರಿನ ಇಂದಿರಾನಗರ 100 ಅಡಿ ರಸ್ತೆ, ದೊಮ್ಮಲೂರು ಮೇಲ್ಸೇತುವೆ, ಕೆಆರ್ ಪುರಂನ ಎಂಎಂ ಟೆಂಪಲ್ ಕೇಬಲ್ ಬ್ರಿಡ್ಜ್, ಹೊರವರ್ತುಲ ಎಂಡಿ ಪುರ ಬ್ರಿಡ್ಜ್, ದೊಡ್ಡನೆಕ್ಕುಂದಿ ಬ್ರಿಡ್ಜ್, ಮೇಡಹಳ್ಳಿ ಬ್ರಿಡ್ಜ್, ಪುಲಕೇಶಿನಗರದ ಐಟಿಸಿ ಮೇಲ್ಸೇತುವೆ, ಲಿಂಗರಾಜಪುರ ಮೇಲ್ಸೇತುವೆ, ಬಾಣಸವಾಡಿ, ಅಶೋಕನಗರ, ವಿಲ್ಸನ್ ಗಾರ್ಡನ್, ಆಡುಗೋಡಿ, ಉಪ್ಪಾರಪೇಟೆ, ಚಿಕ್ಕಪೇಟೆ, ಬ್ಯಾಟರಾಯನಪುರ, ಕಾಮಾಕ್ಷಿಪಾಳ್ಯ, ವಿವಿ ಪುರಂ, ಬಸವನಗುಡಿ, ಜಯನಗರ, ಬನಶಂಕರಿ, ರಾಜಾಜಿನಗರ, ಮಲ್ಲೇಶ್ವರಂ, ಯಶವಂತಪುರ, ಪೀಣ್ಯ, ಕೆಂಗೇರಿ, ಆರ್‌ಟಿ ನಗರ, ಹೆಬ್ಬಾಳ, ಚಿಕ್ಕಜಾಲ ಪೊಲೀಸ್ ಠಾಣೆಗಳಲ್ಲಿ ಬರುವ ಮೇಲ್ಸೇತುವೆಗಳ ಮೇಲೆ ವಾಹನ ಸಂಚಾರವನ್ನು ಸಂಪೂರ್ಣ ನಿಷೇಧಿಸಲಾಗಿದೆ ಎಂದು ತಿಳಿಸಿದ್ದಾರೆ.